
# ಜಾನಪದ ಜಗತ್ತು

೧೯೮೪



ಡಾ|| ಕೆ.ಆರ್. ಸಂಧ್ಯಾ ರೆಡ್ಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

# ಜಾನಪದ ವರ್ಷ

## ೧೯೯೪

ಡಾ|| ಕೆ.ಆರ್. ಸಂಧ್ಯಾ ರೆಡ್ಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

**JANAPADA VARSHA : 1994** - A Survey of folklore Works published during 1994, by Dr. K.R. Sandhya Reddy, Published by Karnataka Janapada and Yakshagana Academy, Nrupatunga Road, Bangalore- 560 002 Pages VI + 42
Price Rs 25/=

First Impression : 1996

© ಲೇಖಕರು

**ಪ್ರಕಾಶಕರು**
ಎಂ. ಎಸ್ ಸಿದ್ದೇಗೌಡ
ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು- ೫೬೦ ೦೦೨

ಬೆಲೆ: ಇಪ್ಪತ್ತೈದು ರೂಪಾಯಿಗಳು

**ಛಾಯಾಕ್ಷರ ಜೋಡಣೆ :**
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ : 3402575

**ಮುದ್ರಕರು :**
ಸ್ನೇಹಾ ಪ್ರಿಂಟರ್ಸ್
೨೨, ೨ನೇ ಮೈನ್, ಅತ್ತಿಗುಪ್ಪೆ
ವಿಜಯನಗರ ೨ನೇ ಹಂತ
ಬೆಂಗಳೂರು - ೫೬೦ ೦೪೦ ✆ : 3302417

# ಅಧ್ಯಕ್ಷರ ಮಾತು

ಕರ್ನಾಟಕ ಅಪಾರ ಜಾನಪದ ಸಂಪತ್ತಿನ ಸಮೃದ್ಧಗಣಿ ಎಂಬ ಮಾತು ಈಗಾಗಲೇ ಸಂದೇಹಕ್ಕೆ ಎಡೆ ಇಲ್ಲದಂತೆ ಸಾಬೀತಾಗಿದೆ. ಜನಪದ ಹಾಡು, ಕತೆ, ಗಾದೆ ಮುಂತಾದವುಗಳು ಭಾಷೆ, ಲಯ, ಗೇಯತೆ, ಕಥನ ವೈಶಿಷ್ಟ್ಯ, ಕಲ್ಪನಾಶೀಲತೆ, ಚಾತುರ್ಯ, ವಿಶಿಷ್ಟ ಜೀವನ ದೃಷ್ಟಿ- ಮುಂತಾದವುಗಳಿಂದ ಆಕರ್ಷಿತರಾಗಿ ಹಿರಿಯ ತಲೆಮಾರಿನ ಜಾನಪದ ವಿದ್ವಾಂಸರು ಒಂದು ಬಗೆಯ ಪ್ರೀತಿ ಮತ್ತು ಮುಗ್ಧ ಕುತೂಹಲಗಳಿಂದ ಜಾನಪದ ಸಾಹಿತ್ಯವನ್ನು ಸಂಗ್ರಹ ಮಾಡತೊಡಗಿದರು. ಸುಮಾರು ಐದು ದಶಕಗಳಿಗೂ ಮೀರಿ ಇಂತಹ ಸಂಗ್ರಹ ಅಧಿಕವಾಗುತ್ತಲೆ ಬಂದು, ಈಗ ಸಂಗ್ರಹದ ಹಂತವನ್ನು ದಾಟಿ ಅಧ್ಯಯನ, ವಿಶ್ಲೇಷಣೆ, ವಿಮರ್ಶೆ, ಸಂಶೋಧನೆಗಳ ಹಂತಕ್ಕೆ ಮತ್ತು ಅನ್ಯಜ್ಞಾನ ಶಿಸ್ತುಗಳ ಜೊತೆಯಲ್ಲಿ ಜಾನಪದವನ್ನು ತೌಲನಿಕವಾಗಿ ತೂಗಿ ನೋಡುವ ಪ್ರವೃತ್ತಿ ವೈಚಾರಿಕ ಹಂತಕ್ಕೆ ತಲುಪಿದೆ. ಇದರಿಂದಾಗಿ ಜಾನಪದ ಕ್ಷೇತ್ರದಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳ ಸಂಖ್ಯೆಯೂ ಹೆಚ್ಚುತ್ತಲಿದೆ. ವಿದ್ಯಾರ್ಥಿಗಳು, ಅಧ್ಯಾಪಕರು, ಖಾಸಗಿ ಆಸಕ್ತರು, ಸಂಶೋಧಕರು, ಅನ್ಯ ಶಿಸ್ತುಗಳ ವಿದ್ವಜ್ಜನರು ಈ ಕ್ಷೇತ್ರದಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಪುಸ್ತಕಗಳನ್ನು ಹೊರತರುತ್ತಿದ್ದಾರೆ. ನಾಡಿನ ಎಲ್ಲೆಡೆ ಜಾನಪದ ಜಾಗೃತಿ ಅತ್ಯಂತ ಆರೋಗ್ಯಕರವಾಗಿ ಪ್ರಕಟವಾಗುತ್ತಿದೆ. ಆದರೆ ಬೇರೆ ಬೇರೆ ಹಂತಗಳಲ್ಲಿ ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳ ಸಂಖ್ಯೆ ಏನು? ಪ್ರಕಾರಗಳಾವುವು? ಗುಣಮಟ್ಟವೇನು ? ಎಂಬುದರ ಖಚಿತ ಮಾಹಿತಿ ಜಾನಪದ ಆಸಕ್ತರಿಗೆ ನಿಖರವಾಗಿ ದೊರೆಯುತ್ತಿಲ್ಲ. ಪ್ರಕಟವಾಗುತ್ತಿರುವ ಜಾನಪದ ಗ್ರಂಥಗಳಲ್ಲಿ ಕಾವ್ಯ, ಕತೆ, ಕ್ಷೇತ್ರ ಕಾರ್ಯ ಅನುಭವ ವಿಚಾರ, ಸಮೀಕ್ಷೆ, ಪರಿಚಯ, ವಿಚಾರಗೋಷ್ಠಿಗಳ ಪ್ರಬಂಧಗಳು, ಲೇಖನ ಸಂಗ್ರಹಗಳು, ಸಂಪ್ರದಾಯ, ಕ್ರೀಡೆ, ಜಾತ್ರೆ, ಹಬ್ಬ-ಹರಿದಿನಗಳಿಗೆ ಸಂಬಂಧಿಸಿದ ಕೃತಿಗಳು ಸಾಕಷ್ಟು ಪ್ರಮಾಣದಲ್ಲಿ ಇವೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನ ಒಂದು ಹೊಸ ಆಯಾಮಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ಜಾನಪದ ಜಗತ್ತಿನ ಲಿಖಿತ ಚಟುವಟಿಕೆಗಳ ಮಾಹಿತಿಯನ್ನು ಒಂದೆಡೆ ಕಲೆಹಾಕುವುದು ಅತ್ಯಗತ್ಯವಾಗಿದೆ. ಜಾನಪದ ಅಕಾಡೆಮಿ ಈಗಾಗಲೆ ***ಜಾನಪದ ಗಂಗೋತ್ರಿ*** ಮತ್ತು ***ಜನಪದ***ಗಳೆಂಬ ಜಾನಪದ ಲೇಖನಗಳ ಸಂಗ್ರಹಗಳನ್ನು ಪ್ರಕಟಿಸುತ್ತಿದೆ. ಆದರೆ ಇಡೀ ವರ್ಷದಲ್ಲಿ ಪ್ರಕಟವಾಗುವ

ಎಲ್ಲ ಬಗೆಯ ಜಾನಪದ ಕೃತಿ ಸಮೂಹದ ಪರಿಚಯ, ವಿಶ್ಲೇಷಣೆ ಮತ್ತು ಮೌಲ್ಯಮಾಪನಗಳು ಒಟ್ಟಾರೆಯಾಗಿ ನಡೆಯುತ್ತಿಲ್ಲ. ಈ ನಿಟ್ಟಿನ ಕೊರತೆಯನ್ನು ತುಂಬುವ ಸಲುವಾಗಿ ಅಕಾಡೆಮಿ ಈ ವರ್ಷದಿಂದ ಆಯಾ ವರ್ಷದಲ್ಲಿ ಪ್ರಕಟವಾಗುವ ಜಾನಪದ ಕೃತಿಗಳ ಬಗೆಗಿನ ಮಾಹಿತಿಯನ್ನು ***ಜಾನಪದ ವರ್ಷ*** ಎಂಬ ಹೆಸರಿನಲ್ಲಿ ಪ್ರಕಟಿಸಲು ಯೋಚಿಸಿದೆ. ಈ ದಿಸೆಯಲ್ಲಿ ***ಜಾನಪದ ವರ್ಷ ೮೪*** ಒಂದು ಆರಂಭಿಕ ಸತ್ಪ್ರಯತ್ನ.

***ಜಾನಪದ ವರ್ಷ ೧೯೮೪*** ಈ ಕೃತಿಯನ್ನು ನಮ್ಮ ಮಹಿಳಾ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಡಾ॥ ಕೆ. ಆರ್. ಸಂಧ್ಯಾ ರೆಡ್ಡಿ ಇವರು ಸಿದ್ಧಪಡಿಸಿದ್ದಾರೆ. ಆಯಾ ವರ್ಷದಲ್ಲಿ ಪ್ರಕಟವಾಗುವ ಪುಸ್ತಕಗಳ ಎಲ್ಲ ಮಾಹಿತಿಯ ಕೊರತೆ ಇರುವ ಸಂದರ್ಭದಲ್ಲೂ ೮೪ರಲ್ಲಿ ಪ್ರಕಟವಾಗಿರುವ ಜಾನಪದ ಕೃತಿಗಳ ಒಟ್ಟಾರೆ ಸಮೀಕ್ಷೆಯನ್ನು ಈ ಮೂಲಕ ಅವರು ಪ್ರಸ್ತುತಪಡಿಸಿದ್ದಾರೆ. ೮೪ರಲ್ಲಿ ಪ್ರಕಟವಾಗಿರುವ ಎಲ್ಲ ಕೃತಿಗಳ ಮಾಹಿತಿ ಇಲ್ಲಿ ಲಭ್ಯವಾಗಿದೆ ಎಂದು ಹೇಳಲಾಗದಿದ್ದರೂ ಮುಖ್ಯ ಕೃತಿಗಳನ್ನಾದರೂ ಪರಿಚಯಿಸುವ, ವಿಮರ್ಶಿಸುವ, ಪ್ರಾಮಾಣಿಕ ಪ್ರಯತ್ನವನ್ನು ಡಾ॥ ಸಂಧ್ಯಾ ರೆಡ್ಡಿ ಈ ಮೂಲಕ ಮಾಡಿದ್ದಾರೆ. ಅವರ ಈ ಪ್ರಥಮ ಪ್ರಯತ್ನದಲ್ಲಿ ಅವರ ಪ್ರಾಮಾಣಿಕ ಆಸಕ್ತಿ, ವಿಸ್ತಾರವಾದ ಓದು ನಿಷ್ಪಕ್ಷಪಾತವಾದ ಸಮೀಕ್ಷಾ ಕೌಶಲ್ಯ ಮತ್ತು ಜಾನಪದದ ಬಗೆಗಿನ ಆಳವಾದ ಅರಿವು ಎದ್ದು ಕಾಣುತ್ತವೆ. ಇಂತಹದೊಂದು ಪುಸ್ತಕವನ್ನು ಅಕಾಡೆಮಿಗಾಗಿ ಸಿದ್ಧಮಾಡಿಕೊಟ್ಟ ಡಾ॥ ಸಂಧ್ಯಾ ರೆಡ್ಡಿ ಅವರಿಗೆ ಅಕಾಡೆಮಿ ಪರವಾಗಿ ಹಾರ್ದಿಕ ಕೃತಜ್ಞತೆಗಳು. ಈ ಕೃತಿಯ ಜೊತೆಯಲ್ಲಿಯೇ ***ಜಾನಪದ ವರ್ಷ ೮೫*** ಅಚ್ಚಿನ ಮನೆಯಲ್ಲಿದೆ. ಜಾನಪದ ವರ್ಷ ೮೬ ಸಿದ್ಧಗೊಳ್ಳುತ್ತಿದೆ. ಮುಂಬರುವ ಈ ಕೃತಿಗಳಲ್ಲಿ ಕರ್ನಾಟಕ ಜಾನಪದದ ಲಿಖಿತ ಚಟುವಟಿಕೆಗಳ ಬಹುಪಾಲು ಮಾಹಿತಿ ದೊರೆಯುವುದೆಂದು ಆಶಿಸಲಾಗಿದೆ. ಜಾನಪದ ಆಸಕ್ತರು ಈ ಕೃತಿಗಳು ಮತ್ತಷ್ಟು ಮೈದುಂಬಿಕೊಳ್ಳುವಂತೆ ಸಲಹೆ-ಸೂಚನೆಗಳನ್ನು ನೀಡುವರೆಂದು ನಾನು ನಂಬಿದ್ದೇನೆ. ಈ ಕೃತಿಯನ್ನು ಸುಂದರವಾಗಿ ಅಚ್ಚುಮಾಡಿಕೊಟ್ಟ ಸ್ನೇಹಾ ಪ್ರಿಂಟರ್ಸ್ ಅವರಿಗೆ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಡಾ॥ ಎಚ್. ಜೆ. ಲಕ್ಕಪ್ಪಗೌಡ**
ಅಧ್ಯಕ್ಷರು

# ಜಾನಪದ ವರ್ಷ
# ೧೯೮೪
# ಸಮೀಕ್ಷೆ

ಕರ್ನಾಟಕದಲ್ಲಿ ಜಾನಪದ ಅಧ್ಯಯನವನ್ನು ಕುರಿತಾದ ಜಾಗೃತಿ ಸುಮಾರು ಮೂರು ದಶಕಗಳಿಂದಲೂ ಏಕಪ್ರಕಾರವಾಗಿ ಹೆಚ್ಚುತ್ತಲೇ ಬಂದಿದೆ. ಇದರ ಫಲವಾಗಿ ಜಾನಪದವು ಒಳಗೊಳ್ಳುವಂತಹ ಹೊಸಹೊಸ ಅಂಶಗಳು ಬೆಳಕಿಗೆ ಬರುವುದು ಸಾಧ್ಯವಾಗಿದೆ.

ಜಾನಪದ ಅಧ್ಯಯನದಲ್ಲಿ ತೊಡಗಿಕೊಂಡಿರುವ ಆಸಕ್ತರನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮೊದಲನೆಯ ಗುಂಪಿನವರು, ವಿಶ್ವವಿದ್ಯಾಲಯಗಳಲ್ಲಿ ಜಾನಪದವನ್ನು ಅಭ್ಯಾಸ ಮಾಡಿ ಅಧ್ಯಯನದ ಶಿಸ್ತನ್ನು ಅರಿತುಕೊಂಡು ಕೆಲಸ ಮಾಡುವವರಾಗಿದ್ದಾರೆ. ಇನ್ನೊಂದು ಗುಂಪಿನವರು ಜಾನಪದಕ್ಕೆ ಸಿಗುತ್ತಿರುವ ಪ್ರಚಾರದಿಂದ ಆಕರ್ಷಿತರಾಗಿ ಅದರಲ್ಲಿ ತೊಡಗಿಕೊಂಡಂಥವರು.

ಈ ವರ್ಷವೂ ಸಾಕಷ್ಟು ಪುಸ್ತಕಗಳು ಬೆಳಕು ಕಂಡಿವೆ. ಸುಮಾರು ನಲವತ್ತು ಪುಸ್ತಕಗಳು ಪ್ರಕಟವಾಗಿವೆ. ಇದರಲ್ಲಿ ನೇರ ಓದಿಗೆ ಸಿಕ್ಕ ಪುಸ್ತಕಗಳ ಸಂಖ್ಯೆ ಸುಮಾರು ಇಪ್ಪತ್ನಾಲ್ಕು. ಉಳಿದ ಆರೇಳು ಪುಸ್ತಕಗಳು ಸಿಗಲಿಲ್ಲವಾದರೂ ಅವುಗಳ ಮಾಹಿತಿ ಒಂದೆಡೆ ಲಭ್ಯವಾಗಲಿ ಎಂಬ ದೃಷ್ಟಿಯಿಂದ ಅವುಗಳ ಬಗ್ಗೆ ಪತ್ರಿಕೆಗಳಲ್ಲಿ ಬಂದ ವಿಮರ್ಶೆಗಳನ್ನು ಪ್ರಸ್ತುತ ಸಮೀಕ್ಷೆಯಲ್ಲಿ ಕೊಡಲಾಗಿದೆ.

ಪ್ರಕಟವಾಗಿರುವ ಗ್ರಂಥಗಳನ್ನು ನೋಡಿದರೆ ಹೊಸಬರು ಉತ್ಸಾಹದಿಂದ ಈ ಕ್ಷೇತ್ರದಲ್ಲಿ ತೊಡಗಿಕೊಳ್ಳುತ್ತಿರುವುದು ಹಾಗೂ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಜಾನಪದದ ಬಗ್ಗೆ ಸಮಾನವಾದ ಆಸಕ್ತಿ ವ್ಯಕ್ತವಾಗುತ್ತಿರುವುದು ಎದ್ದು ಕಾಣುತ್ತದೆ. ಸಂಗ್ರಹ ಕಾರ್ಯದ ಜೊತೆಗೆ, ಸಂಗ್ರಹಿಸಿದ್ದನ್ನು ವಿಶ್ಲೇಷಿಸುವ ಪ್ರಯತ್ನಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಿರುವುದು ಗಮನಾರ್ಹ. ಕೇವಲ ಸಂಗ್ರಹಕ್ಕಾಗೇ ಮೀಸಲಾದ ಕೃತಿಗಳ ಸಂಖ್ಯೆ ಕಡಿಮೆಯೇ ಎನ್ನಬಹುದು. ಜಾನಪದ ಅಧ್ಯಯನದ ಆರಂಭ ದಿನಗಳಲ್ಲಿ ಸಂಗ್ರಹವೇ ಮುಖ್ಯ ಉದ್ದೇಶವಾಗಿರುತ್ತಿತ್ತು. ವಿಶ್ಲೇಷಣೆಯೆಂದರೆ

ಅದು ಸಾಹಿತ್ಯಿಕ ವಿಶ್ಲೇಷಣೆ ಮಾತ್ರ ಆಗಿರುತ್ತಿತ್ತು. ಈಗಿನ ವಿಶ್ಲೇಷಣೆಗಳಲ್ಲಿ ತೌಲನಿಕ ಹಾಗೂ ಅಂತರ್‌ಶಿಸ್ತೀಯ ದೃಷ್ಟಿಗಳು ಕಂಡುಬರುತ್ತವೆ. ಒಂದು ಪ್ರದೇಶದ ಜಾನಪದ ಸಾಮಗ್ರಿಗೆ ಅನ್ವಯಿಸಿದಂತೆ ಹೇಳುವ ಮಾತುಗಳು ಎಲ್ಲ ಪ್ರದೇಶಗಳ ಜಾನಪದಗಳಿಗೂ ಅದೇ ರೀತಿ ಅನ್ವಯಿಸುತ್ತವೆ ಎಂಬ ತಪ್ಪು ದೃಷ್ಟಿ ಈಗ ದೂರವಾಗುತ್ತಿರುವುದು ಸಮಾಧಾನ ತರುವ ಸಂಗತಿ.

ಜಾನಪದದ ಬಗ್ಗೆ ಖಚಿತ ಕಲ್ಪನೆ ಮೂಡುವ ಮೊದಲು ನಡೆದ ಜನಪದ ಸಾಹಿತ್ಯ ಸಂಗ್ರಹಗಳಲ್ಲಿ ಶಾಸ್ತ್ರೀಯ ದೃಷ್ಟಿ ಇಲ್ಲದಿದ್ದರೂ ಜನಪದ ಸಾಹಿತ್ಯದ ಶ್ರೀಮಂತಿಕೆ, ವೈವಿಧ್ಯ, ಆಳ ವಿಸ್ತಾರಗಳನ್ನು ತೆರೆದು ತೋರಿಸುವ ದೃಷ್ಟಿಯಿಂದ ಅವು ಇಂದಿಗೂ ಉತ್ತಮ ಆಕರಗಳಾಗಿವೆ. ಆದರೆ ಈಚಿನ ದಿನಗಳಲ್ಲಿ ಪ್ರಕಟವಾಗುತ್ತಿರುವ ಗ್ರಂಥಗಳಲ್ಲಿ ಸ್ವಲ್ಪ ಮಟ್ಟಿನ ಶಾಸ್ತ್ರೀಯತೆ ಇದೆಯಾದರೂ ಮೂಲಮಾದರಿಗಳಿಗಿಂತ ಹೊಸತಾದ್ದನ್ನು ಸಂಗ್ರಹಿಸುವ ಪ್ರಯತ್ನಗಳು ಇನ್ನೂ ಹೆಚ್ಚು ಪ್ರಮಾಣದಲ್ಲಿ ನಡೆಯಬೇಕು. ಕಥಾಕ್ಷೇತ್ರದಲ್ಲಿ ಮಾತ್ರವೇ ಅಂತಹ ಒಂದು ಉತ್ತಮ ಪ್ರಯತ್ನ ಕಾಣುತ್ತದೆ. ಗಾದೆ, ಒಗಟು, ರಂಗಭೂಮಿಯ ಸಾಹಿತ್ಯ, ಬುಡಕಟ್ಟು ಜನರ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಸಂಗ್ರಹಕಾರ್ಯ ಹೆಚ್ಚು ನಡೆದಿಲ್ಲ. ಸಂಗ್ರಹ ಕಾರ್ಯವೆಂದರೆ ಯಾರು ಬೇಕಾದರೂ ಸಲೀಸಾಗಿ ಕೈಹಾಕಬಹುದಾದ ಕೆಲಸ ಎಂಬ ಭಾವನೆ ಇನ್ನೂ ಇದೆ. ಬಹುತೇಕ ಸಂಗ್ರಹಗಳು ಜನಪದ ಸಾಹಿತ್ಯದ ವಿವಿಧ ಮುಖಗಳ ಅಧ್ಯಯನಕ್ಕೆ ಅಗತ್ಯವಾಗುವ ಪೂರಕ ಮಾಹಿತಿಯನ್ನು ಕೊಡಲು ವಿಫಲವಾಗಿವೆ. ಈ ಪರಿಸ್ಥಿತಿ ಸುಧಾರಿಸಬೇಕಾದರೆ ಜಾನಪದವನ್ನು ಗಂಭೀರವಾಗಿ ಪರಿಗಣಿಸುವ ಸನ್ನಿವೇಶ ನಿರ್ಮಾಣವಾಗಬೇಕು. ಸಂಗ್ರಹಣೆಗೆ ಸರಿಯಾದ ತಳಹದಿ ಹಾಕಿಕೊಡುವುದು ಅಗತ್ಯ. ಸಂಗ್ರಹ ಕಾರ್ಯದಲ್ಲಿ ಎರಡು ರೀತಿಯ ಕಾಳಜಿಗಳು ಬೇಕಾಗುತ್ತವೆ. ಒಂದು, ಈಗಾಗಲೇ ಅಳಿದು ಹೋಗುತ್ತಿರುವ ಜನಪದ ಸಾಹಿತ್ಯವನ್ನು ಯಾವ ರೀತಿ ಸಂಗ್ರಹಿಸಬೇಕು ಎನ್ನುವುದು; ಇಲ್ಲಿ ನಾವು ಗುರುತಿಸುವ ಮುನ್ನವೇ ಅಳಿದು ಹೋಗುತ್ತಿರುವ ಪ್ರಕಾರಗಳನ್ನು ಆದಷ್ಟು ಬೇಗ ಸಂಗ್ರಹಿಸುವುದು ಅಗತ್ಯವಾಗುತ್ತದೆ. ಎರಡನೆಯದು, ಇದುವರೆಗೆ ಜಾನಪದದ ಸಾಂಪ್ರದಾಯಿಕ ಪರಿಕಲ್ಪನೆಯ ಕಾರಣವಾಗಿ ನಮ್ಮಿಂದ ಅಲಕ್ಷಿತವಾಗಿ ಉಳಿದಿರುವಂತಹ ಆಧುನಿಕ ಜನಪದ ಸಾಹಿತ್ಯ ರೂಪಗಳ ಅಧ್ಯಯನ.

**ಜನಪದ ಕಾವ್ಯ**

ಜನಪದ ಸಾಹಿತ್ಯದಲ್ಲಿ ಜನಪದ ಗೀತೆ, ಕಾವ್ಯಗಳಿಗೆ ಸಂಬಂಧಿಸಿದಂತೆಯೇ ಹೆಚ್ಚು ಸಂಗ್ರಹಕಾರ್ಯ ನಡೆದಿರುವುದಾದರೂ ಇಲ್ಲಿ ಇನ್ನೂ ಸಂಗ್ರಹಿಸಬೇಕಾಗಿರುವುದು ನಮ್ಮ ಊಹೆಗೂ ನಿಲುಕದಷ್ಟು ಹೆಚ್ಚಿನ ಪ್ರಮಾಣದಲ್ಲಿದೆ ಎಂಬುದು ವಾಸ್ತವ. ೧೯೯೪ರಲ್ಲಿ ಪ್ರಕಟವಾಗಿರುವ 'ಏಳೂರು ದೇವರ ಕಾಳಗ' ಇಂಥ ಒಂದು ಸೂಚನೆಯನ್ನು ಕೊಡುತ್ತದೆ.

'ಏಳೂರು ದೇವರ ಕಾಳಗ' ನಿಜಕ್ಕೂ ಒಂದು ಅಪೂರ್ವ ಕಾವ್ಯ. ರಾಜಪ್ಪ ದಳವಾಯಿಯವರು ಸಂಗ್ರಹಿಸಿರುವ ಇದು ಒಂದು ಐತಿಹಾಸಿಕ ವೀರಕಾವ್ಯ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಶಿವನಿಯ ಸುತ್ತಮುತ್ತಲ ಪ್ರಾಂತದ ಕುರುಬರಲ್ಲಿ ಪ್ರಚಲಿತವಿರುವ ಈ ಕಾವ್ಯವನ್ನು ಜನಪದರು ಕಾಳಗದ ಪದ ಎಂದೇ ಕರೆಯುತ್ತಾರೆ. ಕಾವ್ಯದ ಕೊನೆಯಲ್ಲಿ ಶರಣು ಹೇಳುವಾಗ 'ತಾಳೀಕಟ್ಟೆ ಹಿರಿಯಯ್ಯನ ಕಾಳುಗವೇ ಮುಗುದಾವು' ಎಂದು ನಿರೂಪಕ ಹೇಳುವ ಸಾಲಿನಲ್ಲಿ ಈ ಕಾವ್ಯದ ಶೀರ್ಷಿಕೆ ವ್ಯಕ್ತವಾಗಿದೆ. ಸುಮಾರು ಐದುನೂರಕ್ಕೂ ಹೆಚ್ಚು ತ್ರಿಪದಿ ಹಾಗೂ ದ್ವಿಪದಿ ಮಿಶ್ರಿತವಾದ ಈ ಕಾವ್ಯವನ್ನು ವಿವಿಧ ಮಟ್ಟುಗಳಲ್ಲಿ ನಿರೂಪಿಸುತ್ತಾರಂತೆ. ಶುದ್ಧ ಜಾನಪದೀಯವಾದ ಈ ಸುದೀರ್ಘ ಕಾವ್ಯವನ್ನು ಹೆಂಗಸರೇ ಹಾಡಿರುವುದು ಗಮನಾರ್ಹ.

ತಾಳೀಕಟ್ಟೆ ಹಿರಿಯಯ್ಯನ ಒಕ್ಕಲೊಂದು ಚೆನ್ನಗಿರಿ ಆಚೆಗಿರುವ ಆನವೇರಿಗೆ ಚದುರಿ ಹೋಗಿರುವಾಗ ಆ ಒಕ್ಕಲನ್ನು ಕರೆತರಲೆಂಬ ಅಪ್ಪಣೆ ಪಡೆದುಕೊಂಡು ಹೋದ ಬೆಸಮಗ ತಿಮ್ಮಣ್ಣ ಎಂಬುವನು ಒಕ್ಕಲ ಹಿರಿಯನ ತಲೆಯನ್ನೇ ಕತ್ತರಿಸಿ ತರುತ್ತಾನೆ. ಇದು, ಗಡಿನಾಡ ವ್ಯಾಜ್ಯವನ್ನು ಕೆಣಕಿದಂತಾಗುತ್ತದೆ. ಪಂಚಾಯಿತಿ ಸಂದರ್ಭದಲ್ಲಿ, ಒಕ್ಕಲಿಗೆ ಪಟ್ಟು ಹಿಡಿದ ಹಿರಿಯಯ್ಯನ ಕೆನ್ನೆಯನ್ನು ವಿರೋಧಿ ಒಕ್ಕಲಿನವ ಕಡಿದಾಗ, ಹಿರಿಯಯ್ಯನ ಏಳು ತಮ್ಮಂದಿರೂ ಒಂದಾಗಿ ಆನವೇರಿ ಸಿದ್ದಯ್ಯನ ವಿರುದ್ಧ ಕಾಳಗ ಹೂಡಿ, ಅವನ ಸೊಕ್ಕು ಮುರಿದು, ಚೆದುರಿ ಹೋದ ಒಕ್ಕಲನ್ನು ಮೂಲನೆಲೆಗೆ ತಂದು ಸೇರಿಸುವುದರೊಂದಿಗೆ ಕಥೆ ಮುಗಿಯುತ್ತದೆ. ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು ಈ ಮೂರು ಜಿಲ್ಲೆಗಳಲ್ಲಿನ ಪ್ರಾದೇಶಿಕ ವ್ಯಾಪ್ತಿಯೊಂದಿಗೆ ತಾಳೀಕಟ್ಟೆ, ಆನವೇರಿ, ದುಮ್ಮಿ, ಶಿವುನಿ, ಈರಾಪುರ, ಬ್ಯಾಲನೂರು ಮೊದಲಾದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಊರುಗಳ ಪ್ರಸಕ್ತಿಯನ್ನೂ ಹಾಗೂ ಬ್ಯಾಲನ ಕುರುಬರು, ಸಾವಂತನವರು, ಹಾಲನ ಕುರುಬರು, ಕಪ್ಪಿನ ಕುರುಬರು, ಗಂಡುಗೊಲದವರು ಇವೇ ಮೊದಲಾದ ಹತ್ತೆಂಟು ವಿವಿಧ ಒಕ್ಕಲುಗಳನ್ನು ಒಳಗೊಳ್ಳುವ ಈ ಕಾವ್ಯದಲ್ಲಿ ವಿವರಗಳ ಬಹುಳತೆಯಿಂದಾಗಿ ಕಥಾಸರಣಿಯನ್ನು ಅನುಸರಿಸುವುದು ಪ್ರಯಾಸವೇ ಹೌದು. ಆದಾಗ್ಯೂ ಇಲ್ಲಿ ಸಾಹಿತ್ಯಿಕವಾಗಿ ಸುಂದರವೆನಿಸುವ ಅನೇಕ ವರ್ಣನೆಗಳಿವೆ. ವೀರಪುರುಷರ ಪರಾಕ್ರಮ ಹಾಗೂ ಹೋರಾಟದ ವರ್ಣನೆಗಳು ತುಂಬ ಪರಿಣಾಮಕಾರಿಯಾಗಿವೆ.

ಇಂಥ ಜಾನಪದೀಯ ಕಾವ್ಯವೊಂದರ ಅಧ್ಯಯನಕ್ಕೆ ಅತ್ಯಗತ್ಯವಾಗಿ ಬೇಕಾದ ಭೌಗೋಳಿಕ ನಕ್ಷೆ, ಸ್ಥಳಗಳ ಪರಿಚಯ, ಊರಿನ ಹೆಸರುಗಳ ಪಟ್ಟಿ, ಕುರುಬರ ಒಕ್ಕಲುಗಳ ಪಟ್ಟಿ, ಕಾವ್ಯದಲ್ಲಿ ಉಲ್ಲೇಖಗೊಂಡಿರುವ ವಿಶಿಷ್ಟ ಸಂಪ್ರದಾಯ ಹಾಗೂ ಆಚರಣೆಗಳನ್ನು ಕುರಿತ ಟಿಪ್ಪಣಿ, ಪದಗಳ ಅರ್ಥ, ವಕ್ತೃ ವಿವರ ಇವೆಲ್ಲವನ್ನೂ ರಾಜಪ್ಪ ದಳವಾಯಿಯವರು ತುಂಬ ಜವಾಬ್ದಾರಿಯಿಂದ ನೀಡಿದ್ದಾರೆ.

ಕನ್ನಡದಲ್ಲಿ ಜನಾಂಗದ ಮೂಲ ಹಾಗೂ ಸಾಂಸ್ಕೃತಿಕ ವೀರರನ್ನು ಕುರಿತ ಕಾವ್ಯಗಳು ಬಹು ವ್ಯವಸ್ಥಿತವಾಗಿ ರೂಪುಗೊಂಡು ಇನ್ನೂ ಜೀವಂತವಾಗಿ ಪ್ರಚಲಿತವಿರುವುದು ಕುರುಬ ಜನಾಂಗದಲ್ಲಿ ಮಾತ್ರವೇ ಇರಬೇಕು ಅನ್ನಿಸುತ್ತದೆ. ಈ ಜನಾಂಗದ ಆಚರಣೆ, ಸಂಪ್ರದಾಯ, ದೇವರು, ಉತ್ಸವಗಳು, ಕಲೆಗಳು ಇತ್ಯಾದಿಯನ್ನು ಕುರಿತಂತೆಯೂ ಈಗಾಗಲೇ ಸಾಕಷ್ಟು ಜಾನಪದ ಲಭ್ಯವಾಗಿದೆ. ಪ್ರಸ್ತುತ ಏಳೂರು ದೇವರ ಕಾಳಗ ಈ ಸಾಮಗ್ರಿಗೆ ಹೊಸ ಸೇರ್ಪಡೆ. ಈ ಜನಾಂಗದಲ್ಲಿ ಬೆಳಕಿಗೆ ಬಾರದಿರುವ ಇನ್ನೂ ಅಪಾರವಾದ ಜಾನಪದವಿರುವ ಸಾಧ್ಯತೆಯನ್ನು ದಳವಾಯಿಯವರ ಪ್ರಯತ್ನ ಸೂಚಿಸುತ್ತಿದೆ. ಅಪೂರ್ವ ಕಾವ್ಯವನ್ನು ಬೆಳಕಿಗೆ ತಂದ ದಳವಾಯಿಯವರು ಅಭಿನಂದನಾರ್ಹರು.

'ದೇವರಿಗೆ ಶರಣೆನ್ನುವೆನೇ' ಎಂಬ ಶೀರ್ಷಿಕೆಯ ಹಲವು ಡೊಳ್ಳು ಪದಗಳ ಒಂದು ಸಂಕಲನವನ್ನು ಕಮಲ ಹೆಮ್ಮಿಗೆಯವರು ಪ್ರಕಟಿಸಿದ್ದಾರೆ. ಡೊಳ್ಳಿನ ಪದಗಳು ಕನ್ನಡ ಜನಪದ ಸಾಹಿತ್ಯದ ಒಂದು ಪ್ರಮುಖ ಭಾಗ. ಕುರುಬ ಜನಾಂಗದವರು ಮುಖ್ಯವಾಗಿ ಈ ಹಾಡುಗಳ ಸೃಷ್ಟಿಕರ್ತರು. ಈ ಜನಾಂಗದ ಭಕ್ತರು ಡೊಳ್ಳು ಎಂಬ ಭಾರೀ ಚರ್ಮ ವಾದ್ಯವನ್ನು ಬಡಿಯುತ್ತ ತಮ್ಮ ಆರಾಧ್ಯ ದೇವರುಗಳನ್ನು, ಸಾಂಸ್ಕೃತಿಕ ಮೂಲ ಪುರುಷರನ್ನೂ ಸ್ತುತಿಸುವ ಗೀತೆಗಳನ್ನು ಹಾಡುತ್ತಾರೆ. ಡೊಳ್ಳು ಬಾರಿಸುತ್ತ, ಅದರ ಲಯಕ್ಕೆ ತಕ್ಕಂತೆ ಕುಣಿಯುತ್ತ ಹೇಳುವ ಈ ಹಾಡುಗಳಲ್ಲಿ ಉತ್ಸಾಹ ಆವೇಶಗಳು ಹೆಚ್ಚು, ಸಾಹಿತ್ಯಿಕಾಂಶ ಕಡಿಮೆ. ಇವು ಪ್ರಧಾನವಾಗಿ ಗಂಡಸರ ಹಾಡುಗಳು. ಮೊದಮೊದಲು ಮತ ಪುರುಷರಿಗೆ, ಮತ ವಿಚಾರಗಳಿಗಷ್ಟೇ ಸೀಮಿತವಾಗಿದ್ದ ಈ ಹಾಡುಗಳು ಕ್ರಮೇಣ ಇತರ ಪೌರಾಣಿಕ ಕಥೆಗಳನ್ನೂ, ಚಾರಿತ್ರಿಕ ಸಂಗತಿಗಳನ್ನೂ ವಸ್ತುವಾಗಿ ಸ್ವೀಕರಿಸಿವೆ. ಹೀಗಾಗಿ ಇವುಗಳಲ್ಲಿ ಕಿರಾತಾರ್ಜುನ ಪ್ರಸಂಗ, ಹನುಮಾರ್ಜುನರ ಪಣ, ದಶರಥನ ಬಾಣಕ್ಕೆ ಗುರಿಯಾದ ಶ್ರವಣಕುಮಾರನ ಕಥೆ, ಇವೇ ಮೊದಲಾದ ರಾಮಾಯಣ, ಮಹಾಭಾರತ ಮೂಲದಿಂದಾಯ್ದ ಕಥೆಗಳೂ, ಸಂಗೊಳ್ಳಿ ರಾಯಣ್ಣನಂಥ ಚಾರಿತ್ರಿಕ ವೀರ, ಶಿಶುನಾಳ ಶರೀಫರಂಥ ಅನುಭಾವಿ ಸಂತರ ಬದುಕಿನ ಘಟನೆಗಳೂ ಈ ಹಾಡುಗಳ ವಸ್ತುವಾಗಿವೆ. ಜೊತೆಗೆ ಹಾಲುಮತವೆಂದು ಕರೆಯಲಾಗುವ ಕುರುಬ ಜನಾಂಗದ ಹುಟ್ಟು, ವೃತ್ತಿಯನ್ನ ನಿರೂಪಿಸುವ ಸೃಷ್ಟಿಯ ಹಾಡುಗಳೂ ಇವೆ. ಶಿವಮಹಿಮೆ, ಲಿಂಗಮಹಿಮೆ, ದ್ಯಾಮವ್ವ, ಲಕ್ಕವ್ವ ಮೊದಲಾದ ಗ್ರಾಮದೇವತೆಗಳ ಮಹಿಮೆಯನ್ನ ನಿರೂಪಿಸುವ ಹಾಡುಗಳಲ್ಲಿ ಅನುಭಾವದ ಸ್ಪರ್ಶವಿದೆ. ಬಹುತೇಕ ಹಾಡುಗಳಲ್ಲಿ ಭಕ್ತಿ ಹಾಗೂ ಆಧ್ಯಾತ್ಮಿಕತೆಯ ಸ್ಪರ್ಶವಿರುವುದು ಗಮನಿಸಬೇಕಾದ ಅಂಶ. ಆಶುಕವಿತ್ವದ ಮಾದರಿಯಲ್ಲಿ ಜನಪದ ಹಾಡುಗಾರರು ಇವುಗಳನ್ನು ನಿರಂತರ ಸೃಷ್ಟಿಸುತ್ತಲೇ ಇರುವಂತೆ ತೋರುತ್ತದೆ. ಶಿಷ್ಟ ಪುರಾಣಗಳಿಂದ, ಚಾರಿತ್ರಿಕ

ಸಂಗತಿಗಳಿಂದ ಹಾಡಿಗೆ ವಸ್ತುವನ್ನು ಆಯ್ದುಕೊಂಡು ತಮ್ಮ ಭಾಷೆ ಅನುಭವದಲ್ಲಿ ಬೆಳಸುವ ವಿಶಿಷ್ಟ ಪ್ರಕ್ರಿಯೆಯನ್ನು ಇಲ್ಲಿ ಗುರುತಿಸಬಹುದು. ಕಮಲ ಹೆಮ್ಮಿಗೆಯವರ ಪ್ರಸ್ತುತ ಸಂಗ್ರಹ ಈ ಎಲ್ಲ ವೈವಿಧ್ಯಮಯ ಹಾಡುಗಳನ್ನು ಒಳಗೊಂಡಿದೆ. ಮೊದಲೇ ಹೇಳಿದಂತೆ ಇವುಗಳಲ್ಲಿ ಸಾಹಿತ್ಯಿಕಾಂಶ ಕಡಿಮೆಯಾದ್ದರಿಂದ ಓದಿಕೊಂಡು ಹೋಗುವುದು ನೀರಸವೆನಿಸುತ್ತದೆ. ಹೂವು, ಸೃಷ್ಟಿ ಹುಟ್ಟಿದ ರೀತಿ, ಒಳಗಿಟ್ಟು ಸಲವು ....... ಮುಂತಾದ ಕೆಲವೇ ಕೆಲವು ಗೀತೆಗಳು ಅನುಭಾವದ ಸ್ಪರ್ಶದೊಂದಿಗೆ ಸುಂದರವಾದ ಭಾವಗೀತೆಗಳಂತಿವೆ. ಡೊಳ್ಳುಪದಗಳ ಧಾಟಿ, ಮೇಳದ ಸ್ವರೂಪ, ಈ ಕಲೆಯ ಶ್ರೀಮಂತಿಕೆ ಮೊದಲಾದ ವಿಷಯಗಳ ಬಗ್ಗೆ ಪ್ರಸ್ತುತ ಸಂಕಲನ ಹೆಚ್ಚು ಬೆಳಕು ಚೆಲ್ಲುವುದಿಲ್ಲ. ಸಾಂಸ್ಕೃತಿಕ ದೃಷ್ಟಿಯಿಂದ ಹಾಗೂ ಒಂದು ಕಲೆ ಎಂಬ ದೃಷ್ಟಿಯಿಂದ ಈ ಹಾಡುಗಳ ಬಗ್ಗೆ ಗಂಭೀರವಾದ ಕ್ಷೇತ್ರ ಕಾರ್ಯ ನಡೆಯಬೇಕಾಗಿತ್ತು. ಈ ಹಿನ್ನೆಲೆಯಿಲ್ಲದೆ ಪ್ರಸ್ತುತ ಸಂಕಲನ ಪೇಲವವಾಗಿ ಕಾಣುತ್ತದೆ.

ಜಯಶ್ರೀ ಗುತ್ತಲ ಅವರು 'ಜನಪದ ಮಂಗಳ ಗೀತೆಗಳು' ಎಂಬ ಸಂಗ್ರಹದಲ್ಲಿ ಕೆಲವು ಗೀತೆಗಳ ಸಂಗ್ರಹ ಕೊಟ್ಟಿದ್ದಾರೆ. ಇದರಲ್ಲಿ ದೈವಸ್ತುತಿಯ ಹಾಡುಗಳ ಜೊತೆಗೆ ಮದುವೆಯ ಶಾಸ್ತ್ರದ ಹಾಡುಗಳು, ವಿವಿಧ ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳೂ ಸೇರಿವೆ. ಮುಖ್ಯವಾಗಿ ದೇವತಾಸ್ತುತಿಯ ಹಾಡುಗಳಲ್ಲಿ ಬನಶಂಕರಿ, ಪಂಡರಪುರ ವಿಠೋಬ, ಎಲ್ಲಮ್ಮ ಇವೇ ಮೊದಲಾದ ಉತ್ತರ ಕರ್ನಾಟಕದ ಕೆಲವು ದೈವಗಳಿಗೆ ಸಂಬಂಧಿಸಿದ ಹಾಡುಗಳಿವೆ. ಈ ಹಾಡುಗಳು ಗ್ರಾಮೀಣ ಭಾಷೆಯಲ್ಲಿರದೆ ಶಿಷ್ಟ ಭಾಷೆಯಲ್ಲಿವೆ. ನಮ್ಮಲ್ಲಿ ಬ್ರಾಹ್ಮಣಿಯ ಹಾಡುಗಳು ಹೇಗೋ ಹಾಗೆ ಇಲ್ಲಿಯ ವಿವರಗಳು, ಬಾಷೆ, ಭಾವನೆ, ಕಲ್ಪನೆ ಎಲ್ಲವೂ ಶಿಷ್ಟ. ಕೆಲವು ಗೀತೆಗಳು ಶುದ್ಧ ಅರ್ಥದಲ್ಲಿ ಜಾನಪದೀಯವಲ್ಲ. ಕಿತ್ತೂರು ಚೆನ್ನಮ್ಮ, ಸಿಂಧೂರ ಲಕ್ಷ್ಮಣ ಇಂಥ ಚಾರಿತ್ರಿಕ ಪದಗಳೂ ಇಲ್ಲಿವೆ. ಜಾನಪದ ಅಧ್ಯಯನ ತುಂಬಾ ಶಾಸ್ತ್ರೀಯವಾಗಿ ನಡೆಯುತ್ತಿರುವ ಈ ಕಾಲದಲ್ಲಿ ಗಂಭೀರ ಕ್ಷೇತ್ರಕಾರ್ಯ ಮಾಡದೆ ಪ್ರಕಟವಾಗಿರುವ ಈ ಸಂಕಲನ ತೀರಾ ಕಳಪೆಯಾಗಿದೆ.

ಜಯಲಕ್ಷ್ಮಿ ಸೀತಾಪುರ ಅವರು ನಮ್ಮ ಸುತ್ತಿನ ಜನಪದ ಕಥನ ಗೀತೆಗಳು ಎಂಬ ಕಥನ ಗೀತೆಗಳ ಸಂಗ್ರಹ ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಜನಪದ ಕಥನ ಗೀತೆಗಳ ಸಾಕಷ್ಟು ಸಂಗ್ರಹಗಳು ಬಂದಿವೆ. ಬಯಲು ಸೀಮೆಯ ಎಲ್ಲ ಕಡೆಯೂ ಅಲ್ಪ ಸ್ವಲ್ಪ ಪಾಠಾಂತರಗಳೊಂದಿಗೆ ಒಂದೇ ರೀತಿಯ ಕಥಾವಸ್ತುವಿರುವ ಕಥನಗೀತೆಗಳೇ ಸಿಗುತ್ತವೆ. ಆದರೂ ಸಹ ಅವುಗಳನ್ನೆಲ್ಲಾ ಸಂಗ್ರಹಿಸುವ ಅಗತ್ಯವಿದೆ. ಪಾಠಾಂತರಗಳ ಅಧ್ಯಯನ ಹಾಗೂ ಪ್ರಾದೇಶಿಕ, ಸಾಂಸ್ಕೃತಿಕ ವ್ಯತ್ಯಾಸಗಳನ್ನು ಅರಿಯಲು ಇದು ಮುಖ್ಯ. ಪ್ರಸ್ತುತ ಸಂಗ್ರಹದಲ್ಲಿ ಮೈಸೂರು ಜಿಲ್ಲೆಯ ಪಾಂಡವಪುರ

ತಾಲೂಕಿನ ಸೀತಾಪುರ ಗ್ರಾಮ ಹಾಗೂ ಇನ್ನಿತರ ಸುತ್ತಮುತ್ತಲ ಹಳ್ಳಿಗಳ ಹಾಡುಗಾರರಿಂದ ಸಂಗ್ರಹಿಸಿರುವ ಎಂಟು ಕಥನ ಗೀತೆಗಳು ಇವೆ. ಇದುವರೆಗೆ ಸಂಗ್ರಹವಾಗಿರುವ ಬಯಲು ಸೀಮೆಯ ಕಥನಗೀತೆಗಳಿಗೆ ಹೋಲಿಸಿದಾಗ ಇವುಗಳಲ್ಲಿ ಕಾವ್ಯಾತ್ಮಕತೆ ಹಾಗೂ ಆದರ್ಶಗಳ ವೈಭವೀಕರಣ ಕಡಿಮೆಯಾಗಿ ಕಾಣುತ್ತದೆ. ನೀಲಮ್ಮ , ಕೆಂಚಮ್ಮ - ಇವು ನೀರು ಬರಲೆಂದು ಕೆರೆಗೆ ಆಹುತಿಯಾದ ಹೆಣ್ಣುಗಳ ಕಥೆ. ಹೊನ್ನಮ್ಮ, ಹೊನ್ನಾಲಿ - ಇವರು ಅತ್ತೆ ಮತ್ತು ನಾದಿನಿಯ ಮೋಸದಿಂದ ಕೊಲೆಯಾದವರು. ಸತ್ಯವಂತೆ ಹಡೆದವ್ವೆ ಎಂಬ ಗೀತೆಯಲ್ಲಿ ಅತ್ತೆಯನ್ನ ಮೋಸದಿಂದ ಕೊಲ್ಲಲು ಪ್ರಯತ್ನಿಸಿದ ಸೊಸೆ ತನ್ನ ಸಂಚಿಗೆ ತಾನೇ ಬಲಿಯಾಗುತ್ತಾಳೆ. ಕೇದಿಗೆ ಮತ್ತು ಆಳು ಕೂಗಿನ ಹಕ್ಕಿ - ಇವು ಮೊದಲ ಬಾರಿಗೆ ಬೆಳಕು ಕಂಡಿರುವ ಗೀತೆಗಳು. ಆಳುಕೂಗಿನ ಹಕ್ಕಿಯಲ್ಲಿ ತನ್ನ ಅಕ್ಕನ ಮಗಳನ್ನು ಬಯಸಿ ಮದುವೆಯಾದ ಕಿರಿಯ ಸೋದರನನ್ನ ಅವನ ಆರು ಮಂದಿ ಹಿರಿಯ ಸೋದರರು ಮೋಸದಿಂದ ಕೊಲ್ಲುತ್ತಾರೆ. ಅವನು ಆಳುಕೂಗಿನ ಹಕ್ಕಿಯಾಗಿ ರೂಪಾಂತರ ಹೊಂದಿ ತನ್ನನ್ನು ಕೊಂದವರ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ. ಕೇದಿಗೆ ಎಂಬ ಪುಟ್ಟ ಕಥನ ಗೀತೆ, ಹೆಣ್ಣೊಬ್ಬಳ ಅಕ್ರಮ ಪ್ರಣಯವನ್ನು ಕುರಿತದ್ದು. ಅವಳ ವ್ಯಭಿಚಾರವನ್ನು ಕಣ್ಣಾರೆ ಕಂಡ ಅವಳ ಗಂಡ ಅವಳನ್ನೂ ಹಾಗೂ ಅವಳ ಪ್ರೇಮಿಯನ್ನೂ ಕೊಲ್ಲುತ್ತಾನೆ. ಸಾಲುಸಾಲಿಗೂ ಬರುವ 'ಸುಯ್ಯ' ಎಂಬ ಪಲ್ಲವಿ ಈ ಕಥೆಯ ದುರಂತದ ಮುನ್ಸೂಚನೆಯಂತಿದೆ. ''ಕಂಡ್ಹೆಣ್ಣ ಬುಡೋರಲ್ಲ ಗಿರಿವಾಸಕ ಬರೋರಲ್ಲ'' ಇದು ಈ ಸಂಕಲನದ ಬಹು ದೀರ್ಘಗೀತೆ. ಇಲ್ಲಿ ಶ್ರೀಮನ್ನಾರಾಯಣನ ಪ್ರಣಯ ಪ್ರಸಂಗಗಳು, ಅವನ ಧರ್ಮ ಪತ್ನಿಯರಿಂದ ಅವನಿಗಾಗುವ ಕಿರುಕುಳಗಳು, ಕುಸುಮಾಲೆಯನ್ನು ವಶಪಡಿಸಿಕೊಳ್ಳುವುದಕ್ಕಾಗಿ ನಾರಾಯಣನು ಮಾಡುವ ಉಪಾಯಗಳ ಸುದೀರ್ಘ ನಿರೂಪಣೆಯಿದೆ. ಅಲ್ಲಲ್ಲಿ ಸುಂದರವಾದ ವರ್ಣನೆಗಳಿವೆ. ಒಟ್ಟಾರೆ ನೋಡಿದಾಗ ಈ ಗೀತೆಗಳ ಪುರುಷ ಪಾತ್ರಗಳು ಉದಾರ ಗುಣದವರಾಗಿ ಕಂಡುಬರುತ್ತಾರೆ. ಸಾಮಾನ್ಯವಾಗಿ ಈ ಎಲ್ಲ ಗೀತೆಗಳು ದುರಂತದಲ್ಲಿ ಮುಗಿಯುವಂಥವೇ ಆದರೂ ಅದನ್ನು ಸುಖಾಂತಗೊಳಿಸುವ ಪ್ರಯತ್ನ ನಡೆದಿರುವುದನ್ನು ಗುರುತಿಸಬಹುದು. ಕೆರೆಗೆ ಬಲಿಯಾಗುವ ಮತ್ತು ಅತ್ತೆ ನಾದಿನಿಯರ ಮೋಸಕ್ಕೆ ಬಲಿಯಾಗುವ ಹೆಣ್ಣುಗಳ ಕುರಿತಾದ ಗೀತೆಗಳು, ಈಗ ಕನ್ನಡದಲ್ಲಿ ಪ್ರಕಟವಾಗಿರುವ ಇದೇ ರೀತಿಯ ಕಥನಗೀತೆಗಳ ದುರ್ಬಲ ಪಾಠಗಳಂತೆ ತೋರುತ್ತವೆ. ಸಾಂಸ್ಕೃತಿಕ ವಿವರಗಳ ದೃಷ್ಟಿಯಿಂದಲೂ ಈ ಗೀತೆಗಳು ಪೇಲವವೆಂದೇ ಹೇಳಬೇಕು. ವಕ್ತೃಗಳ ಬಗ್ಗೆ ಜಯಲಕ್ಷ್ಮಿ ಸೀತಾಪುರ ಅವರು ಸಾಕಷ್ಟು ವಿವರಗಳನ್ನು ನೀಡಿರುವುದರಿಂದ ಅವರ ದೃಷ್ಟಿಕೋನ ಅರಿಯಲು ಸಹಾಯಕ.

ರಾಜೇಂದ್ರ ಯರನಾಳೆ ಅವರು 'ಶೀಗಿಹಾಡುಗಳು' ಎಂಬ ಸಂಕಲನ ಪ್ರಕಟಿಸಿದ್ದಾರೆ. ಈ ಪುಸ್ತಕ ಪ್ರಸ್ತುತ ಸಮೀಕ್ಷೆಯ ಕಾಲಕ್ಕೆ ಲಭ್ಯವಾಗಿಲ್ಲ. ಜಾನಪದ

ಜಗತ್ತಿನಲ್ಲಿ (ಸಂಪುಟ - ೧೬, ೧೯೯೫ ಜನವರಿ - ಜೂನ್ ತಿಂಗಳ ಸಂಯುಕ್ತ ಸಂಚಿಕೆ) ಬಸವರಾಜ ಅಳಕವಾಡಿಯವರು ಇದರ ಬಗ್ಗೆ ವಿಮರ್ಶೆ ಬರೆದಿದ್ದಾರೆ. ಅದನ್ನು ಆಧರಿಸಿ ಈ ಪುಸ್ತಕದ ಬಗ್ಗೆ ಇಷ್ಟು ಮಾಹಿತಿ ಕೊಡಬಹುದು........ ಶೀಗಿ ಹುಣ್ಣಿಮೆಯ ಆಚರಣೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಕಾಣ ಸಿಗುತ್ತದೆ. ಆಚರಣೆಯ ವಿಧಿವಿಧಾನಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ಹೋದರೂ ಆಶಯ ಒಂದೇ. ಇದು ಮೂಲತಃ ಮಣ್ಣಿನ ಪೂಜೆ, ಅಂದರೆ ಭೂಮಿತಾಯಿಯ ಪೂಜೆ. ವಿಜಾಪುರ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಣ್ಣಿನಲ್ಲಿ ಹೆಣ್ಣು ಮೂರ್ತಿಯನ್ನು ತಯಾರಿಸಿ ಹೆಣ್ಣಿನ ಉಡುಗೆ ತೊಡುಗೆಗಳಿಂದ ಅಲಂಕರಿಸಿ, ಶೀಗವ್ವನೆಂದು ಪೂಜಿಸುತ್ತಾರೆ. ಬೀದರ್ ಜಿಲ್ಲೆಯಲ್ಲಿ ಚುಕ್ಕಿ, ಚಂದ್ರ, ಕಮಲದ ಹೂವು, ದೇವರು ಮುಂತಾದ ಚಿತ್ರಗಳನ್ನು ಬಿಡಿಸಿ ಶೀಗವ್ವನೆಂದು ಪೂಜಿಸುತ್ತಾರೆ. ಪ್ರಸ್ತುತ ಸಂಗ್ರಹದಲ್ಲಿ ಬಹಳಷ್ಟು ಹಾಡುಗಳು ಶಿವನ ಮಡದಿ ಗಂಗೆ - ಗೌರಿ, ಶೀಗಮ್ಮನ ಕುರಿತಾಗಿದ್ದು ಆದರೆ ಚುಕ್ಕಿ, ಚಂದ್ರಮ, ಹಣಮದೇವರ ಬಗ್ಗೆ ಹಾಡುಗಳು ಗರಿ ಬಿಚ್ಚುವುದಿಲ್ಲ. ಈ ಸಂಗ್ರಹದಲ್ಲಿ ಆಚರಣೆಗೆ ಸಂಬಂಧಿಸಿದಂತೆ ಕೆಲವು ಛಾಯಾಚಿತ್ರ, ರೇಖಾಚಿತ್ರಗಳನ್ನು ಬರೆಯಿಸಲಾಗಿದೆ. ಹಾಡುಗಳ ಪಾಠಾಂತರ ಮತ್ತು ಕಠಿಣ ಪದಗಳ ಅರ್ಥ ನೀಡಲಾಗಿದೆ. ಬಸವರಾಜ ಮಲಶೆಟ್ಟಿಯವರ ಮುನ್ನುಡಿ ಇದೆ. ಶೀಗಿ ಹುಣ್ಣಿಮೆ ಆಚರಣೆ ಕುರಿತ ಹಾಡುಗಳು ಇಲ್ಲಿ ಜಾನಪದ ಅಭ್ಯಾಸಿಗಳಿಗೆ ಲಭ್ಯ. ಇದೊಂದು ಸಂಗ್ರಹಯೋಗ್ಯ ಕೃತಿ.

**ಜನಪದ ಕಥೆಗಳು**

ಜನಪದ ಕಥೆಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ ಪ್ರಸ್ತುತ ವರ್ಷದಲ್ಲಿ ಲಂಬಾಣಿ ಜನಪದ ಕಥೆಗಳು, ನಮ್ಮ ಜಾನಪದ ಕಥೆಗಳು ( ಡಾ.ಹಿ.ಶಿ. ರಾಮಚಂದ್ರಗೌಡ), ದಕ್ಷಿಣ ಕನ್ನಡಜಿಲ್ಲೆಯ ಐತಿಹ್ಯಗಳು (ಡಾ.ಎ. ಸುಬ್ಬಣ್ಣ ರೈ) ಪ್ರಕಟವಾಗಿವೆ. ಇವುಗಳಲ್ಲಿ ಸಮೀಕ್ಷೆಗೆ ಲಭ್ಯವಾಗಿದ್ದು ಲಂಬಾಣಿ ಜನಪದ ಕಥೆಗಳು ಮಾತ್ರ. ಇತ್ತೀಚೆಗೆ ಲಂಬಾಣಿ ಜಾನಪದವನ್ನು ಕುರಿತು ಹೆಚ್ಚು ಹೆಚ್ಚು ಕೆಲಸ ನಡೆಯುತ್ತಿದೆ. ಕನ್ನಡದ ನೆಲದಲ್ಲಿದ್ದರೂ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರಿಂದ ಲಂಬಾಣಿಗಳ ಬಗ್ಗೆ ಜಾನಪದ ಸಂಶೋಧನೆಯ ಆಸಕ್ತಿ ತಿರುಗಿದ್ದು ಸಹಜವೇ ಆಗಿದೆ. ಸೋಮಣ್ಣಾ ಹೊಂಗಳ್ಳಿಯವರು ಮಂಡ್ಯ ಜಿಲ್ಲೆಯ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ ದುಡಿಯಲು ಬಂದ ಲಂಬಾಣಿಗಳಿಂದ ಪ್ರಸ್ತುತ ಸಂಕಲನದಲ್ಲಿರುವ ಮೂವತ್ತು ಕಥೆಗಳನ್ನು ಸಂಗ್ರಹಿಸಿದ್ದಾರೆ. ಈ ಲಂಬಾಣಿಗಳು ಮೂಲತಃ ಚಿಕ್ಕ ಕೊಡಗಲಿ, ಕೊಪ್ಪಳ, ಮೇಧಕ್ ಹಾಗೂ ರಾಯಚೂರು ಜಿಲ್ಲೆಗಳಿಂದ ಬಂದವರು.

ಈ ಸಂಕಲನದ ಅನೇಕ ಕಥೆಗಳು ಕನ್ನಡದಲ್ಲಿ ಈಗಾಗಲೇ ಜನಪ್ರಿಯವಾಗಿರುವ ಕಥಾ ವರ್ಗಗಳ ಉದಾಹರಣೆಗಳೇ ಆಗಿವೆ. ಇನ್ನೂ ಕೆಲವು ಕಥೆಗಳು ಆಶಯಗಳ ಬದಲಾವಣೆ ಅಥವಾ ಬೇರೆ ರೀತಿಯ ಸೇರ್ಪಡೆಯಿಂದಾಗಿ ಸ್ವಲ್ಪ ವಿಶಿಷ್ಟವಾಗಿ ಕಂಡು ಬರುತ್ತವೆ. ಎಲ್ಲ ಪ್ರಕಾರದ ಕಥೆಗಳನ್ನೂ ಇಲ್ಲಿ ಕಾಣಬಹುದು. ಈ ಸಂಕಲನದ ಬಹುತೇಕ ಕಥೆಗಳು ಅಪೂರ್ಣ, ಸತ್ವಹೀನವಾಗಿವೆ. ಇದಕ್ಕೆ ಮುಖ್ಯ ಕಾರಣ ಇಲ್ಲಿನ ಕಥಾ ವಕ್ತೃಗಳು ಅಷ್ಟೇನೂ ಒಳ್ಳೆಯ ಕಥೆಗಾರರಲ್ಲದಿರುವುದೇ ಆಗಿದೆ. ಸಂಗ್ರಹಕರು ಕೇಳಿದ್ದರಿಂದ, ತಮ್ಮ ನೆನಪಿನಲ್ಲಿರುವ ಕಥೆಗಳನ್ನು ಹರಕು ಮುರುಕಾಗಿ ನಿರೂಪಿಸಿದಂತೆ ಈ ಕಥೆಗಳು ಕಂಡುಬರುತ್ತವೆ. ಇಷ್ಟಾಗಿಯೂ ತೌಲನಿಕ ಅಧ್ಯಯನ ಹಾಗೂ ಸಾಂಸ್ಕೃತಿಕ ಅಧ್ಯನಯಕ್ಕೆ ಒದಗುವುದರಿಂದ ಜನಪದ ಕಥೆಗಳ ಅಧ್ಯಯನದಲ್ಲಿ ಇಂಥ ಸಂಕಲನಕ್ಕೆ ಪ್ರಾಮುಖ್ಯತೆ ಇದ್ದೆ ಇದೆ.

ಡಾ.ಎ. ಸುಬ್ಬಣ್ಣ ರೈ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು' ಎಂಬ ಗ್ರಂಥದ ಬಗ್ಗೆ ಡಾ.ಬಿ.ವಿ. ವೆಂಕಟಕೃಷ್ಣ ಅವರು ಬರೆದಿರುವ ವಿಮರ್ಶೆ (ಸಂಯುಕ್ತ ಕರ್ನಾಟಕ - ಸಾಪ್ತಾಹಿಕ ಸೌರಭ - ದಿ. ೧೭.೮.೯೫)ಯ ಸಾರಾಂಶ ಹೀಗಿದೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಐತಿಹ್ಯಗಳ ಸಂಗ್ರಹ ಮಾಡಿ ಅವುಗಳ ವಿಶ್ಲೇಷಣೆಯಿಂದ ದಕ್ಷಿಣ ಕನ್ನಡದ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಬೀರಲು ಲೇಖಕರು ಶ್ರಮಿಸಿದ್ದಾರೆ. ನಗರೀಕರಣ ಸಂಸ್ಕೃತಿಯು ಜಾನಪದ ಐತಿಹ್ಯಗಳನ್ನು ಕೊಲ್ಲುತ್ತಿರುವ ಬಗ್ಗೆ ಲೇಖಕರು ಕಳಕಳಿ ಸೂಚಿಸಿದ್ದಾರೆ.

ಸಮಾಜದಲ್ಲಿನ ಬಹುಸಂಖ್ಯಾತ ವರ್ಗಗಳ ಆಚರಣೆಗಳಿಗೆ ಶಿಷ್ಟ ಸಂಪ್ರದಾಯದ ದಾಖಲೆಗಳಿಗಿಂತ ಐತಿಹ್ಯಗಳೇ ಪ್ರಧಾನ ಆಧಾರವಾಗಿರುವುದನ್ನು ಲೇಖಕರು ಗುರುತಿಸುತ್ತಾರೆ. ಉದಾ: ದೀಪಾವಳಿಗೆ ಬಲೀಂದ್ರನ ಪೂಜೆ, ಕಟೀಲಿನ ದೇವಸ್ಥಾನದಲ್ಲಿ ನಡೆಯುವ ಪೂಜೆಯ ಹಕ್ಕು, ಅಳಿಯ ಸಂತಾನಕಟ್ಟು , ಸಿರಿಯ ಆವೇಶ, ಕೋಟಿ ಚೆನ್ನಯ್ಯರ ಆರಾಧನೆ ಮೊದಲಾದವುಗಳು. ಸಂಶೋಧನೆಯ ಮುಖ್ಯಾಂಶಗಳನ್ನು ಹೇಳುತ್ತಾ ಲೇಖಕರು ಹೇಳುವ ಈ ಮಾತುಗಳನ್ನೂ ಇಂದಿನ ಸಮಾಜದಲ್ಲಿ ಕೋಮು, ಜಾತಿ ವೈಷಮ್ಯಗಳನ್ನು ಖಂಡಿಸುವವರು ಗಮನಿಸಬೇಕಾಗಿದೆ, ಬಳಸಿಕೊಳ್ಳಬೇಕಾಗಿದೆ. ''ಸಮಾಜದಲ್ಲಿ ಜಾತಿ ಪದ್ಧತಿಯ ಬಗೆಗೆ ಐತಿಹ್ಯಗಳಿಂದ ಮಾಹಿತಿ ಸಿಗುತ್ತದೆ. ಆದರೆ ಅದು ತೀವ್ರತರದ ಸಂಘರ್ಷಗಳಿಗೆ ಎಡೆಮಾಡಿಕೊಟ್ಟ ಬಗೆಗೆ ವಿಶೇಷ ಉಲ್ಲೇಖವೇನೂ ಸಿಗುತ್ತಿಲ್ಲ. ಕೋಟಿ ಚೆನ್ನಯ್ಯರ ಐತಿಹ್ಯದಲ್ಲಿ, ಅವರು ಬಿಲ್ಲವರಾಗಿದ್ದ ಕಾರಣ ಅವರಿಗೆ ಸಮಾಜದಿಂದ ಕಿರುಕುಳ ಉಂಟಾಯಿತೆಂಬುದರಲ್ಲಿ ಸ್ವಲ್ಪ ಮಟ್ಟಿನ ಸಂಘರ್ಷದ ಸುಳಿವಿದೆ. ಅವನ ಕಿರುಕುಳ ಅನ್ಯಾಯವನ್ನು ಸಹಿಸಲಾರದೆ ಕೋಟಿ

ಚೆನ್ನಯ್ಯರು ಬದ್ದಿಯಂತನನ್ನು ಕೊಲೆಗೆಯ್ಯುತ್ತಾರೆ. ಆದರೆ ಇದನ್ನು ಜಾತೀಯ ಸಂಘರ್ಷವೆಂಬ ನೆಲೆಯಿಂದ ನೋಡುವುದೇನೂ ಸಮಂಜಸವೆನಿಸದು. ಇದು ಅನ್ಯಾಯಕ್ಕೆದುರಾದ ಅವರ ಪ್ರತಿಭಟನೆಯಷ್ಟೇ. ಲೇಖಕರು ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳ ಬಗೆಗೆ ಮಾಡಿರುವ ಈ ಅಧ್ಯಯನವು ಕರ್ನಾಟಕದ ಸಮಗ್ರ ಜಿಲ್ಲೆಗಳಲ್ಲಿನ ಐತಿಹ್ಯಗಳ ಅಧ್ಯಯನ ಹಾಗೂ ದಾಖಲಾತಿಗೆ ಮಾರ್ಗದರ್ಶಕವೂ, ಸ್ಫೂರ್ತಿದಾಯಕವೂ ಆಗಿದ್ದು ಆಧುನಿಕ ಸಂಶೋಧನಾ ತಂತ್ರ ಹಾಗೂ ವಿಶ್ಲೇಷಣಾತ್ಮಕ ಸಾಂಸ್ಕೃತಿಕ ಅಧ್ಯಯನವನ್ನು ಮೈಗೂಡಿಸಿಕೊಂಡ ಪ್ರಯತ್ನವಾಗಿದೆ.

## ಗಾದೆಗಳು

ಗಾದೆಗಳಲ್ಲಿ ಕಥೆಯ ಹಿನ್ನೆಲೆಯಿರುವ ಗಾದೆಗಳದು ಒಂದು ವಿಶಿಷ್ಟ ವರ್ಗ. ಪ್ರತಿಯೊಂದು ಗಾದೆಯೂ ಯಾವುದೋ ಒಂದು ಘಟನೆಯ ಹಿನ್ನೆಲೆಯಿಂದಲೇ ರೂಪುಗೊಂಡದ್ದು, ಯಾವುದಾದಾರೊಂದು ಸಾಂದರ್ಭಿಕ ಸನ್ನಿವೇಶದಲ್ಲಿಯೇ ಅದು ಬಳಕೆಯಾಗುತ್ತದೆ. ಕೆಲವೊಂದು ಗಾದೆಗಳು ಕಥಾಸಹಿತವಾಗಿಯೇ ಜನಪ್ರಿಯವಾಗಿವೆ. ಆದರೆ ಬಹುತೇಕ ಗಾದೆಗಳ ಹಿನ್ನೆಲೆಯ ಘಟನೆ ಅಥವಾ ಕಥೆ ತಿಳಿದುಬರುವುದಿಲ್ಲ. ಇವುಗಳ ಸಂಗ್ರಹ ಕಷ್ಟ. ಮಾತಿನ ವರಸೆಯಲ್ಲಿ ಪೂರ್ತಿ ಗಾದೆಯನ್ನೂ ಸಹ ಹೇಳದೆ 'ಅದೇನೋ ಅಂತಾರಲ್ಲ ಹಾಗೆ' ಎಂದು ಮಾತು ಮುಗಿಸುವ ಪರಿಪಾಠ ಇರುವಾಗ ಇನ್ನು ಅದರ ಹಿನ್ನೆಲೆಯ ಕಥೆಯನ್ನು ತಿಳಿದವರಾಗಲೀ, ನಿರೂಪಿಸುವವರಾಗಲೀ ಇನ್ನೂ ವಿರಳ ಎಂದೇ ಹೇಳಬೇಕು. ಸಂಗ್ರಹಕಾರರು ಅಂಥ ಗಾದೆಗಳನ್ನು ಗುರುತಿಸಿ ಕ್ಷೇತ್ರಕಾರ್ಯ ನಡೆಸಿದರೆ ಹಲವಾರು ಕಥೆಗಳು ಬೆಳಕಿಗೆ ಬಂದಾವು. ಬಿ. ಕೃಷ್ಣಪ್ಪ ರೆಡ್ಡಿಯವರು ಗಾದೆಯ ಕಥೆಗಳು ಎಂಬ ಕೃತಿಯಲ್ಲಿ ಅಂತಹ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲಿ ೨೫ ಗಾದೆ ಕಥೆಗಳಿವೆ. ಅವುಗಳನ್ನು ವಸ್ತುವಿಗೆ ಅನುಗುಣವಾಗಿ ದಾಂಪತ್ಯ ಕಥೆಗಳು, ತಂತ್ರ- ಕುತಂತ್ರ ಕಥೆಗಳು, ಹಾಸ್ಯ ಕಥೆಗಳು, ವೃತ್ತಿ ಕಥೆಗಳು, ನೀತಿ ಕಥೆಗಳು ಐತಿಹ್ಯ ಕಥೆಗಳು, ಪ್ರಾಣಿ ಕಥೆಗಳು ಎಂದು ವರ್ಗೀಕರಿಸಿಕೊಂಡಿದ್ದಾರೆ. ಈ ಗಾದೆಗಳಿಗೆ ಸಂಬಂಧಿಸಿದ ಕಥೆಯ ನಿರೂಪಣೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಹೊನ್ನಾಳಿ, ಚೆನ್ನಗಿರಿ ತಾಲೂಕುಗಳಲ್ಲಿ ಪ್ರಚಲಿತವಿರುವ ಆಡು ಭಾಷೆಯಲ್ಲಿದೆ. ಆಡುಭಾಷೆಯ ವಿಶಿಷ್ಟ ಪದರೂಪಗಳು, ಬೈಗುಳಗಳು, ಪೂರಕಗಾದೆಗಳನ್ನು ಬಳಸಿಕೊಳ್ಳುತ್ತಾ ಮಾನವ ಸ್ವಭಾವದ ಅಂತರಾಳವನ್ನು ಬಿಚ್ಚಿಡುವ ಈ ಕಥೆಗಳು ತುಂಬಾ ಸ್ವಾರಸ್ಯಕರವಾಗಿದ್ದು ಸ್ವತಂತ್ರ ಕಥೆಗಳಂತೆ ಓದಿಸಿಕೊಳ್ಳುತ್ತದೆ. ಇಲ್ಲಿ 'ಅಳಿಯನ ಕುರುಡು ಬೆಳಗಾಗೊತನಕ', 'ದಡ್ಡಗೆ ಒಂದು ದಂಡಾಂದ್ರೆ ಜಾಣಗೆ ಮೂರ್ದಂಡ', 'ಉಂಡೂ ಹೋದ ಕೊಂಡೂ ಹೋದ', 'ಹಳೇ ಗಂಡ್ನ ಪಾದವೇ

ಗತಿ', 'ಅದೇ ಉಂಡೇನು ಕದಾ ತೆಗಿ' ಮೊದಲಾದ ಪರಿಚಿತ ಗಾದೆಗಳಿಗೆ ಸಂಬಂಧಿಸಿದ ಕಥೆಗಳು ಕೆಲವು. ಇನ್ನೂ ಕೆಲವು ಗಾದೆ ಹಾಗೂ ಸಂಬಂಧಪಟ್ಟ ಕಥೆಗಳು ತುಂಬಾ ಪ್ರಾದೇಶಿಕವಾಗಿವೆ. 'ಹೊನ್ನಾಳಿ ಅಗ್ಸ ಕೆಟ್ಟಂಗೆ', 'ದೆವ್ವನ ಕಾಟ್ನಾಗೆ ದಾಸರಹಟ್ಟಿ ಹಾಳಾತಂತೆ', 'ಎತ್ತುಗಾಡಿ ಜಿದ್ದಿಗೆ ಕತ್ತಿಕೊಡ್ಲಿ ಕುಣ್ದಾಡಿದ್ವಂತೆ' ಇತ್ಯಾದಿ. ಈ ಗಾದೆಗಳ ಹಿನ್ನೆಲೆಯಲ್ಲಿರುವ ಕಥೆಗಳನ್ನು ಹೆಕ್ಕಿ ತೆಗೆಯುವಲ್ಲಿ ಕೃಷ್ಣಪ್ಪ ರೆಡ್ಡಿಯವರ ಶ್ರಮ ಮೆಚ್ಚುವಂಥದ್ದಾದರೂ ಸ್ವಾರಸ್ಯವಾಗಿರಲಿ ಎಂಬುದಕ್ಕಾಗಿ, ಕೆಲವೊಮ್ಮೆ ಸಂಗ್ರಹಕರು ಇಡೀ ವಾತಾವರಣವನ್ನು ಕೃತಕವಾಗಿ ಸೃಷ್ಟಿಸಿದಂತೆ ಕಾಣುತ್ತದೆ. ಇದು ಶುದ್ಧ ಜಾನಪದೀಯ ಸಂಗ್ರಹ ಕ್ರಮಕ್ಕೆ ಸ್ವಲ್ಪ ಧಕ್ಕೆ ಉಂಟುಮಾಡಿದಂತೆನಿಸುತ್ತದೆ.

ಕಥನ ಗಾದೆಗಳ ಸ್ವರೂಪವನ್ನು ಕುರಿತು ಉತ್ತಮ ಪ್ರಸ್ತಾವನೆ, ಅರ್ಥಸೂಚಿ, ವಕ್ತೃವಿವರ ಕೊಟ್ಟಿದ್ದಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಇಂಥ ಹೊಸ ಹೊಸ ಗಾದೆಯ ಕಥೆಗಳನ್ನೂ ಹಾಗೂ ಗಾದೆಗಳ ಪಾಠಾಂತರವನ್ನೂ ಸಂಗ್ರಹಿಸುವುದಕ್ಕೆ ಈ ಕೃತಿ ಪ್ರೇರಕವಾಗಬಲ್ಲದು.

## ರಂಗಭೂಮಿ ಸಾಹಿತ್ಯ

ಜನಪದ ರಂಗಭೂಮಿಗೆ ಸಂಬಂಧಿಸಿದ ಸಾಹಿತ್ಯ, ಪ್ರಕಟಣೆಯ ರೂಪದಲ್ಲಿ ಬೆಳಕು ಕಂಡಿರುವುದು ತೀರ ಕಡಿಮೆ. ಶ್ರೀಕೃಷ್ಣ ಪಾರಿಜಾತ, ಭೀಮವಿಳಾಸ ಇವೇ ಮೊದಲಾದ ಬೆರಳೆಣಿಕೆಯಷ್ಟು ಕೃತಿಗಳು ಗ್ರಂಥರೂಪದಲ್ಲಿ ಪ್ರಕಟವಾಗಿವೆ. ಪ್ರದರ್ಶನದಿಂದ ಪ್ರದರ್ಶನಕ್ಕೆ ಅದರ ಸಾಹಿತ್ಯ ಬದಲಾಗುವುದರಿಂದಲೋ ಏನೋ ಅವುಗಳ ಸಂಗ್ರಹಕ್ಕೆ, ಜಾನಪದ ಅಭ್ಯಾಸಿಗಳು ಹೆಚ್ಚು ಗಮನ ಕೊಟ್ಟಂತಿಲ್ಲ. ರಂಗ ಪ್ರದರ್ಶನಕ್ಕೆ ಆಧಾರವಾಗಿ ಆಯಾ ಪ್ರಸಂಗದ ಸಾಹಿತ್ಯ ಹಸ್ತಪ್ರತಿ ರೂಪದಲ್ಲಿ ಲಭ್ಯವಾಗುತ್ತದೆ. ಇಂಥ ಹಸ್ತಪ್ರತಿಗಳನ್ನು ನೇರವಾಗಿ ಇಲ್ಲವೇ ಜಾನಪದದ ಸಂಪಾದನೆಯ ನಿಯಮಗಳಿಗೆ ಪ್ರತಿಕೂಲವಾಗದಂತೆ ಪರಿಷ್ಕರಿಸಿ ಪ್ರಕಟಿಸುವುದು ಅಗತ್ಯ, ಹಾಗೆ ಪ್ರಕಟಗೊಂಡಾಗ ಎಲ್ಲ ಜಾನಪದದಂತೆಯೇ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುವ ಈ ಪ್ರಕಾರದ ಸ್ವರೂಪವನ್ನು ಅಭ್ಯಾಸ ಮಾಡುವುದಕ್ಕೆ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷದಲ್ಲಿ ಬೆಳಕು ಕಂಡಿರುವ ಸಿದ್ದಪ್ಪ ಜಕಬಾಳ ಅವರ ವಜ್ರ ಚೂಡಾಮಣಿ ತುಂಬ ಸ್ವಾಗತಾರ್ಹ. ಇದು ಉತ್ತರ ಕರ್ನಾಟಕದ ರಂಗಕಲಾಪ್ರಕಾರಕ್ಕೆ ಸೇರಿದ ಕೃತಿ. ಬಹಳ ಪ್ರಸಿದ್ಧವಾದ ಜನಪದ ಕಥೆಯ (ವರ್ಗ ೫೧೦ಎ) ನಾಟಕ ರೂಪಾಂತರವೇ ಪ್ರಸ್ತುತ ವಜ್ರ ಚೂಡಾಮಣಿ. ರಾಜಕುಮಾರನು ಒಬ್ಬಳು ಸುಂದರಿಯನ್ನು ಬಯಸುತ್ತಾನೆ. ಆಕೆ ಅವನಿಗೆ ತನ್ನ ಬಗೆಗಿನ ಮಾಹಿತಿ ಹಾಗೂ ಭೇಟಿಯಾಗಬೇಕಾದ ಸ್ಥಳ ಮತ್ತು ಸಮಯಗಳ. ವಿವರಗಳನ್ನು ಸಂಕೇತಗಳ ಮೂಲಕ ತಿಳಿಸುವುದು, ಆಕೆ ಅವನ

ವಶವಾಗುವಂತೆ ಮಾಡಲು ಆತನ ಸ್ನೇಹಿತನಾದ ಮಂತ್ರಿ ಕುಮಾರ ಮಾಡುವ ವಿವಿಧ ಉಪಾಯಗಳು ಈ ಕಥೆಯ ಸ್ವಾರಸ್ಯ. ಕಥೆಯೊಂದು ನಾಟಕವಾಗುವಾಗ ಅಗತ್ಯವಾಗಿ ಸೇರಬೇಕಾದ ಹಾಡು, ಕುಣಿತ, ಸಂಭಾಷಣೆ, ಹಾಸ್ಯ ಮೊದಲಾದ ನಾಟಕೀಯ ಅಂಶಗಳನ್ನೆಲ್ಲಾ ಒಳಗೊಂಡು ಇದೊಂದು ಆಕರ್ಷಕ ನಾಟಕವಾಗಿದೆ. ಶುದ್ಧ ಜನಪದ ಕಥೆಯನ್ನು ನಾಟಕೀಯಗೊಳಿಸಿ ಅಭಿನಯಿಸುವ ಜನಪದ ಪ್ರತಿಭೆಗೂ ಇದು ನಿದರ್ಶನ. ಒಟ್ಟಿನಲ್ಲಿ, ಉತ್ತರ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯವಾಗಿದ್ದು ವಿವಿಧ ಪಾಠಾಂತರಗಳಲ್ಲಿ ಕಾಣಿಸಿಕೊಳ್ಳುವ ಈ ಕಥೆ ರಂಗರೂಪಕ್ಕೆ ಪರಿವರ್ತನೆಗೊಂಡಿರುವುದು ಕುತೂಹಲಕಾರಿಯಾದ ಅಂಶ. ಇಂಥ ಒಂದು ಒಳ್ಳೆಯ ಕೃತಿಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿಕೊಟ್ಟಿರುವ ಸಿದ್ದಪ್ಪ ಜಕಬಾಳ ಅವರಿಗೆ ಅಭಿನಂದನೆಗಳು ಸಲ್ಲಬೇಕು.

## ಜಾನಪದ ವಿಶ್ಲೇಷಣೆ ಮತ್ತು ಸಂಶೋಧನೆ

ವಿಶ್ಲೇಷಣಾತ್ಮಕ ಕೃತಿಗಳ ಸಂಖ್ಯೆ ಹೆಚ್ಚುತ್ತಿರುವುದು, ಕೆಲವೊಂದು ಪ್ರಕಾರಗಳ ಬಗ್ಗೆ ವಿಸ್ತೃತ ಅಧ್ಯಯನಗಳಾಗುತ್ತಿರುವುದು ಈಗ ಕಂಡು ಬರುತ್ತಿರುವ ಹೊಸ ಬದಲಾವಣೆ. ಸಂಗ್ರಹಣೆ ಮೊದಲ ಘಟ್ಟವಾದರೆ ವಿಶ್ಲೇಷಣೆ ಎರಡನೆಯ ಘಟ್ಟ. ಜಾನಪದದ ವಿಶ್ಲೇಷಣೆ ನಡೆಯಬೇಕಾದ ಕಾಲಕ್ಕೆ ಕೊನೆಯ ಪಕ್ಷ ಒಂದು ನಿರ್ದಿಷ್ಟ ಸಾಂಸ್ಕೃತಿಕ ವಲಯದ ಎಲ್ಲಾ ಪ್ರದೇಶಗಳಿಂದ ಆಯಾ ಪ್ರಕಾರದ ಸಂಗ್ರಹಣೆಯ ಕೆಲಸ ತಕ್ಕಮಟ್ಟಿಗೆ ತೃಪ್ತಿಕರವಾಗಿ ನಡೆದಿರುವುದು ಅಗತ್ಯ. ಈ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಪ್ರಾತಿನಿಧಿಕವೆನಿಸುವ ಸಂಗ್ರಹಗಳು ಸಿಗುತ್ತಿವೆ. ವಿಶ್ಲೇಷಣೆ ಸರಿಯಾಗಿರಬೇಕಾದರೆ ಸಂಬಂಧಪಟ್ಟ ಸಾಮಗ್ರಿಯನ್ನೂ ಸಂಗ್ರಹಮಾಡಿಕೊಂಡು ತೊಡಗುವುದೂ ಅಗತ್ಯವಾಗುತ್ತದೆ. ಹೀಗೆ ಜಾನಪದ ಸಾಮಗ್ರಿಯ ವಿಶ್ಲೇಷಣೆಗೆ ಅಭ್ಯಾಸಿಗಳನ್ನು ಆಸಕ್ತಿಯಿಂದ ತೊಡಗಿಸುವ ಕೆಲಸವನ್ನು ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ವಿಶ್ವ ವಿದ್ಯಾಲಯಗಳು ಉತ್ಸುಕತೆಯಿಂದ ಮಾಡುತ್ತಿವೆ. ವ್ಯಕ್ತಿಮಟ್ಟದಲ್ಲೂ ಇಂತಹ ಪ್ರಯತ್ನಗಳು ನಡೆದಿವೆ. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರ ಸಂಕಿರಣವನ್ನು ಏರ್ಪಡಿಸಿ, ವಿದ್ವಾಂಸರಿಂದ ಪ್ರಬಂಧಗಳನ್ನು ಬರೆಯಿಸಿ ಅವುಗಳ ಮಂಡನೆಯ ನಂತರ ಚರ್ಚೆಗೆ ಅವಕಾಶ ಮಾಡಿಕೊಟ್ಟು , ಆಯಾ ವಿಚಾರ ಸಂಕಿರಣದ ಪ್ರಬಂಧಗಳನ್ನು ಒಟ್ಟಿಗೂಡಿಸಿ ಪುಸ್ತಕರೂಪದಲ್ಲಿ ತರುವ ಯೋಜನೆಯನ್ನು ಮುಖ್ಯವಾಗಿ ಕರ್ನಾಟಕ ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯಗಳು ಯಶಸ್ವಿಯಾಗಿ ಮಾಡಿಕೊಂಡು ಬಂದಿವೆ. ಈ ದಿಸೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮಾಡಿರುವ ಕೆಲಸ ಬಹಳ ಬೆಲೆಯುಳ್ಳದ್ದು. ಇಲ್ಲಿನ ಕನ್ನಡ ಅಧ್ಯಯನ ಪೀಠವು ೧೯೭೩ ರಿಂದ ಸತತವಾಗಿ, ಉತ್ತರ ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿ ಅಖಿಲ ಕರ್ನಾಟಕ

ಜಾನಪದ ಸಮ್ಮೇಳನಗಳನ್ನು ನಡೆಸಿಕೊಂಡು ಬಂದಿದೆ. ಈ ಸಮ್ಮೇಳನಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' ಎಂಬ ಹೆಸರಿನ ಸ್ಮರಣ ಸಂಪುಟಗಳ ರೂಪದಲ್ಲಿ ನಿಯತವಾಗಿ ಪ್ರಕಟಿಸುತ್ತಿದೆ. ೧೯೮೮ರವರೆಗೆ ೧೬ ಸಮ್ಮೇಳನಗಳು ನಡೆದಿದ್ದು ಅವುಗಳ ಫಲವಾಗಿ ಈಗ ಹದಿನಾರು ಸಂಪುಟಗಳು ಅಧ್ಯಯನಕ್ಕೆ ಲಭ್ಯ. ಕಥೆ, ಬಯಲಾಟ, ಜಾನಪದ ವಾದ್ಯ, ಭಜನೆ- ಲಾವಣಿ, ಉತ್ತರ ಕರ್ನಾಟಕದ ಆಯಗಾರರು, ಕರ್ನಾಟಕದ ಸ್ತ್ರೀ ಗ್ರಾಮದೇವತೆಗಳು, ಕರ್ನಾಟಕದ ಪುರುಷ ಗ್ರಾಮ ದೇವತೆಗಳು, ಜಾನಪದ ಹಬ್ಬಗಳು, ಮೈಲಾರಲಿಂಗ, ಏಳುಕೊಳ್ಳದ ಎಲ್ಲಮ್ಮ ......... ಇವೇ ಮೊದಲಾದ ಶೀರ್ಷಿಕೆಗಳ ಮೂಲಕ ಈ ಸಂಪುಟಗಳ ವಿಷಯ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಇಂಥ ವಿಚಾರ ಸಂಕಿರಣಗಳಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳ ಜಾನಪದ ವಿದ್ವಾಂಸರು ಪ್ರಬಂಧ ಮಂಡಿಸುವುದರಿಂದ ಆಯಾ ವಿಷಯದ ಪ್ರಾದೇಶಿಕ ವ್ಯತ್ಯಾಸಗಳನ್ನು ಕಂಡುಕೊಳ್ಳುವುದಕ್ಕೆ ಅದು ಸಹಕಾರಿ. ಆಯಾ ವರ್ಷದ ವಿಚಾರ ಸಂಕಿರಣ ಪ್ರಬಂಧಗಳನ್ನು ತಕ್ಷಣವೇ ಪುಸ್ತಕರೂಪದಲ್ಲಿ ಪ್ರಕಟಿಸುವುದು ಸಹಜವಾಗಿಯೇ ಕಷ್ಟ. ಹೀಗಾಗಿ ಬೇರೆ ಬೇರೆ ವರ್ಷಗಳಿಗೆ ಸಂಬಂಧಿಸಿದ ನಾಲ್ಕು ಸಂಪುಟಗಳು ಪ್ರಸಕ್ತ ವರ್ಷದಲ್ಲಿ ಪ್ರಕಟವಾಗಿವೆ. ಇವುಗಳಲ್ಲಿ ಮೊದಲನೆಯದು ಆಕಾಶ ಜಾನಪದ. ಇದು ಆಕಾಶ ಜಾನಪದವನ್ನು ಕುರಿತು ೧೯೮೫ರಲ್ಲಿ ಬೆಳಗಾವಿಯಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಲಾದ ಒಟ್ಟು ಒಂಬತ್ತು ಪ್ರಬಂಧಗಳನ್ನು ಒಳಗೊಂಡಿದೆ. ಇಲ್ಲಿ ಆಕಾಶ ಮತ್ತು ಆಕಾಶಕಾಯಗಳಾದ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಕುರಿತಂತೆ ಮತ್ತು ಗಾಳಿ, ಮೋಡ, ಮಳೆ ಮೊದಲಾದ ವಿದ್ಯಾಮಾನಗಳನ್ನು ಕುರಿತಂತೆ ತುಂಬಾ ವಿಸ್ತಾರವಾದ ಪ್ರಬಂಧಗಳಿವೆ. ಇದಲ್ಲದೆ ರೆಡ್ ಇಂಡಿಯನ್ ಜನರಲ್ಲಿ ಆಕಾಶ ಜಾನಪದ, ನೀಗ್ರೋಗಳ ಆಕಾಶ ಜಾನಪದ ಹಾಗೂ ಭಾರತದ ಬುಡಕಟ್ಟುಗಳಲ್ಲಿ ಆಕಾಶ ಜಾನಪದ ಎಂಬ ಮೂರು ಪ್ರಬಂಧಗಳೂ ಇವೆ. ಮಾನವನ ಆಸಕ್ತಿ ಕೆರಳಿಸಿದ ಪ್ರಾಕೃತಿಕ ವಿದ್ಯಾಮಾನಗಳಲ್ಲಿ ಆಕಾಶ ಮತ್ತು ಆಕಾಶಕಾಯಗಳೇ ಪ್ರಥಮ ಸಂಗತಿಗಳಾಗಿರಬೇಕು. ಜಗತ್ತಿನ ಎಲ್ಲ ಜನರಲ್ಲಿಯೂ ಅವು ಕುತೂಹಲದ ಕೇಂದ್ರಗಳಾಗಿವೆ. ಗ್ರಹಣ, ನಕ್ಷತ್ರ, ಸೂರ್ಯ ಚಂದ್ರರನ್ನು ಕುರಿತ ಜಾನಪದವು ಮಾನವನ ಕಲ್ಪನಾ ವಿಲಾಸದ ವ್ಯಾಪ್ತಿಯನ್ನು ಪ್ರತಿಬಿಂಬಿಸಿದರೆ, ಮೋಡ ಮಳೆಗಾಳಿಗಳನ್ನು ಕುರಿತ ಜಾನಪದವು ಅವನ ಅನುಭವ ಸಂಪನ್ನತೆಯನ್ನು ಪ್ರತಿಬಿಂಬಿಸುತ್ತಿದೆ. ಈ ಜಾನಪದ ಇಂದಿಗೂ ತನ್ನ ಪ್ರಸ್ತುತತೆಯನ್ನು ಕಾಯ್ದುಕೊಂಡಿದೆ. ಇಲ್ಲಿನ ಎಲ್ಲ ಪ್ರಬಂಧಗಳೂ ಒಂದೇ ಜಾಡಿನಲ್ಲಿ ಸಾಗಿವೆ. ವೇದ, ಪುರಾಣ ಹಾಗೂ ಕಾವ್ಯಗಳಲ್ಲಿ ಸಿಗುವ ಸಂಬಂಧಪಟ್ಟ ಉಲ್ಲೇಖಗಳು, ಜನಪದ ಸಾಹಿತ್ಯದ ಉಲ್ಲೇಖಗಳು, ಅನಂತರ ಇನ್ನಿತರ ರೂಪದ ಜಾನಪದ.

ಆಕಾಶದ ಬಹುತೇಕ ವಿದ್ಯಾಮಾನಗಳು ಒಂದಕ್ಕೊಂದು ಪೂರಕವಾಗಿರುವಂಥವು. ಹೀಗಾಗಿ ಮಳೆಯ ವಿಷಯ ಹೇಳುವಾಗ ಗಾಳಿ ಮತ್ತು ನಕ್ಷತ್ರಗಳ ಉಲ್ಲೇಖ ಬರುತ್ತದೆ. ಅದೇ ರೀತಿ ಸೂರ್ಯ ಚಂದ್ರರ ನಡುವಿನ ಸಂಬಂಧ; ಸೂರ್ಯನನ್ನು ಕುರಿತ ಕಥೆ ಎಂದರೆ ಅದರಲ್ಲಿ ಚಂದ್ರನ ಪ್ರಸಕ್ತಿ ಇರಲೇಬೇಕು. ಗ್ರಹಣಗಳ ವಿಷಯವೂ ಇದೇ ರೀತಿ. ಹೀಗಾಗಿ ಎಲ್ಲ ಲೇಖನಗಳಲ್ಲಿಯೂ ಕೆಲವೊಂದು ವಿಷಯಗಳು ಅನಿವಾರ್ಯವಾಗಿ ಪುನರಾವೃತ್ತಿಯಾಗಿವೆ. ಎಲ್ಲ ಪ್ರಬಂಧಗಳಲ್ಲಿಯೂ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸೂರ್ಯ ಚಂದ್ರ ಗ್ರಹಣಗಳ ಬಗೆಗೆ ಇರುವ ಜಾನಪದ ಈಗಾಗಲೇ ಸಾಕಷ್ಟು ಪರಿಚಿತವಾದದ್ದು. ಆದರೆ ಮೋಡ, ಗಾಳಿ, ನಕ್ಷತ್ರಗಳ ಬಗ್ಗೆಯೂ ವೈವಿಧ್ಯಮಯವಾದ ಜಾನಪದವಿದೆ ಎಂಬ ಸಂಗತಿಯನ್ನು ಈ ಪುಸ್ತಕದಿಂದಲೇ ತಿಳಿಯಬೇಕು. ಗಾಳಿ, ಮೋಡಗಳ ಪ್ರಭೇದಗಳಿಗೆ, ನಕ್ಷತ್ರಗಳಿಗೆ ಜನಪದರು ಕೊಟ್ಟಿರುವ ಹೆಸರುಗಳನ್ನು, ಅವರ ಕಲ್ಪನೆಗಳನ್ನು ತಿಳಿಯುವುದೇ ಒಂದು ರೋಚಕ ಸಂಗತಿ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಆಕಾಶ ಜಾನಪದದ ಸಂಗ್ರಹ ಮತ್ತು ವಿಶ್ಲೇಷಣೆಗಳೆರಡೂ ಒಟ್ಟೊಟ್ಟಿಗೆ ನಡೆದಿವೆ. ಸಂಗ್ರಹಿಸಬೇಕಾದ ಸಾಮಗ್ರಿ ಇನ್ನೂ ಬಹಳ ಇದೆ ಎಂಬ ಸೂಚನೆಯನ್ನೂ ಈ ಗ್ರಂಥ ನೀಡುತ್ತದೆ. ಉದಾಹರಣೆಗೆ, ಗ್ರಹಣಗಳನ್ನು ಕುರಿತ ಜಾನಪದ ಎಷ್ಟೊಂದು ವಿಪುಲವಾಗಿದೆ ಎಂದರೆ ಅದೇ ಒಂದು ಪ್ರತ್ಯೇಕ ಪ್ರಬಂಧವಾಗಬೇಕು. ಬಹುಶಃ ಆಕಾಶ ಜಾನಪದದ ಅಧ್ಯಯನದ ದಿಸೆಯಲ್ಲಿ ಇಲ್ಲಿ ನಡೆದಿರುವ ಕೆಲಸ ಒಂದು ಮೆಟ್ಟಿಲು ಮಾತ್ರ. ತೌಲನಿಕ ಅಧ್ಯಯನ ಹಾಗೂ ಆ ಮೂಲಕ ಸಾಂಸ್ಕೃತಿಕ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗುರುತಿಸುವುದು ಮುಂದಿನ ಮೆಟ್ಟಿಲಾಗಬಹುದು.

ಜಾನಪದ ಸಾಹಿತ್ಯ ದರ್ಶನದ ೧೩ನೇ ಸಂಪುಟದ ವಿಷಯ ಮೈಲಾರಲಿಂಗ. ಮೈಲಾರಲಿಂಗ ಎಂಬುದು ಕರ್ನಾಟಕ, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಕೆಲವು ಬುಡಕಟ್ಟು ಅಲೆಮಾರಿ ಜನಾಂಗಗಳಲ್ಲಿ ಹಾಗೂ ಕೃಷಿ ಸಮುದಾಯದ ಜನರಲ್ಲಿ ಪ್ರಭಾವಿಯಾಗಿರುವ ಒಂದು ಜಾನಪದ ಪುರುಷ ದೇವತೆ. ಬೇಡರ ವೇಷದಲ್ಲಿರುವ ಶಿವನೇ ಮೈಲಾರಲಿಂಗವಾಗಿದ್ದಾನೆ. ಮೈಲಾರಲಿಂಗನನ್ನ ಮರಾಠೀಯರು ಖಂಡೋಬಾ ಎಂದು ಕರೆಯುತ್ತಾರೆ. ಈತ ಬೇರೆಲ್ಲ ಜನಾಂಗದವರಿಗಿಂತ ಹೆಚ್ಚಾಗಿ ಕುರುಬರ ಬಹು ಮುಖ್ಯ ದೇವತೆ. ಈತನ ವಾಹನ ಶ್ವಾನ. ಈತನ ಹೆಸರಿನಲ್ಲಿ ದೀಕ್ಷೆ ತೊಟ್ಟ ಭಕ್ತರನ್ನು ಗೊರವರು ಎಂದು ಕರೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ನಡೆಯುವ ಮೈಲಾರ ಲಿಂಗನ ಜಾತ್ರೆ ಬಹಳ ಪ್ರಸಿದ್ಧ. ದೇಶದ ಬೇರೆ ಬೇರೆ ಭಾಗಗಳಿಂದ ಭಕ್ತರು ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಈ ಜಾತ್ರೆಗೆ ಬರುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಭಕ್ತರು ಸಲ್ಲಿಸುವ ಸರಪಣಿ ಪವಾಡ, ಮಿಣಿ ಪವಾಡ, ಮುಳ್ಳಿನ ಪವಾಡ, ಗೂಟದ ಪವಾಡ ಇತ್ಯಾದಿ ಸೇವೆಗಳು ಬಹಳ ವೈವಿಧ್ಯಮಯ ಹಾಗೂ ಉಗ್ರರೂಪದ ಸೇವೆಗಳು. ಜಾತ್ರೆಯ

ಕಾರ್ಣಿಕೋತ್ಸವ ಭಾಗ, ಭಕ್ತರ ಬಹುದೊಡ್ಡ ಆಕರ್ಷಣೆ. ಕಾರಣಿಕ ಹೇಳುವ ಗೊರವಯ್ಯನು ಸುಮಾರು ೩೦ ಅಡಿ ಎತ್ತರದ ಬಿಲ್ಲನ್ನು ಏರಿ ವರ್ಷದ ಆಗು ಹೋಗುಗಳನ್ನೆಲ್ಲ ಹೇಳುವುದು ಭಕ್ತ ಸಮುದಾಯದ ಪಾಲಿಗೆ ಒಂದು ಶೃಂಗ ಸಂದರ್ಭ. ಮೈಲಾರಲಿಂಗನ ಕಥೆ ಜೈನ, ವೀರಶೈವ, ವೈಷ್ಣವ ಧಾರ್ಮಿಕ ಪುರಾಣಗಳಲ್ಲಿ ಸಿಗುತ್ತದೆ. ಅತ್ಯಂತ ಸಮೃದ್ಧವಾದ ಜಾನಪದ ಸಾಹಿತ್ಯ, ವೈವಿಧ್ಯಮಯವಾದ ಹರಕೆ ಸೇವೆಗಳು, ನಂಬಿಕೆ ಆಚರಣೆಗಳನ್ನು ಒಳಗೊಂಡಿರುವ ಮೈಲಾರಲಿಂಗ ಸಂಪ್ರದಾಯವು ಜಾನಪದ ತಜ್ಞರನ್ನು ಆಕರ್ಷಿಸಿರುವುದು ಸಹಜವೇ ಆಗಿದೆ. ಪ್ರಸ್ತುತ ಗ್ರಂಥದಲ್ಲಿ ಮೈಲಾರ ಲಿಂಗನ ಕುರಿತಾದ ಈ ಎಲ್ಲ ಅಂಶಗಳ ಬಗ್ಗೆ ಪರಿಚಯಾತ್ಮಕ ಲೇಖನಗಳಿವೆ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಆಂಧ್ರ ಹಾಗೂ ಮಹಾರಾಷ್ಟ್ರಗಳಲ್ಲಿರುವ ಮೈಲಾರಲಿಂಗ ಸಂಪ್ರದಾಯದ ಸ್ವರೂಪವನ್ನು ಪರಿಚಯಿಸುವ ಬೇರೆ ಬೇರೆ ಲೇಖನಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಮೈಲಾರಲಿಂಗನ ಸಂಪ್ರದಾಯ ಕುರಿತು ವಿವೇಚಿಸುವ ಸಂದರ್ಭದಲ್ಲಿ ಹ.ಕ. ರಾಜೇಗೌಡರು, ಮೈಲಾರ ಅತ್ಯಂತ ಪ್ರಾಚೀನವಾದ ಶೈವ ಸಂಪ್ರದಾಯದ ದೇವತೆ. ಉತ್ತರ ಕರ್ನಾಟಕದ ಮೈಲಾರ ಮತ್ತು ದಕ್ಷಿಣ ಕರ್ನಾಟಕದ ಭೈರವ - ಇವೆರಡೂ ಮೂಲತಃ ಒಂದೇ ದೇವರು ಮತ್ತು ಸಂಪ್ರದಾಯವಾಗಿದ್ದು ಕಾಲಾಂತರದಲ್ಲಿ ಯಾವುದೋ ಕಾರಣಕ್ಕೆ ಈ ದೈವವನ್ನು ಎರಡು ಗುಂಪುಗಳು ಹಂಚಿಕೊಂಡಿರಬೇಕು ಎಂದು ಅಭಿಪ್ರಾಯಪಡುತ್ತಾ, ಈ ಎರಡೂ ಸಂಪ್ರದಾಯ ಹಾಗೂ ಸಾಹಿತ್ಯಗಳಲ್ಲಿರುವ ಸಾಮ್ಯತೆಗಳ ಉಲ್ಲೇಖದಿಂದ ತಮ್ಮ ಅಭಿಪ್ರಾಯವನ್ನು ಸಮರ್ಥಿಸಿಕೊಂಡಿದ್ದಾರೆ. ಒಕ್ಕಲಿಗರು ಭೈರವನ ರೂಪದಲ್ಲಿ, ಕುರುಬರು ಮೈಲಾರನ ರೂಪದಲ್ಲಿ ಪೂಜಿಸುತ್ತಿರುವ ದೈವ ಮೂಲತಃ ಒಂದೇ ಆಗಿದೆ ಎಂಬ ಅಂಶ ಗಮನಾರ್ಹ.

ಮೈಲಾರ ಲಿಂಗನ ಪರಿಕಲ್ಪನೆ ಹಾಗೂ ಆಚರಣೆಗಳು ಬಹಳ ವಿಶಿಷ್ಟವಾಗಿವೆ. ಬಹುಶಃ ಬೇಟೆಯೇ ಮನುಷ್ಯನ ಮುಖ್ಯ ವ್ಯವಸಾಯವಾಗಿದ್ದ ಕಾಲಮಾನದಲ್ಲಿ ಮೈಲಾರಲಿಂಗನ ಕಲ್ಪನೆ ಮೂಡಿರಬೇಕು. ಮೈಲಾರಲಿಂಗನ ಬೇಡರ ವೇಷದ ರೂಪ, ಆತನ ಆಯುಧಗಳು, ಆತನ ವಾಹನವಾದ ನಾಯಿ, ಗೊರವಯ್ಯಗಳು ಆಚರಣೆಯ ಸಂದರ್ಭದಲ್ಲಿ ನಾಯಿಯ ವರ್ತನೆಗಳನ್ನು ಅನುಕರಿಸುವುದು, ಅತ್ಯಂತ ಪ್ರಾಚೀನ ವೃತ್ತಿಯಾದ ಕುರಿ ಸಾಕಣೆಯನ್ನು ಮಾಡುವ ಕುರುಬರಿಗೆ ಮೈಲಾರಲಿಂಗ ಪ್ರಧಾನ ದೈವವಾಗಿರುವುದು ........ ಇವೆಲ್ಲವೂ ಈ ದೇವತೆಯ ಪ್ರಾಚೀನತೆಯನ್ನು ಸಮರ್ಥಿಸುತ್ತವೆ. ಕಾಲಾಂತರದಲ್ಲಿ ದೇವದೇವರುಗಳ ಪರಿಕಲ್ಪನೆಗಳು ಅನೇಕ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಮೂಲ ಸ್ವರೂಪದಿಂದ ಬಹುದೂರ ಸಾಗಿದರೂ, ಸಂಬಂಧಪಟ್ಟ ಆಚರಣೆ, ನಂಬಿಕೆ, ಕಥೆ ಮುಂತಾದವುಗಳು ಆಯಾ ದೇವತೆಯ ಹುಟ್ಟಿನ ಕಾಲದ ಸುಳಿವು ನೀಡುತ್ತವೆ.

ಈ ದೃಷ್ಟಿಯಿಂದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವುದಕ್ಕೆ ಮೈಲಾರಲಿಂಗ ಸಂಪ್ರದಾಯವು ಬಹುಮುಖ್ಯ ಮಾಹಿತಿಯನ್ನು ಕೊಡುತ್ತದೆ. ಈ ಸಂಪ್ರದಾಯದ ಎಲ್ಲ ವಿವರಗಳನ್ನೂ ಸರಿಯಾಗಿ ಅರ್ಥೈಸಬೇಕಾದರೆ ಮಾನವ ಶಾಸ್ತ್ರ ಹಾಗೂ ಸಮಾಜಶಾಸ್ತ್ರಗಳ ನೆರವು ಅತ್ಯಗತ್ಯವಾಗಿ ಬೇಕಾಗುತ್ತದೆ.

೧೫ನೇ ಸಂಪುಟದ ವಿಷಯ ಪುರಾಣ - ಐತಿಹ್ಯ - ಪವಾಡ- ದಂತಕಥೆ. ಜಾನಪದದಲ್ಲಿ ಈಗಾಗಲೇ ಪ್ರಚಲಿತವಿರುವ ಈ ಪರಿಕಲ್ಪನೆಗಳಿಗೆ ಇನ್ನಷ್ಟು ಸ್ಪಷ್ಟವಾದ ವ್ಯಾಖ್ಯೆ ನೀಡಿ ಅವುಗಳ ಸೂಕ್ಷ್ಮ ಪ್ರಭೇದಗಳನ್ನು ಅರ್ಥೈಸುವ ಹಾಗೂ ಈ ಪರಿಕಲ್ಪನೆಗಳ ಬಗ್ಗೆ ವಿಷದವಾಗಿ ಚರ್ಚಿಸುವ ಪ್ರಯತ್ನ ಇಲ್ಲಿದೆ. ಡಾ. ವಿವೇಕ ರೈ ಅವರ ಲೇಖನ ತುಂಬಾ ಪಾರಿಭಾಷಿಕವಾಗಿದ್ದು ಸುಲಭವಾಗಿ ಸಂವಹನವಾಗುವುದು ಕಷ್ಟವಾಗಿ ಕಾಣುತ್ತದೆ. ವದಂತಿ - ಪವಾಡ - ದಂತಕಥೆಗಳ ನಡುವಿನ ವ್ಯತ್ಯಾಸಗಳನ್ನು ವಿಶ್ಲೇಷಿಸುವ ವೀರಣ್ಣನವರ ಲೇಖನದಲ್ಲಿ ವದಂತಿಗೆ ಕೊಟ್ಟ ವ್ಯಾಖ್ಯಾನ ಸರಿಯಿದ್ದರೂ ಐತಿಹ್ಯಗಳನ್ನು ಆದಕ್ಕೆ ಉದಾಹರಣೆಯಾಗಿ ಕೊಟ್ಟಿರುವುದು ಸರಿಯಲ್ಲ. ಏಕೆಂದರೆ, ವದಂತಿಯಲ್ಲಿ ಕಲ್ಪನೆ ಇದೆ, ಉತ್ಪ್ರೇಕ್ಷೆ ಇದೆ, ಆದರೆ ಕಥೆ ಇಲ್ಲ. ದಂತಕಥೆ ಅಥವಾ ಐತಿಹ್ಯದಲ್ಲಿ ಕಥೆ ಇರುತ್ತದೆ. ಇದು ವದಂತಿ ಮತ್ತು ಐತಿಹ್ಯದ ನಡುವಿನ ಬಹುಮುಖ್ಯ ವ್ಯತ್ಯಾಸ. ಇದನ್ನು ಅವರು ಗಮನಿಸಬೇಕಿತ್ತು. ಪುರುಷೋತ್ತಮ ಬಿಳಿಮಲೆಯವರ ಪ್ರಬಂಧದಲ್ಲಿ ಐತಿಹ್ಯ ಎಂಬ ಪದದ ಹುಟ್ಟು, ಬಳಕೆಯ ಇತಿಹಾಸ, ಅರ್ಥವ್ಯಾಪ್ತಿ ಮತ್ತು ಚರಿತ್ರೆಗೂ ಐತಿಹ್ಯಕ್ಕೂ ಇರುವ ಸಂಬಂಧ ಇವುಗಳ ಬಗ್ಗೆ ಸುದೀರ್ಘ ಪರಿಚಯವಿದೆ. ಹಿ.ಶಿ. ರಾಮಚಂದ್ರ ಗೌಡರು ಪುರಾಣವನ್ನು ಕುರಿತ ತಮ್ಮ ಲೇಖನದಲ್ಲಿ, ಮನುಷ್ಯನು ಸಂಸ್ಕೃತಿಯನ್ನು ಪಡೆದುಕೊಂಡುದರ ಇತಿಹಾಸವನ್ನು ಪುರಾಣವು ಗರ್ಭೀಕರಿಸಿಕೊಂಡಿದೆ ಎಂದು ನಿರೂಪಿಸುತ್ತಾ, ಪುರಾಣದ ಬಗ್ಗೆ ನಮ್ಮ ಸಾಂಪ್ರದಾಯಿಕ ತಿಳುವಳಿಕೆಯನ್ನು ಪ್ರಶ್ನಿಸುತ್ತಾರೆ. ಅನೇಕ ಹೊಸ ವಿಚಾರಗಳನ್ನು ಮಂಡಿಸಿದ್ದಾರೆ. ಪುರಾಣವು, ಅದನ್ನು ಸೃಷ್ಟಿಸಿದ ಜನಗಳಿಗೆ ವಾಸ್ತವವಾಗಿತ್ತು ಎಂಬ ಅಂಶವನ್ನು ಮರೆಯದೆ ಅವುಗಳ ವಿಶ್ಲೇಷಣೆ ನಡೆಯಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಿಂದೂ ಧಾರ್ಮಿಕ ಪುರಾಣಗಳು; ಪುರಾಣ ಮತ್ತು ಕ್ರೈಸ್ತಧರ್ಮ; ಪುರಾಣಗಳು - ಇಸ್ಲಾಂ ಧರ್ಮ; ಪುರಾಣ - ಜೈನಧರ್ಮದ ಬಗ್ಗೆ ಒಟ್ಟು ನಾಲ್ಕು ಲೇಖನಗಳಿವೆ. ಇವುಗಳನ್ನು ಕ್ರಮವಾಗಿ ತಪಸ್ವೀಕುಮಾರ್, ವಿಲಿಯಂ ಮ್ಯಾಡ್ತ, ಸೈಯದ್ ಜಮೀರುಲ್ಲಾ ಷರೀಫ್, ಎಸ್.ಪಿ. ಪಾಟೀಲ ಬರೆದಿದ್ದಾರೆ. ಈ ವಿಭಿನ್ನ ಧರ್ಮಗಳಲ್ಲಿರುವ ಪುರಾಣಗಳ ಸ್ವರೂಪವನ್ನು ಪರಿಚಯಿಸುವ ಕೆಲಸವನ್ನು ಆಯಾ ಲೇಖಕರು ಸಮರ್ಥವಾಗಿ ಮಾಡಿದ್ದಾರೆ. ನಾವು ಜನಸಾಮಾನ್ಯರು ಯಾವುದನ್ನು ಧರ್ಮ ಎಂದು ಪರಿಭಾವಿಸಿದ್ದೇವೋ ಅದು ಪುರಾಣವನ್ನೇ

ಅವಲಂಬಿಸಿರುವಂಥದ್ದು. ಆಯಾ ಧರ್ಮದ ಪುರಾಣಗಳಲ್ಲಿ ಹೇಳಿರುವ ಅಂಶಗಳನ್ನೇ ಜನಸಾಮಾನ್ಯರು ಗಾಢವಾಗಿ ನಂಬಿಕೊಂಡು ಆಚರಣೆಗೆ ತಂದಿದ್ದಾರೆ. ಪ್ರತಿಯೊಂದು ಧರ್ಮದಲ್ಲಿಯೂ ಶಿಷ್ಟ ಪುರಾಣಗಳಿದ್ದಂತೆ ಜಾನಪದೀಯ ಪುರಾಣಗಳಿವೆ. ಅನಕ್ಷರಸ್ಥ ಜನಸಮುದಾಯದಲ್ಲಿ ಪರಂಪರಾಗತವಾಗಿ ಬಂದಿರುವ ಪುರಾಣಗಳ ನೆಲೆ ಹಾಗೂ ದೃಷ್ಟಿಕೋನಗಳು ಬಹಳ ಭಿನ್ನವಾಗಿರುವುದು ಸತ್ಯ. ಈ ದೃಷ್ಟಿಯಿಂದ, ಶಿಷ್ಟ ಪುರಾಣಗಳಿಗೂ ಜಾನಪದ ಪುರಾಣಗಳಿಗೂ ಇರುವ ಸಾಮ್ಯ - ವೈಷಮ್ಯ, ಕೊಳುಕೊಡುಗೆಗಳನ್ನು ಪರಿಚಯಿಸುವ ಲೇಖನವೂ ಸಹ ಪ್ರಸ್ತುತ ಗ್ರಂಥದಲ್ಲಿದ್ದಿದ್ದರೆ ಪುರಾಣಗಳ ಸರಿಯಾದ ಗ್ರಹಿಕೆಗೆ ನೆರವಾಗುತ್ತಿತ್ತು ಎಂದನ್ನಿಸುತ್ತದೆ.

೧೬ನೇ ಸಂಪುಟ ತೊಗಲು ಗೊಂಬೆಯಾಟವನ್ನು ಕುರಿತದ್ದು. ತೊಗಲು ಗೊಂಬೆಯಾಟ, ಸಾಕಷ್ಟು ತಾಂತ್ರಿಕತೆಯನ್ನು ಮೈಗೂಡಿಸಿಕೊಂಡಿರುವ ವಿಶಿಷ್ಟವಾದ ಜಾನಪದ ಕಲೆ. ದಕ್ಷಿಣ ಭಾರತದಲ್ಲಿ ಮಾತ್ರವಲ್ಲದೆ ಸಯಾಮ್, ಇಂಡೋಚೀನ, ಬಾಲಿ ಮೊದಲಾದ ಪೌರ್ವಾತ್ಯ ದೇಶಗಳಲ್ಲಿ ಪ್ರಚಲಿತವಿದ್ದು ಜಗತ್ತಿನಾದ್ಯಂತ ಜಾನಪದ ಆಸಕ್ತರನ್ನು ಆಕರ್ಷಿಸಿರುವ ಈ ಕಲೆ ಈಗ ತೀವ್ರಗತಿಯಲ್ಲಿ ಅಳಿವಿನ ಹಾದಿಯಲ್ಲಿದೆ. ದಕ್ಷಿಣ ಭಾರತದ ಎಲ್ಲ ಕಡೆಗಳಲ್ಲಿಯೂ ತೊಗಲು ಗೊಂಬೆಯಾಟದ ಕಲೆಯನ್ನು ಪ್ರದರ್ಶಿಸುವವರು ಮರಾಠಿ ಮೂಲದ 'ಕಿಳ್ಳೇಕ್ಯಾತರು' ಎಂಬ ಜನಾಂಗದವರು.

ತೊಗಲು ಗೊಂಬೆಯಾಟದ ರಂಗ ಪರಿಕರಗಳು, ಪ್ರದರ್ಶನ ವಿಧಾನಗಳು ಪರದೆಯ ಮೇಲೆ ತೋರಿಸುವ ಆಧುನಿಕ ಸಿನಿಮಾದ ಪ್ರಾಚೀನ ಮಾದರಿಯಂತಿವೆ. ಈ ಕಾರಣಕ್ಕಾಗೇ, ಇದು ಒಂದು ಕಾಲದಲ್ಲಿ ಗ್ರಾಮೀಣ ಜನಸಾಮಾನ್ಯರ ಪಾಲಿಗೆ ಮಾಯಾಲೋಕದ ಭ್ರಮೆ ಹುಟ್ಟಿಸಿ ಮನರಂಜಿಸುತ್ತಿತ್ತು. ಕಾಲಕ್ಕೆ ಸರಿಯಾಗಿ ಮಳೆಯಾಗದಿದ್ದಾಗ ತೊಗಲುಗೊಂಬೆಯವರಿಂದ ವಿರಾಟಪರ್ವದ ಕಥೆ ಆಡಿಸಿದರೆ ಮಳೆ ಆಗುತ್ತದೆ ಎಂಬ ನಂಬಿಕೆಯಿಂದಾಗಿ ಇದಕ್ಕೆ ಆರಾಧನಾಕಲೆಯ ಆಯಾಮವೂ ಪ್ರಾಪ್ತವಾಗಿತ್ತು. ಇಂಥ ಒಂದು ಕಲೆ, ಆಧುನಿಕ ಸಿನೆಮಾದ ಪ್ರವೇಶದಿಂದ ತನ್ನ ಆಕರ್ಷಣೆಯನ್ನು ಕಳೆದುಕೊಂಡಿತು. ಸಮಕಾಲೀನ ವಸ್ತು ವಿಧಾನಗಳಿಗೆ ಸ್ಪಂದಿಸದಿರುವುದೂ ಕೂಡ ಇದರ ಅವಸಾನಕ್ಕೆ ಮುಖ್ಯ ಕಾರಣ. ಚರ್ಮದಿಂದ ಗೊಂಬೆಗಳನ್ನ ಮಾಡುವುದು ತುಂಬಾ ಕಷ್ಟದ ಹಾಗೂ ನಾಜೂಕಿನ ಕೆಲಸ. ಗೊಂಬೆಗಳನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು, ಕೆಡದಂತೆ ಸಂರಕ್ಷಿಸುವುದು, ರಂಗವೇದಿಕೆಯ ನಿರ್ಮಾಣ ಇವೇ ಮೊದಲಾದ ತೊಂದರೆಗಳಿಂದಾಗಿ ಈ ಕಲೆಯನ್ನು ಮುಂದುವರೆಸಿಕೊಂಡು ಬರುವುದು ಕಠಿಣವಾಯಿತು. ಇಷ್ಟೆಲ್ಲಾ ಆದರೂ ಈ ಕಲೆಗೆ ತನ್ನದೇ ಆದ ವೈಶಿಷ್ಟ್ಯ, ಸೌಂದರ್ಯ, ಪ್ರಭಾವ ಇದೆ ಎಂಬುದನ್ನು

ಮರೆಯುವಂತಿಲ್ಲ. ಈ ಕಾರಣಕ್ಕಾಗಿಯೇ ಶಿಕ್ಷಣ ಪ್ರಸಾರ, ಹಸಿರು ಕ್ರಾಂತಿ, ಕುಟುಂಬ ಯೋಜನೆ, ಆರೋಗ್ಯ ಶಿಕ್ಷಣ ಮೊದಲಾದ ವಿಷಯಗಳ ಪ್ರಚಾರಕ್ಕೆ ಇದನ್ನು ಸ್ವಲ್ಪ ಮಟ್ಟಿಗೆ ಬಳಸಿಕೊಳ್ಳಲಾಗಿದೆ. ಇತಿಮಿತಿಗಳ ಪರಿಧಿಯಲ್ಲೇ ಇದರ ಸಂಪೂರ್ಣ ಸಾಧ್ಯತೆಗಳನ್ನು ದುಡಿಸಿಕೊಳ್ಳುವ ಬಗ್ಗೆ ಗಂಭೀರ ಪ್ರಯತ್ನಗಳು ನಡೆದಿಲ್ಲವೆಂಬುದು ಸತ್ಯ. ಪ್ರಸ್ತುತ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳಲ್ಲಿ ತೊಗಲು ಗೊಂಬೆಯಾಟದ ಪರಂಪರೆ, ಪ್ರಾಚೀನತೆ, ಪ್ರಾದೇಶಿಕ ವ್ಯತ್ಯಾಸಗಳು, ಗೊಂಬೆಗಳ ರಚನಾಕ್ರಮ, ಸಂರಕ್ಷಣೆ, ಈ ಕಲೆಯ ಸಾಹಿತ್ಯ, ಸಂಗೀತ, ಪ್ರದರ್ಶನ ಸಾಧ್ಯತೆ - ಹೀಗೆ ಸಂಬಂಧಪಟ್ಟ ಎಲ್ಲ ಅಂಶಗಳ ಒಂದು ಸ್ಥೂಲ ವಿವೇಚನೆ ಇದೆ. ಉದ್ದೇಶ ಪೂರ್ವಕ ಪ್ರಯತ್ನದಿಂದ ಈ ಕಲೆಯನ್ನು ಉಳಿಸಿಕೊಂಡು ಬರದಿದ್ದರೆ ಅದು ಕಣ್ಮರೆಯಾಗುವುದು ನಿಸ್ಸಂಶಯ ಎಂಬ ಅಂಶ ಈ ಎಲ್ಲ ಪ್ರಬಂಧಗಳ ಮುಖ್ಯ ಕಾಳಜಿಯಾಗಿದೆ.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಜಾನಪದ ಗಂಗೋತ್ರಿ ಎಂಬ ಹೆಸರಿನಲ್ಲಿ ತ್ರೈಮಾಸಿಕವನ್ನು ಹೊರತರುತ್ತಿದೆ. ಇದರಲ್ಲಿ ಜಾನಪದ ಸಂಶೋಧನೆ, ವಿಮರ್ಶೆ, ಮೂಲಸಂಗ್ರಹ, ಅಧ್ಯಯನ ಮುಂತಾದ ನಾನಾ ರೀತಿಯ ಬರಹಗಳಿರುತ್ತವೆ. ಹೀಗಾಗಿ ಇದು ಒಂದು ಪರಾಮರ್ಶನ ಪತ್ರಿಕೆಯ ಸ್ವರೂಪದ್ದಾಗಿದೆ. ಇಂಥ ಪತ್ರಿಕೆಗಳು ಜಾನಪದದಲ್ಲಿ ನಡೆಯುತ್ತಿರುವ ದಿಕ್ಕುದೆಸೆಗಳನ್ನು ತಿಳಿಯುವುದಕ್ಕೆ ಸಹಕಾರಿ. ೧೯೯೪ರ ಸಾಲಿನಲ್ಲಿ ಜಾನಪದ ಗಂಗೋತ್ರಿಯ ಎರಡು ಸಂಚಿಕೆಗಳು ಹೊರಬಂದಿವೆ. ಇದರಲ್ಲಿ ಒಂದು ಸಂಚಿಕೆಯು ಕೆಂಪಣ್ಣ ಗೌಡನ ಯಕ್ಷಗಾನ ಕಾವ್ಯಗಳ ಸಮೀಕ್ಷೆಗೆ ಸಂಬಂಧಿಸಿದ ಒಂದು ವಿಶೇಷ ಸಂಚಿಕೆ. ಕೆಂಪಣ್ಣ ಗೌಡ ೧೫ನೇ ಶತಮಾನದಲ್ಲಿದ್ದ ಒಬ್ಬ ಯಕ್ಷಗಾನ ಕವಿ. ಆತನ ಕರಿರಾಯ ಚರಿತ್ರೆ, ನಳಚರಿತ್ರೆ ಮತ್ತು ಶನಿಮಹಾತ್ಮೆ ಎಂಬ ಮೂರು ಯಕ್ಷಗಾನ ಕೃತಿಗಳು ದೊರೆತಿವೆ. ಕೆಂಪಣ್ಣ ಗೌಡನೇ ಕನ್ನಡದ ಮೊತ್ತಮೊದಲ ಯಕ್ಷಗಾನ ಕರ್ತೃ. ಅವನು ಮಂಡ್ಯಜಿಲ್ಲೆಯ ನಾಗಮಂಗಲ ತಾಲೂಕಿನ ಅಂದೇನ ಹಳ್ಳಿಯವನು ಎಂಬ ಸಂಶೋಧನೆ ಹಾಗೂ ಅವನ ಕೃತಿಗಳ ಪ್ರಥಮ ಪರಿಚಯ ನೀಡಿದ ಹೆಗ್ಗಳಿಕೆ ಹ.ಕ. ರಾಜೇಗೌಡರಿಗೆ ಸಲ್ಲುತ್ತದೆ. ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಆತನ ಮೂರೂ ಕೃತಿಗಳನ್ನು ಒಂದೇ ಸಂಪುಟದಲ್ಲಿ ಪ್ರಕಟಿಸಿದೆ.

ಕನ್ನಡದಲ್ಲಿ ಕರಿಭಂಟನ ಕಥೆ ಒಂದು ಜಾನಪದ ಚಾರಿತ್ರಿಕ ಕಥೆಯಾಗಿ ಬಹಳ ಪ್ರಸಿದ್ಧವಾಗಿದೆ. ಇದು ನಿಜವಾಗಿ ನಡೆದದ್ದು ಎಂದು ಆಧಾರಗಳೊಂದಿಗೆ ಜನಪದರು ನಿರೂಪಿಸುತ್ತಾರೆ. ಐತಿಹಾಸಿಕ ಗುಣವನ್ನು ಪಡೆದಿರುವ ಕುಮಾರ ರಾಮನ ಚರಿತ್ರೆಯನ್ನು ಬಿಟ್ಟರೆ ಅಷ್ಟೇ ಜನಪ್ರಿಯತೆ ಗಳಿಸಿರುವ ಕಥೆ ಕರಿಭಂಟನದ್ದು. ಕರಿಭಂಟನ ಕುರಿತಾಗಿ ಮೌಖಿಕ ರೂಪದಲ್ಲಿ ಪ್ರಚಲಿತವಿರುವ ಕಥೆ ಮತ್ತು

ಗೀತೆಗಳೇ ಕೆಂಪಣ್ಣ ಗೌಡನ ಕೃತಿರಚನೆಗೆ ಆಧಾರ. ಕೆಂಪಣ್ಣಗೌಡನ ಕೃತಿ ತನ್ನ ಸತ್ವದಿಂದಾಗಿ, ಅವನ ನಂತರ ಇನ್ನೂ ಅನೇಕರು ಅದೇ ವಿಷಯ ಕುರಿತು ಬೇರೆ ಬೇರೆ ಪ್ರಕಾರಗಳಲ್ಲಿ ಕೃತಿರಚನೆ ಮಾಡುವುದಕ್ಕೆ ಪ್ರೇರಣೆ ಒದಗಿಸಿತು. ಮೌಖಿಕ ಹಾಗೂ ಲಿಖಿತ ರೂಪದಲ್ಲಿರುವ ಕರಿಭಂಟನ ಕಥೆಗಳ ಒಂದು ತೌಲನಿಕ ಅಧ್ಯಯನ ವೈ.ಸಿ. ಭಾನುಮತಿಯವರ ಲೇಖನದ ವಸ್ತು. ಕೆಂಪಣ್ಣಗೌಡನ ಕೃತಿಯ ವೈಶಿಷ್ಟ್ಯಗಳ ವಿವರವಾದ ಪರಿಚಯ ಈ ಲೇಖನದಲ್ಲಿದೆ.

ಕರಿಭಂಟನ ಕತೆಯಂತೆಯೇ ಶನಿಮಹಾತ್ಮನ ಕಥೆಯೂ ಜನಪದರಲ್ಲಿ ಪ್ರಚಲಿತವಿರುವಂಥದ್ದು. ಶನಿಮಹಾತ್ಮನ ಕಥಾ ಪಾರಾಯಣ ಮಾಡಿಸುವುದು ಹಳೆಯ ಮೈಸೂರು ಪ್ರಾಂತದಲ್ಲಿ ವ್ಯಾಪಕವಾಗಿ ಪ್ರಚಲಿತವಿರುವ ಸಂಪ್ರದಾಯ. ಇಂಥ ಶನಿಮಹಾತ್ಮನ ಕಥೆಯಲ್ಲಿರುವ ಪವಾಡಗಳನ್ನು ಯಥಾರೀತಿ ಚಿತ್ರಿಸದೆ, ಸಮಕಾಲೀನ ಸಮಾಜದ ಜನರ ಧೋರಣೆಗಳನ್ನು ಕೆಂಪಣ್ಣಗೌಡ ಅಭಿವ್ಯಕ್ತಿಸಿದ್ದಾನೆ. ಪಾತ್ರ ಪೋಷಣೆ, ಸನ್ನಿವೇಶ ರಚನೆಯಲ್ಲಿ ಸೋಪಜ್ಞತೆ, ಸರಳತೆ ಎದ್ದು ಕಾಣುತ್ತದೆ ಎಂದು ಅರ್ಜುನಪುರಿ ಅಪ್ಪಾಜಿಗೌಡ ಅಭಿಪ್ರಾಯ ಪಡುತ್ತಾರೆ. ಕೆಂಪಣ್ಣಗೌಡನ ಸಾಮಾಜಿಕ ಪ್ರಜ್ಞೆ, ಕೆಂಪಣ್ಣಗೌಡನ ಕಾವ್ಯಗಳಲ್ಲಿ ಜಾನಪದ, ಕೆಂಪಣ್ಣಗೌಡನ ಪಾತ್ರ ಸೃಷ್ಟಿ ಕುರಿತು ಅನುಕ್ರಮವಾಗಿ ಚಕ್ಕೆರೆ ಶಿವಶಂಕರ್, ಸೋಮಶೇಖರಗೌಡ ಹಾಗೂ ಜಿ.ಪಿ. ಮಂಜುನಾಥನ್ ಅವರು ಬರೆದಿರುವ ಲೇಖನಗಳು ಕೆಂಪಣ್ಣಗೌಡನ ಸಾಹಿತ್ಯದ ಸ್ವರೂಪ ಹಾಗೂ ಆತನ ಪ್ರತಿಭೆಯನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿವೆ. ಶಿಷ್ಟ ಕವಿಯೊಬ್ಬನ ಸಾಹಿತ್ಯದಂತೆಯೇ ಜಾನಪದ ಕವಿಯೊಬ್ಬನ ಸಾಹಿತ್ಯವನ್ನು ವಿವರವಾಗಿ ವಿಶ್ಲೇಷಣೆಗೆ ಒಳಪಡಿಸಿರುವ ಪ್ರಥಮ ಪ್ರಯತ್ನವಾಗಿ ಈ ಸಂಚಿಕೆ ಗಮನ ಸೆಳೆಯುತ್ತದೆ.

ಜಾನಪದ ಗಂಗೋತ್ರಿಯ ಇನ್ನೊಂದು **ಸಂಚಿಕೆಯಲ್ಲಿ (೪ನೇ ಸಂಚಿಕೆ,** ಮಾರ್ಚ್ ೧೯೯೪) ಬುಡಕಟ್ಟು ಜನಾಂಗಗಳ **ಅಧ್ಯಯನಕ್ಕೆ** ಸಂಬಂಧಿಸಿದ ಲೇಖನಗಳಿವೆ. ಶಿಷ್ಟರ ದೃಷ್ಟಿಯಲ್ಲಿ ಹೇಗೆ ಜಾನಪದ ಅಲಕ್ಷಿತವಾಗಿತ್ತೋ ಅದೇ ರೀತಿ ಜಾನಪದದ ದೃಷ್ಟಿಯಲ್ಲಿ ಬುಡಕಟ್ಟು ವರ್ಗದ ಜಾನಪದ ಅಲಕ್ಷಿತವಾಗಿದೆ. ಇದುವರೆಗಿನ ಜಾನಪದ ಅಧ್ಯಯನವೆಲ್ಲವೂ ಸಂಗ್ರಹಕ್ಕೆ ಸುಲಭವಾಗಿ ಕೈಗೆಟುಕುವಂತಹ ಗ್ರಾಮೀಣ ಜಾನಪದದತ್ತಲೇ ಕೇಂದ್ರೀಕೃತವಾಗಿತ್ತು. ಸಂಗ್ರಹಣೆಯ ತೊಡಕಿನಿಂದಾಗಿ ಬುಡಕಟ್ಟು ಜನಾಂಗಗಳನ್ನು ದೂರವೇ ಇರಿಸಲಾಗಿತ್ತು. ಆದರೆ ಜಾನಪದದ ಕೆಲವೊಂದು ಅಂಶಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಕ್ಕೆ ಬುಡಕಟ್ಟು ಜನಾಂಗಗಳ ಅಧ್ಯಯನ ತುಂಬಾ ಅಗತ್ಯ. ನಾಗರಿಕತೆಯ ಪ್ರಭಾವದಿಂದಾಗಿ ಬುಡಕಟ್ಟುಗಳ ಬದುಕಿನಲ್ಲಿ ಬಹಳ ಬದಲಾವಣೆಗಳಾಗುತ್ತಿವೆ. ಅವರ ಸಾಂಸ್ಕೃತಿಕ ವೈಶಿಷ್ಟ್ಯಗಳು ಅಳಿದು ಹೋಗುತ್ತಿವೆ. ಆದ್ದರಿಂದ ಈ ಸಮಾಜ

ಮತ್ತು ಸಂಸ್ಕೃತಿಗಳ ಅಧ್ಯಯನ ಎಷ್ಟು ಬೇಗ ನಡೆದರೆ ಅಷ್ಟು ಒಳ್ಳೆಯದು. ಈ ದಿಸೆಯಲ್ಲಿ ಆದಿವಾಸಿ ಬುಡಕಟ್ಟುಗಳನ್ನು ಕುರಿತಂತೇ ಜಾನಪದ ಅಕಾಡೆಮಿ ಅನೇಕ ಕಾರ್ಯಕ್ರಮಗಳನ್ನು, ವಿಚಾರ ಸಂಕಿರಣಗಳನ್ನು, ದಾಖಲಾತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅನೇಕರು ವೈಯಕ್ತಿಕವಾಗಿಯೂ ತಮ್ಮ ತಮ್ಮ ಪರಿಸರದ ಬುಡಕಟ್ಟು ಜಾನಪದ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಸಂಚಿಕೆಯಲ್ಲಿ ಉತ್ತರ ಕರ್ನಾಟಕದ ಪ್ರಮುಖ ಬುಡಕಟ್ಟು ಜನಾಂಗಗಳಾದ ಹಾಲಕ್ಕಿ ಒಕ್ಕಲಿಗರು ಹಾಗೂ ಗೊಂಡರು ಮತ್ತು ಗೌಳಿಗರನ್ನು ಕುರಿತ ಮಾಹಿತಿ ಪೂರ್ಣವಾದ ಲೇಖನಗಳಿವೆ. ಇವುಗಳನ್ನು ಕ್ರಮವಾಗಿ ಜಿ.ಎಸ್. ಭಟ್ಟ, ಹುಚ್ಚಪ್ಪಮಾಸ್ತರ ಹಾಗೂ ಪ್ರಮೋದ ಹೆಗಡೆ ಬರೆದಿದ್ದಾರೆ. ಇಲ್ಲಿ ಆಯಾ ಜನಾಂಗದ ಹುಟ್ಟಿನ ಮೂಲ, ಅವರ ಜೀವನ ವಿಧಾನಗಳು, ಆಚರಣೆ ಮತ್ತು ಸಂಪ್ರದಾಯಗಳು, ಸ್ಥಿತಿಗತಿ ಇವೇ ಮೊದಲಾದ ಅಂಶಗಳ ಆಮೂಲಾಗ್ರ ಪರಚಯವಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಲೆಯ ಕುಡಿಯರು, ಕೊರಗರು, ಮರಾಠಿ ನಾಯ್ಕರು ಹಾಗೂ ಕುಡುಬಿಗಳ ಬಗ್ಗೆ ಅಭಯ ಕುಮಾರ್, ಸೈದ್ಧಾಂತಿಕ ರೂಪದ ಲೇಖನ ಬರೆದಿದ್ದಾರೆ. ಈ ಸಂಚಿಕೆಯಲ್ಲಿ, ಹಿರಿಯ ತಲೆಮಾರಿನ ಪ್ರಮುಖ ಜಾನಪದ ವಿದ್ವಾಂಸರಾದ ಡಾ. ಗದ್ದಗೀಮಠರ ಜಾನಪದ ಸಂಗ್ರಹ ಮತ್ತು ಸಂಶೋಧನ ವಿಧಾನಗಳನ್ನು ಕುರಿತು ಮೃತ್ಯುಂಜಯ ಹೊರಕೇರಿ ಅವರು ಹಾಗೂ ಗೊರೂರು ಮತ್ತು ಜಾನಪದ ಎಂಬ ಶೀರ್ಷಿಕೆಯಲ್ಲಿ ಸಿ.ಜಿ. ವೆಂಕಟಯ್ಯ ಅವರು ಬರೆದಿರುವ ಲೇಖನಗಳೂ ಇವೆ.

ಜಾನಪದ ವಿಶ್ಲೇಷಣೆಗೆ ಸಂಬಂಧಿಸಿದ ಇನ್ನೆರಡು ಪುಸ್ತಕಗಳು ಡಾ.ಎಸ್.ಪಿ. ಪದ್ಮಪ್ರಸಾದ್ ಅವರ 'ಮಳೆ ಒಂದು ಜಾನಪದೀಯ ಅಧ್ಯಯನ,' ಸತ್ಯನಾರಾಯಣಭಟ್ ಅವರ 'ಲಿಂಗ ಮತ್ತು ಕಂತೆ'. ಮಳೆಯನ್ನು ಕುರಿತ ಜಾನಪದ, ಆಕಾಶ ಜಾನಪದದ ಒಂದು ಮುಖ್ಯ ಭಾಗ. ಕೃಷಿಯೇ ಮುಖ್ಯ ಜೀವನಾಧಾರವಾದ ಹಾಗೂ ಕೃಷಿಗಾಗಿ ಮಳೆಯನ್ನೇ ಅವಲಂಬಿಸಿರುವ ಭಾರತದಂತಹ ದೇಶದಲ್ಲಿ ಮಳೆಗೆ ಬಹಳ ಮಹತ್ವವಿದೆ. ತಮ್ಮ ಬದುಕಿನ ಸರ್ವ ಸುಖಸಂತೋಷಗಳಿಗೂ ಕಾರಣವಾದ ಮಳೆಯ ಬಗ್ಗೆ ಇಲ್ಲಿ ಅಪಾರವಾದ ಜಾನಪದ ಸೃಷ್ಟಿಯಾಗಿದೆ. ಅಷ್ಟೆ ಅಲ್ಲ ಅದು ತುಂಬ ಜೀವಂತವಾಗಿ ಉಳಿದಿದೆ. ಮಳೆಯ ಸಂಬಂಧವಾಗಿ ಲೆಕ್ಕವಿಲ್ಲದಷ್ಟು ಆಚರಣೆಗಳಿವೆ. ಅಪಾರವಾದ ಸಾಹಿತ್ಯವಿದೆ. ಮಳೆ ಜಾನಪದದ ವೈವಿಧ್ಯ ಬೆರಗು ಹುಟ್ಟಿಸುವಂಥದ್ದು, ಪದ್ಮಪ್ರಸಾದ್ ಅವರು ಇಂಥ ಅಪೂರ್ವ ಜಾನಪದವನ್ನು ವಿಸ್ತೃತವಾಗಿ ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದಾರೆ. ಈ ಜಾನಪದದ ಸಂಗ್ರಹಣೆಗಾಗಿ ಅವರು ಸುಮಾರು ಐದು ವರ್ಷದಿಂದ ಶ್ರಮಿಸಿದ್ದಾರೆ. ಹೈದರಾಬಾದ್‌ನಿಂದಾರಂಭಿಸಿ ಕೋಲಾರ, ಗುಡಿಬಂಡೆಗಳವರೆಗೆ

ಅವರ ಕ್ಷೇತ್ರಕಾರ್ಯದ ವ್ಯಾಪ್ತಿ ಇದೆ. ದೊರೆತ ಮಾಹಿತಿಯನ್ನು ಆರು ಅಧ್ಯಾಯಗಳಲ್ಲಿ ಹಂಚಿಕೊಂಡಿದ್ದು, ಮಳೆಕರೆಯುವ ಆಚರಣೆಗಳು, ಮಳೆತಡೆಯುವ ಆಚರಣೆಗಳು, ಮಳೆ ಆಚರಣೆಗಳು ಹಾಗೂ ನಂಬಿಕೆಗಳ ವಿಶ್ಲೇಷಣೆ, ಮಳೆ ಲೆಕ್ಕಾಚಾರದ ಕೆಲವು ಅಂಶಗಳು, ಕನ್ನಡ ಜನಪದ ಗೀತೆಗಳಲ್ಲಿ ಮಳೆ ಮುಂತಾದ ಶೀರ್ಷಿಕೆಗಳಲ್ಲಿ ಅಧ್ಯಯನ ಮಾಡಿದ್ದಾರೆ. ಗ್ರಂಥದ ಕೊನೆಯಲ್ಲಿ ಮಳೆಯ ಗಾದೆ, ಜನಪದಗೀತೆ, ಪೂರಕ ಟಿಪ್ಪಣಿ ಹಾಗೂ ಪತ್ರಿಕಾ ಸಾಕ್ಷ್ಯಗಳು ಮೊದಲಾದ ಪೂರಕ ಮಾಹಿತಿಯನ್ನು ಕೊಟ್ಟಿದ್ದಾರೆ. ಕರ್ನಾಟಕವೇ ಪ್ರಧಾನ ದೃಷ್ಟಿಯಲ್ಲಿದ್ದರೂ ಸಮಾನಾಂತರತೆ ಹಾಗೂ ವೈರುಧ್ಯಗಳನ್ನು ತೋರಿಸುವ ದೃಷ್ಟಿಯಿಂದ ಬೇರೆ ಬೇರೆ ದೇಶಗಳ ಮಳೆ ಜಾನಪದದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಪದ್ಮ ಪ್ರಸಾದರ ಕೃತಿಯಲ್ಲಿ ಸಮೃದ್ಧ ಮಾಹಿತಿ ಇದೆ. ಆದರೂ, ಬಸವರಾಜ ಅಳಕವಾಡಿ, ಶ್ರೀಕಂಠಕೂಡಿಗೆ, ಸಂಧ್ಯಾರೆಡ್ಡಿ, ಜೇನಹಳ್ಳಿ ಸಿದ್ದಲಿಂಗಪ್ಪ ಮೊದಲಾದವರು ಮಳೆ ಜಾನಪದದ ಬೇರೆ ಬೇರೆ ಅಂಶಗಳ ಬಗ್ಗೆ ಬರೆದಿರುವ ಮಾಹಿತಿ ಪೂರ್ಣವಾದ ಲೇಖನಗಳ ಹಿನ್ನೆಲೆಯಲ್ಲಿ ನೋಡಿದಾಗ ಪದ್ಮ ಪ್ರಸಾದರ ಕೃತಿ ಹೆಚ್ಚೇನೂ ಹೊಸ ಅಂಶಗಳನ್ನು ಬೆಳಕಿಗೆ ತಂದಿಲ್ಲ ಅನ್ನಿಸುತ್ತದೆ. ಮಳೆಯ ಲೆಕ್ಕಾಚಾರ ಪದ್ಧತಿ ಎಂಬ ಅಧ್ಯಾಯವನ್ನು ಗಮನಿಸಿದರೆ ಇಲ್ಲಿ ಆ ಬಗ್ಗೆ ಒಂದು ಸ್ಥೂಲ ಚಿತ್ರ ಮಾತ್ರ ಸಿಗುತ್ತದೆ. ಮಳೆಯ ಪ್ರಮಾಣ ಮತ್ತು ಹದವನ್ನು ಹೇಳುವುದಕ್ಕೆ ಜನಪದರು ಸೃಷ್ಟಿಸಿರುವ ಪದರೂಪಗಳು ಬಹಳ ವಿಶಿಷ್ಟವಾಗಿವೆ. ಇವು ಒಂದೊಂದು ಪ್ರದೇಶದಲ್ಲಿ ಒಂದೊಂದು ತೆರನಾಗಿವೆ. ಕಂಬಳಿಹದ, ಒಟ್ಟಹದ, ದೋಣಿಹದ, ಬಿತ್ತನೆ ಹದ, ಹನಿಮಳೆ, ಹದಮಳೆ, ಜಡಿಮಳೆ, ಮಾರಿಮಳೆ, ದೆವ್ವ ಮಳೆ, ಇತ್ಯಾದಿ. ಆದರೆ ಇಂಥ ವಿವರಗಳನ್ನು ಪದ್ಮಪ್ರಸಾದ್ ಗುರುತಿಸಿಲ್ಲ. ಅವರು ಕೊಡುವ ಮಾಹಿತಿಯಲ್ಲಿ ಜಾನಪದೀಯವಾದುದು ತೀರ ಕಡಿಮೆಯಾಗಿದೆ. ಇದೇ ರೀತಿ ಕೆಲವೊಂದು ಆಚರಣೆಗಳ ವಿಶ್ಲೇಷಣೆಯಲ್ಲಿ ತಪ್ಪು ಊಹೆಗಳು ಕೆಲಸ ಮಾಡಿದಂತೆ ತೋರುತ್ತದೆ. ಮಳೆಯನ್ನು ಕರೆಯುವುದಕ್ಕೆ ಪ್ರಾಣಿಗಳನ್ನೊಳಗೊಳ್ಳುವ ಆಚರಣೆಗಳನ್ನು ವಿಶ್ಲೇಷಿಸುತ್ತ 'ಇಲ್ಲಿ ಕಪ್ಪು ಪ್ರಾಣಿಗಳನ್ನು ಬಲಿಕೊಡಲಾಗುವುದು. ಈ ಕಪ್ಪು ಬಣ್ಣಕ್ಕೂ ಮೋಡಗಳಿಗೂ ವರ್ಣ ಸಾಮ್ಯತೆ ಇರುವ ಕಾರಣ, ಆ ಪ್ರಾಣಿಗಳಿಂದ ರಕ್ತ ಸುರಿಯುವಂತೆ, ಮೋಡಗಳಿಂದ ಮಳೆ ಸುರಿಯುತ್ತದೆ. ಆದ್ದರಿಂದ ಇದು ಅನುಕರಣಾತ್ಮಕ ಮಾಟ' ಎನ್ನುತ್ತಾರೆ. ಆದರೆ, ಮಳೆಯ ಆಚರಣೆಗಳಲ್ಲಿ ಬಹುವಾಗಿ ಬಳಕೆಯಾಗುವ ಕಪ್ಪೆ, ಕತ್ತೆ, ನರಿ ಮೊದಲಾದ ಪ್ರಾಣಿಗಳ ಬಣ್ಣ ಕಪ್ಪಲ್ಲ. ಆಚರಣೆಯಲ್ಲಿ ಇವುಗಳು ಬಳಕೆಯಾಗುವ ರೀತಿ ನೋಡಿದಾಗ ಮಳೆರಾಯನ ಪ್ರತೀಕಗಳನ್ನು ಹಿಂಸೆ ಮಾಡುವ ಮೂಲಕ ಮಳೆರಾಯನನ್ನು ಕೆರಳಿಸುವ ಉದ್ದೇಶ ಕಾಣುತ್ತದೆ.

ಮಳೆಯನ್ನು ಕುರಿತಾಗಿ ಬಂದಿರುವ ಬಿಡಿ ಲೇಖನಗಳು ಬೇರೆ ಬೇರೆ ಗ್ರಂಥಗಳಲ್ಲಿ ಚದುರಿಹೋಗಿರುವ ಕಾರಣ ಆ ಎಲ್ಲ ಮಾಹಿತಿಯನ್ನೂ ಒಂದೆಡೆ ಒಳಗೊಂಡಿರುವ ಪದ್ಮಪ್ರಸಾದ್ ಅವರ ಕೃತಿಗೆ ತನ್ನದೇ ಆದ ಸ್ಥಾನವಿದೆ. ಅಚ್ಚುಕಟ್ಟಾಗಿ ಮುದ್ರಿತವಾಗಿರುವುದು ಕೂಡ ಈ ಪುಸ್ತಕದ ಒಳ್ಳೆಯ ಅಂಶ.

'ಲಿಂಗ ಮತ್ತು ಕಂತೆ' ಇದು, ತುಂಬ ವಿಶಿಷ್ಟವಾದ ವಿಷಯದತ್ತ ಬೆಳಕು ಚೆಲ್ಲುವ ಒಂದು ಉತ್ತಮ ಕೃತಿ. ವೀರಶೈವ ಧರ್ಮೀಯರಾದ ಲಿಂಗಾಯತರಲ್ಲಿ ಇಷ್ಟಲಿಂಗ ಧಾರಣೆಯ ಪದ್ಧತಿ ಇದೆ. ಇಷ್ಟ ಲಿಂಗವನ್ನು ಅಂಗೈಯಲ್ಲಿಟ್ಟುಕೊಂಡು ಅದನ್ನು ಪತ್ರಪುಷ್ಪಗಳಿಂದ ಪೂಜಿಸಿ, ಪೂಜೆಯ ನಂತರ ಪುನಃ ಅದನ್ನು ಕರಡಿಗೆಯೊಳಗೆ ಇರಿಸುತ್ತಾರೆ. ಇಷ್ಟ ಲಿಂಗದಲ್ಲಿ ಬಳಪದ ಕಲ್ಲಿನ ಪಾಣಿಪೀಠವಿರುತ್ತದೆ. ಅದಕ್ಕೆ ಕಂತೆ ಎಂಬ ಆವರಣವಿರುತ್ತದೆ. ವೀರಶೈವ ಪರಿಕಲ್ಪನೆಯ ಪ್ರಕಾರ ಈ ಬಳಪದ ಪಾಣಿಪೀಠ ಶರೀರದೊಳಗಣ ಆತ್ಮ ಸ್ವರೂಪಿ. ಕಂತೆಯು ದೇಹಕ್ಕೆ ಸಮಾನ. ಲಿಂಗಕ್ಕೆ ಕಂತೆಯನ್ನು ನಿರ್ಮಿಸುವ ಕಂತೆಗಾರರ ಪ್ರಕಾರ ಪೀಠ ಅಥವಾ ಬರಿಗಲ್ಲಿನ ಲಿಂಗು ಬೆತ್ತಲೆ. ಅದಕ್ಕೆ ಅರಿವೆ ತೊಡಿಸುವುದು ಕಂತೆಯ ಉದ್ದೇಶ. ಈ ಸಂದರ್ಭದಲ್ಲಿ ಕಂತೆ ಎಂಬ ಪದಕ್ಕೆ ದೇಹ ಎಂಬ ಅರ್ಥವಿರುವುದನ್ನು 'ಅವನು ಕಂತೆ ಒಗೆದ' ಎಂಬ ಆಡುಮಾತಿನ ರೂಪದಲ್ಲಿ ಗುರುತಿಸಬಹುದು. ಕಂತೆ ಶಬ್ದಕ್ಕೆ ಜಂಗಮರ ನಿಲುವಂಗಿ, ಕಪಿನಿ, ಹೊದೆಯುವ ಹಚ್ಚಡ ಎಂಬ ಅರ್ಥಗಳೂ ಇವೆ. ಸಾಮಾನ್ಯವಾಗಿ ಕಂತೆಯ ನಿರ್ಮಾಣದಲ್ಲಿ ವಿವಿಧ ಮೂಲಿಕಾ ರಸಗಳು, ತುಪ್ಪ ಹಾಗೂ ತೈಲಗಳು ಪ್ರಧಾನವಾಗಿರುತ್ತವೆ. ಇಲ್ಲಿ ಬಳಕೆಯಾಗುವ ವಸ್ತುಗಳಿಗೆ ಔಷಧೀಯ ಗುಣವಿರುವುದು ಗಮನಿಸಬೇಕಾದ ಅಂಶ.

ಲಿಂಗಕ್ಕೆ ಕಂತೆಯನ್ನು ನಿರ್ಮಿಸುವುದೇ ಒಂದು ಕಾಯಕ. ಇದು ನೇಮನಿಷ್ಠೆಗಳಿಂದ, ಅತ್ಯಂತ ಶ್ರದ್ಧೆಯಿಂದ ಮಾಡಬೇಕಾದ ಕೆಲಸ. ಕಂತೆಯನ್ನು ಮಾಡುವವರು, ಅದಕ್ಕೆ ಬಳಸುವ ವಸ್ತುಗಳ ಗುಣಧರ್ಮ ಹಾಗೂ ಕಂತೆಯ ಹದದ ಬಗ್ಗೆ ಸರಿಯಾದ ಅರಿವು ಹೊಂದಿರಬೇಕಾಗುತ್ತದೆ. ಕಂತೆಗೆ ಬಳಸುವ ವಸ್ತುಗಳ ಗುಣಮಟ್ಟ ಹಾಗೂ ಪರಿಪಾಕದ ಪಕ್ವತೆ ಹೆಚ್ಚಿದಷ್ಟೂ ಕಂತೆಯ ಶ್ರೇಷ್ಠತೆಯೂ ಹೆಚ್ಚುತ್ತದೆ. ಒಟ್ಟಿನಲ್ಲಿ ಕಂತೆಯ ಪರಿಕಲ್ಪನೆಯಾಗಲೀ, ಕಂತೆಗಾರರ ಕಾರ್ಯವಾಗಲೀ ಬಹಳ ವಿಶಿಷ್ಟವಾದ ವಿಷಯಗಳು. ಸಾಮಾನ್ಯರ ತಿಳುವಳಿಕೆಯಿಂದ ಬಹುದೂರವಿದ್ದ ಇಂಥ ವಿಷಯದ ಬಗ್ಗೆ ಸತ್ಯನಾರಾಯಣ ಭಟ್ ಅವರು ಗಮನ ಸೆಳೆದಿದ್ದಾರೆ. ಕಂತೆ ಕಾರ್ಯದ ವೈಶಿಷ್ಟ್ಯವೇ ಈ ಪುಸ್ತಕವನ್ನು ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಆಯುರ್ವೇದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದುಕೊಂಡು, ಬೆಂಗಳೂರು ಪರಿಸರದ ಸಸ್ಯಗಳ ಬಗ್ಗೆ ಸಂಶೋಧನೆ ನಡೆಸಿ ಪಿಎಚ್.ಡಿ ಪಡೆದಿರುವ ಭಟ್ಟರು ಕಂತೆ ಕುರಿತ ವಿಷಯ ಸಂಗ್ರಹಕ್ಕಾಗಿ ವ್ಯಾಪಕ ಕ್ಷೇತ್ರಕಾರ್ಯ ನಡೆಸಿದ್ದಾರೆ.

ಅಪೂರ್ವ ಮಾಹಿತಿ ಸಂಗ್ರಹಿಸಿದ್ದಾರೆ. ಸಂಗ್ರಹಿಸಿದ ಮಾಹಿತಿಗೆ ಪೂರಕವಾಗಿ ಸಾಹಿತ್ಯಿಕ ಮತ್ತು ಆಯುರ್ವೇದಿಯ ಹಾಗೂ ಜಾನಪದ ಶಾಸ್ತ್ರದ ಮಾಹಿತಿಗಳನ್ನು ವಿಪುಲವಾಗಿ ಕೊಟ್ಟಿದ್ದಾರೆ. ಕಂತೆ ಕಾಯಕದವರೊಂದಿಗೆ ಮಾತು ಕಥೆ ನಡೆಸಿ, ಅವರ ಅನುಭವ ಹಾಗೂ ಕಾರ್ಯವಿಧಾನದ ಬಗ್ಗೆ ಸ್ಪಷ್ಟ ಬೆಳಕು ಚೆಲ್ಲಿದ್ದಾರೆ.

ಮೂಲತಃ ಇಷ್ಟಲಿಂಗವೂ ಸಹ ಜಾನಪದದಲ್ಲಿ ತಾಯಿತಿ, ಯಂತ್ರ ಮೊದಲಾದ ಪರಿಕಲ್ಪನೆಗಳಿಗೆ ಇರುವ ರಕ್ಷೆ (Amulet) ಎಂಬ ಅರ್ಥವನ್ನೇ ಹೊಂದಿದೆ ಎಂದು ವಿಶ್ಲೇಷಿಸುತ್ತಾರೆ. ಕಂತೆಗೆ ಸಂವಾದಿಯಾಗಿರುವ ರಕ್ಷೆಗಳನ್ನು ಕುರಿತಾದ ಅಪೂರ್ವ ಛಾಯಾ ಚಿತ್ರಗಳು ಈ ಗ್ರಂಥದ ಅಂದ ಚೆಂದವನ್ನೂ ಮಹತ್ವವನ್ನೂ ಹೆಚ್ಚಿಸಿವೆ. ಒಂದು ನಿಶ್ಚಿತ ಧರ್ಮೀಯರಿಗೆ ಸಂಬಂಧಿಸಿದ ವಿಚಾರಗಳನ್ನು ಹೇಳುವಾಗ ಎಲ್ಲಿಯೂ ಸಮತೋಲನ ಕಳೆದುಕೊಳ್ಳದಿರುವುದೂ ಕೂಡ ಈ ಗ್ರಂಥದ ಮಹತ್ವ. ಇಷ್ಟೆಲ್ಲ ಇದ್ದರೂ, ಇಷ್ಟಲಿಂಗವನ್ನು ಕಣ್ಣಾರೆ ನೋಡದಿದ್ದವರಿಗೆ ಕಂತೆಯ ಕಲ್ಪನೆ ಬರುವುದು ಕಷ್ಟ. ಭಟ್ ಅವರು ಮಾಹಿತಿಗೆ ಪೂರಕವಾದ ಅರ್ಥಗಳಿಗೇ ಹೆಚ್ಚು ಗಮನಕೊಟ್ಟು ಮೂಲ ವಿಷಯವನ್ನು ಸ್ಪಷ್ಟವಾಗಿ ನಿರೂಪಿಸದಿರುವುದು ಇದಕ್ಕೆ ಕಾರಣ ಅನಿಸುತ್ತದೆ. ಆದರೆ ಮಾಹಿತಿಯ ಸಂಗ್ರಹಣೆ ಮತ್ತು ವಿಶ್ಲೇಷಣೆಯಲ್ಲಿ ಇವರು ಅನುಸರಿಸಿರುವ ಶಾಸ್ತ್ರೀಯ ಕ್ರಮ ಮೆಚ್ಚತಕ್ಕದ್ದು. ಪಾರಂಪರಿಕವಾದ ಒಂದು ವಿಶಿಷ್ಟ ಕಾಯಕದ ಬಗ್ಗೆ ನಾಲ್ಕು ವರ್ಷಗಳ ಕಾಲ ನಡೆಸಿದ ಅಧ್ಯಯನದ ಫಲವಾಗಿ ಪ್ರಕಟಗೊಂಡಿರುವ ಈ ಕೃತಿ "ಮೌಲಿಕವಾದ ಶೋಧ ಕಾರ್ಯ" ಎಂಬುದು ಒಪ್ಪತಕ್ಕ ಮಾತು.

**ಜನಾಂಗಿಕ ಜಾನಪದ**

ಜಾನಪದದ ಪರಿಕಲ್ಪನೆ ಎಷ್ಟು ನಮ್ಯವಾದುದೆಂದರೆ ಅದನ್ನು ವ್ಯಕ್ತಿಯಿಂದಾರಂಭಿಸಿ ವಿಶ್ವದವರೆಗೆ ಹಿಗ್ಗಿಸಬಹುದು. ಜಾನಪದವನ್ನು ವ್ಯಕ್ತಿ, ಸಮುದಾಯ, ರಾಷ್ಟ್ರ ಅಥವಾ ಪ್ರದೇಶ, ಸಂಸ್ಕೃತಿ, ಧರ್ಮ, ಜನಾಂಗ, ಜಾತಿ ...... ಹೀಗೆ ಬೇರೆ ಬೇರೆ ನೆಲೆಗಳಲ್ಲಿ ಅಭ್ಯಾಸ ಮಾಡಬಹುದಾಗಿದೆ. ಕನ್ನಡ ಜಾನಪದ ಅಧ್ಯಯನ ಈ ನಿಟ್ಟಿನಲ್ಲಿ ಬೆಳೆಯತೊಡಗಿದೆ. ನಿರ್ದಿಷ್ಟ ಜನಾಂಗಕ್ಕೆ ಸಂಬಂಧಿಸಿದ ಜಾನಪದವನ್ನು ದಾಖಲಿಸುವ ಎರಡು ಪುಸ್ತಕಗಳು ಬಂದಿವೆ. ವೈ.ಸಿ. ಭಾನುಮತಿಯವರು ಮಲೆನಾಡು ಶೈವ ಒಕ್ಕಲಿಗರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಎನ್.ಪಿ. ಶಂಕರ ನಾರಾಯಣರಾವ್ ಅವರು ಫಣಿಯರವರ ಸಮಾಜ ಮತ್ತು ಜಾನಪದ ಇತಿಹಾಸ ಎಂಬ ಪುಸ್ತಕ ತಂದಿದ್ದಾರೆ.

ಕರ್ನಾಟಕದ ಒಂದು ಪ್ರಧಾನ ಜನಾಂಗವಾಗಿರುವ ಒಕ್ಕಲಿಗರಲ್ಲಿ ಪ್ರಾದೇಶಿಕವಾಗಿ ಮಲೆನಾಡ ಒಕ್ಕಲಿಗರು, ಬಯಲುಸೀಮೆ ಒಕ್ಕಲಿಗರು ಹಾಗೂ

ತುಳುನಾಡ ಒಕ್ಕಲಿಗರು ಎಂಬ ಮೂರು ಮುಖ್ಯ ಪ್ರಭೇದಗಳಿವೆ. ಈ ಪ್ರತಿಯೊಂದು ಪ್ರಭೇದದಲ್ಲಿಯೂ ಹಲವು ಒಳಪಂಗಡಗಳೂ ಇದ್ದು ಅವು ತಮ್ಮದೇ ಆದ ಆಚರಣೆ, ಸಂಪ್ರದಾಯಗಳು, ಜೀವನ ವಿಧಾನವನ್ನು ರೂಢಿಸಿಕೊಂಡಿವೆ. ಭಾನುಮತಿಯವರ ಪ್ರಸ್ತುತ ಗ್ರಂಥ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲೂಕು, ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಬೇಲೂರು ತಾಲೂಕುಗಳು ಮತ್ತು ಕೊಡಗು ಜಿಲ್ಲೆಯ ಸೋಮವಾರ ಪೇಟೆಯಲ್ಲಿ ವಾಸವಾಗಿರುವ ಶೈವ ಒಕ್ಕಲಿಗರನ್ನು ಕುರಿತದ್ದಾಗಿದೆ. ಈ ಜನಾಂಗದ ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಬದುಕಿನ ಎಲ್ಲ ಮಾಹಿತಿಗಳನ್ನು ಬಹಳ ಶ್ರದ್ಧೆಯಿಂದ ಕಲೆಹಾಕಿರುವ ಭಾನುಮತಿಯವರು ಶೈವ ಒಕ್ಕಲಿಗರ ಬಗ್ಗೆ 'ಅಂತರಂಗದಲ್ಲಿ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡು ಬಹಿರಂಗದಲ್ಲಿ ನಾಗರಿಕತೆಯನ್ನು ಬಿಂಬಿಸುತ್ತಿರುವ ಒಂದು ಜನಾಂಗ ಇದು ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಈ ಜನಸಮುದಾಯದಲ್ಲಿ ಇನ್ನೂ ಜೀವಂತವಾಗಿರುವ ಬೇಟೆ ಪದ್ಧತಿ ಹಾಗೂ ಶವ ಸಂಸ್ಕಾರ ಸಂದರ್ಭದಲ್ಲಿ ಹಾಡು ಹೇಳುವ ಪದ್ಧತಿ, ಮಾಂಸಾಹಾರಕ್ಕೆ ಪ್ರಾಧಾನ್ಯತೆ.... ಇವೇ ಮೊದಲಾದುವು ಈ ನಿರ್ಣಯವನ್ನು ಸಮರ್ಥಿಸುತ್ತವೆ.

ಒಕ್ಕಲಿಗ ಜನಾಂಗದ ಇತಿಹಾಸದಿಂದಾರಂಭಿಸಿ, ಶೈವ ಒಕ್ಕಲಿಗರ ಬದುಕಿನ ಯಾವೊಂದು ಸಂಗತಿಯನ್ನೂ ಬಿಡದೆ ಸಮಸ್ತ ವಿವರಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಇಲ್ಲಿ ನಡೆದಿದೆ. ಜನಾಂಗದ ಹಿನ್ನೆಲೆ, ಜನನ ಸಂಸ್ಕಾರ, ಒಸಗೆ, ಮದುವೆ, ಮರಣ, ಹಬ್ಬಗಳು, ಬೇಟೆ, ಬೇಸಾಯ, ಅಡುಗೆ ಸಂಪ್ರದಾಯ, ವೈದ್ಯ, ಮನೆಮಾದರಿ, ಭಾಷೆ ಮತ್ತು ಸಾಹಿತ್ಯ ...... ಇವೇ ಮೊದಲಾದ ಶೀರ್ಷಿಕೆಗಳು, ಈ ಗ್ರಂಥವು ಒಳಗೊಂಡಿರುವ ಮಾಹಿತಿಯ ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ. ಸಾಮಾನ್ಯವಾಗಿ ನೇರ ಸಂಗ್ರಹಕ್ಕೆ ಸಿಗದಿರುವಂಥ ವಿವರಗಳನ್ನು ಗಮನಿಸಿ ದಾಖಲಿಸುವುದು ಇಲ್ಲಿನ ನಿರೂಪಣೆಯ ವೈಶಿಷ್ಟ್ಯ. ಉದಾಹರಣೆಗೆ ಊರವರನ್ನು ಮದುವೆಗೆ ಕರೆಯುವಾಗ 'ಸಾಯಂಕಾಲ ಶಾಸ್ತ್ರಕ್ಕೆ ಬನ್ನಿ, ಬುಧವಾರ ಚಪ್ಪರಕ್ಕೆ ಬನ್ನಿ, ಗುರುವಾರ ಧಾರೆಗೆ ಬನ್ನಿ' ಎಂದು ಹೇಳುವುದರ ವಿವರ, ಸತ್ತವರ ಬಗ್ಗೆ "ಅವರು ಸತ್ತು ಸಂಪಿಗೆ ಮರವಾಗಿದ್ದಾರೆ" ಎನ್ನುವುದು ಇಂಥವು. ಮರಣ ಸಂಸ್ಕಾರದಲ್ಲಿ ಹಾಡುವ ಶೋಕಗೀತೆಗಳನ್ನು ಭಾನುಮತಿ ಉಲ್ಲೇಖಿಸುತ್ತಾರೆ. ಇಂಥದೊಂದು ಸಂಪ್ರದಾಯ, ಶಿಷ್ಟ ಸಂಸ್ಕೃತಿಗಳಲ್ಲಿ ಸಾಮಾನ್ಯವಾಗಿ ಕಂಡು ಬರುವುದಿಲ್ಲ. ಆದರೆ ಬುಡಕಟ್ಟು ಜನಾಂಗಗಳಲ್ಲಿ ಶೋಕಗೀತೆಗಳು ಬಹಳ ಸಂಖ್ಯೆಯಲ್ಲಿ ಸಿಗುತ್ತವೆ. ಒಕ್ಕಲಿಗರ ಈ ಗುಂಪಿನಲ್ಲಿ ಅದು ಇರುವುದು ಕುತೂಹಲಕಾರಿ. ಶೈವ ಒಕ್ಕಲಿಗರ ಆಹಾರ, ಪದ್ಧತಿಗಳು ಹಾಗೂ ಆಹಾರದ ಬಗೆಗಳು ವಿಶೇಷ ಗಮನ ಸೆಳೆಯುತ್ತವೆ. ಗರ್ಭಿಣಿಯರ ಆಹಾರ, ಬಾಣಂತಿಯರ ಆಹಾರ ಶಿಶುಗಳ ಆಹಾರ, ಹಬ್ಬ ಹರಿದಿನಗಳ ವಿಶೇಷ ಅಡುಗೆಗಳು, ಜೇನು

ಮತ್ತು ಹಣ್ಣುಗಳಿಂದ ತಯಾರಿಸುವ ಆಹಾರಗಳು..... ವಿಧ ವಿಧದ ರೊಟ್ಟಿಗಳು, ಕಡುಬುಗಳು, ಕುರಿಯ ಕಾಲಿನ ಸಾರು, ಹುರಿದ ಹಂದಿ, ಹುರಿತುಂಡು, ಮೀನು ಸಾರು ....... ಇವೇ ಮೊದಲಾದವುಗಳ ಸೂಕ್ತವಾದ ಪರಿಚಯ ಇಲ್ಲಿದೆ. ಇಂಥ ಅಂಶಗಳನ್ನು ದಾಖಲಿಸುವುದರ ಜೊತೆಗೆ ಸ್ಥಿತ್ಯಂತರಗಳನ್ನು ಗುರುತಿಸಿದ್ದಾರೆ. ಜನನ, ವಿವಾಹ, ಮರಣ ಮತ್ತಿತರ ವಿಶೇಷ ಸಂದರ್ಭಗಳಲ್ಲಿ ಬಂಧು ಬಳಗದ ಜನರಲ್ಲಿ ಕಂಡುಬರುವ ಸಹಕಾರ, ಸಹಾಯದ ಪದ್ಧತಿಗಳೂ ಗಮನ ಸೆಳೆಯುತ್ತವೆ. ಮಗು ಹುಟ್ಟಿದ ಸುದ್ದಿ ಕೇಳಿದೊಡನೆಯೇ ಗಂಡನ ಮನೆಯವರು ಕೊಬ್ಬರಿ ಗಿಟುಕು, ೫ ಸೇರು ತುಪ್ಪ, ೩ ಸೇರು ಮೆಂತ್ಯ, ಎರಡು ಸೇರು ಗೋಧಿ, ಎಲೆ ಅಡಿಕೆ, ಒಂದು ಬ್ರಾಂದಿ ಸೀಸೆ ತೆಗೆದುಕೊಂಡು ಬರುತ್ತಾರೆ. ಇಂಥ ಪದ್ಧತಿಗಳು ಬಹುಶಃ ನಮ್ಮ ನಾಡಿನ ಎಲ್ಲ ಜಾತಿ ಜನಾಂಗದವರಲ್ಲಿಯೂ ರೂಢಿಯಲ್ಲಿದ್ದವು. ನಮ್ಮ ಸಂಸ್ಕೃತಿಯ ಶ್ರೀಮಂತಿಕೆ ಇದ್ದುದೇ ಇಂಥ ಪದ್ಧತಿಗಳಲ್ಲಿ. ನಾಗರಿಕತೆಯ ಹೆಸರಿನಲ್ಲಿ ಇಂಥ ಒಳ್ಳೆಯ ಪದ್ಧತಿಗಳೆಲ್ಲವೂ ತೀವ್ರವಾಗಿ ಕಾಣೆಯಾಗುತ್ತಿವೆ. ಆಚರಣೆ ಪದ್ಧತಿ ಇತ್ಯಾದಿಗಳ ಬಗ್ಗೆ ಹೇಳುವಾಗ ಅದಕ್ಕೆ ಸಂಬಂಧಿಸಿದಂತೆ ಈ ಜನಾಂಗದವರಲ್ಲಿ ಪ್ರಚಲಿತವಿರುವ ಜನಪದ ಗೀತೆ, ಕಥೆ, ಗಾದೆ, ನಂಬಿಕೆ ಮೊದಲಾದವುಗಳನ್ನೆಲ್ಲ ಉಲ್ಲೇಖಿಸುವುದರ ಜೊತೆಗೆ ವಿಶಿಷ್ಟವಾದ ಪದರೂಪಗಳನ್ನೂ ಉಳಿಸಿಕೊಳ್ಳುವುದರಿಂದ ಭಾನುಮತಿಯವರ ನಿರೂಪಣೆ ಸ್ವಾರಸ್ಯಕರವಾಗಿದೆ. ವಿಶ್ಲೇಷಣೆಯಲ್ಲಿ ಕಂಡುಬರುವ ವಸ್ತು ನಿಷ್ಠತೆಯೂ ಇಲ್ಲಿನ ಉತ್ತಮಿಕೆ. ಈ ಗ್ರಂಥಕ್ಕೆ ಡಿ.ಕೆ ರಾಜೇಂದ್ರ ಅವರು ಮಾಹಿತಿ ಪೂರ್ಣವಾದ ಮುನ್ನುಡಿಯ ಮೂಲಕ ಉತ್ತಮ ಹಿನ್ನೆಲೆ ಒದಗಿಸಿದ್ದಾರೆ. ಪುಟಪುಟದಲ್ಲು ಸಂಗ್ರಹಕಾರರ ಶ್ರದ್ಧೆ ಹಾಗೂ ಎಚ್ಚರವನ್ನೂ ಪ್ರತಿಬಿಂಬಿಸುವ ಈ ಗ್ರಂಥ ಉಪಸಂಸ್ಕೃತಿಗಳ ಅಧ್ಯಯನಕ್ಕೆ ಒಳ್ಳೆಯ ಸೇರ್ಪಡೆ.

ಫಣಿಯರವರ ಸಮಾಜ ಮತ್ತು ಜಾನಪದ ಇತಿಹಾಸ ಎಂಬ ಕೃತಿಯಲ್ಲಿ, ತಲೆತಲಾಂತರದಿಂದ ಕೊಡಗಿನಲ್ಲಿ ಜೀತದಾಳುಗಳಾಗಿ ಕೆಲಸ ಮಾಡುತ್ತಾ, ಮಲಯಾಳಿ ಭಾಷೆಯ ಉಪಭಾಷೆಯನ್ನಾಡುವ ಯರವರು ಅಥವಾ ಫಣಿಯರವರ ಬದುಕು, ಸಮಾಜ, ಆಚಾರವಿಚಾರಗಳನ್ನು ಸಮಾಜಶಾಸ್ತ್ರೀಯ, ಚಾರಿತ್ರಿಕ ಹಾಗೂ ಜಾನಪದೀಯ ದೃಷ್ಟಿಯಿಂದ ಎಸ್.ಪಿ. ಶಂಕರ ನಾರಾಯಣರಾವ್ ವಿಶ್ಲೇಷಿಸಿದ್ದಾರೆ. ಅನಕ್ಷರಸ್ಥ ಸಮುದಾಯಗಳ ಇತಿಹಾಸವನ್ನು ತಿಳಿಯಲು ಅವರಲ್ಲಿ ಪ್ರಚಲಿತವಿರುವ ಐತಿಹ್ಯ, ಕಥೆ, ವೀರಗಾಥೆ ಇವೇ ಮೊದಲಾದುವು ಅಮೂಲ್ಯ ಮಾಹಿತಿ ಒದಗಿಸುತ್ತವೆ ಎಂಬುದನ್ನು ಈಗಾಗಲೇ ಜಾನಪದ ತಜ್ಞರು ಮತ್ತು ಇತಿಹಾಸತಜ್ಞರು ಒಪ್ಪಿಕೊಂಡಿದ್ದಾರೆ. ಜಾನಪದೀಯ ಆಧಾರಗಳೊಂದಿಗೆ ಗೆಜೆಟಿಯರ್‌ಗಳು, ವರದಿಗಳು ಮೊದಲಾದವುಗಳಲ್ಲಿ ಸಿಗುವ ಆಧಾರಗಳನ್ನೂ ಬಳಸಿ ಈ ಜನಾಂಗದ ಇತಿಹಾಸದ ರೂಪುರೇಷೆಗಳನ್ನು ಗುರುತಿಸುವ ಪ್ರಯತ್ನ

ಇಲ್ಲಿದೆ. ಫಣಿಯರವರ ಮೂಲ, ಸಂಪ್ರದಾಯ, ಆಚರಣೆ, ಸಾಮಾಜಿಕ ಸ್ಥಿತಿಗತಿ ಮುಂತಾದವುಗಳ ಬಗ್ಗೆ ಬಹಳ ವಿವರಗಳನ್ನು ಕೊಡುವ ಜಾನಪದವೆಂದರೆ ಸಾವಿನ ಸಂದರ್ಭದಲ್ಲಿ ಅವರು ಹೇಳುವ ಸುದೀರ್ಘ ಹಾಡುಗಳು ಹಾಗೂ ಮಾತುಗಳು. ಈ ಜನರಿಗೆ ಸಾವಿನ ಸಂಸ್ಕಾರದ ಕ್ರಿಯಾವಿಧಿಗಳು ಬಹಳ ಮುಖ್ಯ. ಇವರ ಹಾಡುಗಳಲ್ಲಿ ಬರುವ ವಿವರಗಳನ್ನು ಭೌಗೋಳಿಕ ಹಾಗೂ ಚಾರಿತ್ರಿಕ ವಿವರಗಳ ಆಧಾರದಿಂದ ಅರ್ಥೈಸುವ ಪ್ರಯತ್ನವೂ ಇಲ್ಲಿ ನಡೆದಿದೆ. ಒಟ್ಟು ವಿಶ್ಲೇಷಣೆಯ ಕ್ರಮದಲ್ಲಿ ಭಾರತ ಹಾಗೂ ಕರ್ನಾಟಕದ ಅರಣ್ಯ ಪ್ರದೇಶಗಳಲ್ಲಿರುವ ಬುಡಕಟ್ಟು ಜನಾಂಗಗಳ ಬದುಕಿನ ಪರಿಸ್ಥಿತಿಯನ್ನು ಲೇಖಕರು ವಿಶ್ಲೇಷಿಸಿದ್ದಾರೆ. ಫಣಿಯರವರ ಸಮಾಜ, ಸಾವು ತಿಥಿಗೆ ಸಂಬಂಧಿಸಿದ ಶಾಸ್ತ್ರ ಸಂಪ್ರದಾಯಗಳು, ಹಾಡುಗಳಲ್ಲಿರುವ ಕಥೆಯ ಪರಿಚಯ ಹಾಗೂ ಮೂಲರೂಪದಲ್ಲಿ ಹಾಡುಗಳ ಪಠ್ಯ, ಶಬ್ದಾರ್ಥ ಸೂಚಿ, ಭಾಷಾ ವೈಶಿಷ್ಟ್ಯ ಮೊದಲಾದವುಗಳ ಬಗ್ಗೆ ಸ್ಪಷ್ಟ ನಿರೂಪಣೆ ನೀಡುವ ಈ ಗ್ರಂಥ ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗೆ ಹಾಗೂ ಜಾನಪದ ಅಭ್ಯಾಸಿಗಳಿಗೆ ಕೂಡಿಯೇ ಉಪಯುಕ್ತವಾಗಿದೆ.

**ಜಾನಪದ ಲೇಖನ ಸಂಗ್ರಹಗಳು**

ಜಾನಪದದ ಬೇರೆ ಬೇರೆ ಪ್ರಕಾರಗಳನ್ನು ಕುರಿತು ಬೇರೆ ಬೇರೆ ಸಂದರ್ಭಗಳಿಗಾಗಿ ಬರೆದ ಅಥವಾ ತಮ್ಮ ಆಸಕ್ತಿಯನ್ನು ಕೆಣಕಿದ ವಿಷಯಗಳ ಬಗ್ಗೆ ಬರೆದ ಲೇಖನಗಳ ಹಲವು ಸಂಗ್ರಹಗಳನ್ನು ಜಾನಪದಾಸಕ್ತರು ಹೊರತಂದಿದ್ದಾರೆ. ೧೯೯೪ರಲ್ಲಿ ಇಂತಹ ಸುಮಾರು ಆರು ಗ್ರಂಥಗಳು ಪ್ರಕಟವಾಗಿವೆ. ಇವುಗಳಲ್ಲಿ ಅಂಬಳಿಕೆ ಹಿರಿಯಣ್ಣನವರ 'ಜಾನಪದ - ಕೆಲವು ಅಧ್ಯಯನಗಳು,' ಮತ್ತು 'ಜಾನಪದಲೋಚನ' ಎಂಬ ಪುಸ್ತಕಗಳು ಮಾತ್ರ ನೇರ ಓದಿಗೆ ಸಿಕ್ಕಿವೆ. ಉಳಿದವುಗಳ ಬಗ್ಗೆ ಬೇರೆಬೇರೆ ಪತ್ರಿಕೆಗಳಲ್ಲಿ ಬಂದಿರುವ ವಿಮರ್ಶೆಗಳ ಸಾರವನ್ನು ಇಲ್ಲಿ ಕೊಡಲಾಗಿದೆ.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವ ಹಿರಿಯಣ್ಣನವರ 'ಜಾನಪದ ಕೆಲವು ಅಧ್ಯಯನಗಳು' ಕೃತಿಯಲ್ಲಿ ಏಳು ಪ್ರಬಂಧಗಳಿವೆ. ಇವು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ವಿಚಾರ ಸಂಕಿರಣಗಳಿಗಾಗಿ ಸಿದ್ಧಪಡಿಸಿದ ಪ್ರಬಂಧಗಳು. ಇಲ್ಲಿ ಕೆಲವು ಹೊಸ ವಿಷಯಗಳನ್ನು ಆಯ್ದುಕೊಂಡು ತುಂಬ ವಿಸ್ತೃತವಾಗಿ ವಿವರವಾಗಿ ವಿಶ್ಲೇಷಣೆ ಮಾಡಲಾಗಿದೆ.

'ಪ್ರಾಣಿ ವಸತಿಗಳ ಅಧ್ಯಯನ' ಜಾನಪದ ವಾಸ್ತುಶಿಲ್ಪ ಅಧ್ಯಯನದ ಒಂದು ಭಾಗ. ಬೇಟೆ, ಪಶುಪಾಲನೆ, ವ್ಯವಸಾಯ ಮತ್ತು ಆನಂತರದ ಎಲ್ಲ ಬಗೆಯ ಸಾಂಸ್ಕೃತಿಕ ಬೆಳವಣಿಗೆಯ ಸಂದರ್ಭದಲ್ಲಿ ಪ್ರಾಣಿಗಳ ಅವಶ್ಯಕತೆ ಅನಿವಾರ್ಯವಾಗಿತ್ತು. ಪ್ರಾಣಿ ವಸತಿ ಮಾದರಿಗಳ ಮೇಲೆ ಆರ್ಥಿಕ ಹಾಗೂ

ಭೌಗೋಳಿಕ ಪ್ರಭಾವಗಳು ವ್ಯತ್ಯಾಸವುಂಟು ಮಾಡುತ್ತಿವೆ. ಪ್ರದೇಶಾನುಗುಣವಾಗಿ ಈ ವಸತಿಗಳಿಗೆ ಬಳಸುವ ಸಾಧನ ಸಲಕರಣೆಗಳೂ ಬದಲಾಗುತ್ತವೆ. ದಕ್ಷಿಣ ಕರ್ನಾಟಕದಲ್ಲಿ ದನಕರು, ಕುರಿಕೋಳಿ, ಹಂದಿ ವಸತಿಗಳು ಮುಖ್ಯ. ಈ ಪ್ರಾಣಿ ವಸತಿಗಳ ರಚನೆ, ರಚನಾಕ್ರಮ, ಅವುಗಳ ಬಗ್ಗೆ ಪ್ರಚಲಿತವಿರುವ ನಂಬಿಕೆಗಳು....... ಇವೇ ಮೊದಲಾದ ವಿವರಗಳನ್ನು ಅತ್ಯಂತ ಶ್ರದ್ಧೆಯಿಂದ 'ಪ್ರಾಣಿ ವಸತಿಗಳು' ಎಂಬ ಲೇಖನದಲ್ಲಿ ದಾಖಲಿಸಲಾಗಿದೆ.

ಜನಪದ ವೈದ್ಯದಲ್ಲಿ ಪ್ರಾಣಿವೈದ್ಯವೂ ಸಹ ಬಹು ಪ್ರಾಚೀನ ಕಾಲದಿಂದ ವ್ಯವಸ್ಥಿತವಾಗಿ ಬೆಳೆದುಬಂದಿದೆ. ಪ್ರಾಣಿ ವೈದ್ಯವನ್ನು ಕುರಿತಾದ ಲೇಖನದಲ್ಲಿ ಹಿರಿಯಣ್ಣನವರು ಪ್ರಾಣಿಗಳಿಗೆ ಬರುವ ರೋಗಗಳು, ರೋಗೋಪಚಾರದ ಸಂಬಂಧವಾಗಿ ಪ್ರಚಲಿತವಿರುವ ಗಿಡಮೂಲಿಕೆಗಳ ವೈದ್ಯ ಹಾಗೂ ಮಂತ್ರಮಾಟ ವಿಧಿ ಸ್ವರೂಪದ ವೈದ್ಯ, ಪ್ರಾದೇಶಿಕ ವ್ಯತ್ಯಾಸಗಳು ಮೊದಲಾದ ವಿವರಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ. 'ಜನಪದ ಆಟಗಳು - ಪ್ರಾಚೀನತೆ ಮತ್ತು ಪರಂಪರೆ' ಎಂಬ ಲೇಖನದಲ್ಲಿ, ಶಿಷ್ಟ ಸಾಹಿತ್ಯ ಹಾಗೂ ಶಾಸನಗಳಲ್ಲಿ ಸಿಗುವ ಉಲ್ಲೇಖಗಳ ಆಧಾರದ ಮೇಲೆ ಆಟಗಳ ಪ್ರಾಚೀನತೆ ಹಾಗೂ ಪರಂಪರೆಯನ್ನು ಗುರುತಿಸುವ ಪ್ರಯತ್ನವಿದೆ. ಕೆಲವೊಂದು ಆಟಗಳು ಈಜಿಪ್ಟ್, ಗ್ರೀಸ್, ಬ್ಯಾಬಿಲೋನಿಯಾ, ಚೀನಾ ಹಾಗೂ ಭಾರತದ ಪ್ರಾಚೀನ ಸಂಸ್ಕೃತಿಗಳಲ್ಲಿ ಪ್ರಚಲಿತವಿದ್ದು ಈ ತನಕವೂ ಉಳಿದುಕೊಂಡು ಬಂದಿವೆ ಎಂಬುದನ್ನು ಈ ಲೇಖನದಿಂದ ತಿಳಿಯಬಹುದು. ಆಟ ಹಾಗೂ ಆಟಿಕೆಗಳ ವೈವಿಧ್ಯ, ಮಕ್ಕಳಿಂದ ಹಿಡಿದು ದೊಡ್ಡವರ ತನಕ ವಿವಿಧ ವಯೋಮಾನದವರೆಗೆ ವಿಶಿಷ್ಟವಾದ ಆಟಗಳು, ರಾಜಮಹರಾಜರುಗಳಿಂದ ಹಿಡಿದು ಶ್ರೀಸಾಮಾನ್ಯರವರೆಗೆ ಪ್ರಚಲಿತವಿರುವ ಅವರವರ ಅಂತಸ್ತುಗಳಿಗನು-ಗುಣವಾದ ಆಟಗಳು, ಆಟಗಳಲ್ಲಿರುವ ಪೈಪೋಟಿ, ದ್ವೇಷ,ಮತ್ಸರ, ವಿನೋದ ಮನರಂಜನೆ ....... ಹೀಗೆ ಆಟಗಳ ಒಂದು ಹೊಸ ಜಗತ್ತನ್ನೇ ಈ ಲೇಖನ ಕಣ್ಣು ಮುಂದಿರಿಸುತ್ತದೆ.

ಜನಪದ ಸಾಹಿತ್ಯದಲ್ಲಿ ನಿಸರ್ಗ ಗ್ರಹಿಕೆಯ ವಿಧಾನ ಎಂಬ ಲೇಖನದಲ್ಲಿ, ಜನಪದರ ಸೌಂದರ್ಯ ಗ್ರಹಿಕೆಯನ್ನು ಸೌಂದರ್ಯ ಮೀಮಾಂಸೆಯ ಸೂತ್ರಗಳಿಂದ ವಿವರಿಸಲು ಬರುವುದಿಲ್ಲ, ಅವರ ವರ್ಣನೆಗಳಲ್ಲಿ ಯಾವುದೇ ಸಂಪ್ರದಾಯದ ಬಂಧನವಿಲ್ಲ ಎಂದು ವಿಶ್ಲೇಷಿಸುತ್ತಾ, ಜನಪದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ನಿಸರ್ಗದ ವರ್ಣನೆಗಳು ಯಾವ ರೀತಿ ಮೈತಳೆದಿವೆ ಎಂಬುದನ್ನು ಉದಾಹರಣಾ ಸಹಿತವಾಗಿ ನೀಡಲಾಗಿದೆ.

ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ ಎಂಬ ಲೇಖನದಲ್ಲಿ ಕರ್ನಾಟಕದ ಬೇರೆ ಬೇರೆ ಬುಡಕಟ್ಟುಗಳವರ ಆರ್ಥಿಕ ಸ್ಥಿತಿಗತಿ, ಅವರ

ಜೀವನೋಪಾಯ ಮಾರ್ಗಗಳು, ಕಾಡಿನ ನಾಶದಿಂದಾಗಿ ಕಾಡನ್ನು ಸಂಪೂರ್ಣವಾಗಿ ಅವಲಂಬಿಸಲಾಗದ ಅಸಹಾಯಕತೆ ಮುಂತಾದ ಅಂಶಗಳ ವಾಸ್ತವ ವಿಶ್ಲೇಷಣೆ ಇದೆ. ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗಾಗಿ ಕೆಲವೊಂದು ಸಲಹೆಗಳನ್ನೂ ಸೂಚಿಸಿದ್ದಾರೆ.

ಜಾನಪದ ಮತ್ತು ಚಲನಶೀಲತೆ ಎಂಬ ಲೇಖನದಲ್ಲಿ ಜಾನಪದವು ಪರಿಸರ, ಸನ್ನಿವೇಶಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮೈಗೂಡಿಸಿಕೊಂಡು ಉಳಿಯುವುದೇ ಹೊರತು ಅದು ಅಳಿದುಹೋಗುವುದಿಲ್ಲ ಎಂಬುದನ್ನು ಸೋದಾಹರಣಪೂರ್ವಕ ವಿವರಿಸಲಾಗಿದೆ.

ಪಾಶ್ಚಾತ್ಯ ಜಾನಪದ ಸಿದ್ಧಾಂತಗಳು ಮತ್ತು ದೇಶೀಯ ವಾದ ಎಂಬ ಲೇಖನದಲ್ಲಿ ಪಾಶ್ಚಾತ್ಯ ಜಾನಪದ ಸಿದ್ಧಾಂತಗಳನ್ನ ಪರಿಚಯಿಸಲಾಗಿದೆ. ದೇಶೀಯ ಚೌಕಟ್ಟಿನಲ್ಲ ಜಾನಪದದ ಅಧ್ಯಯನ ನಡೆಯಬೇಕು. ಎನ್ನುವ ವಾದವನ್ನು ಒಪ್ಪಿಕೊಳ್ಳುತ್ತಲೇ ಮಾನವನಿಷ್ಠ ಜ್ಞಾನಕ್ಷೇತ್ರವಾದ ಜಾನಪದದ ಅಧ್ಯಯನವನ್ನು ದೇಶೀಯ ಚೌಕಟ್ಟಿಗಷ್ಟೇ ಸೀಮಿತಗೊಳಿಸುವುದು ಸಂಕುಚಿತ ಮನೋಭಾವದ ಸೂಚನೆ ಎನ್ನುತ್ತಾರೆ. ವಿಭಿನ್ನ ಭಾಷೆ, ಧರ್ಮ ಮತ್ತು ಸಂಸ್ಕೃತಿಗಳ ಈ ದೇಶದಲ್ಲಿ ದೇಶೀಯ ಹಿನ್ನೆಲೆಯ ಅಧ್ಯಯನ ಸುಲಭ ಸಾಧ್ಯವಲ್ಲ ಎಂಬ ಧ್ವನಿ ಇಲ್ಲಿ ವ್ಯಕ್ತವಾಗಿದೆ. ಮಾಹಿತಿ ಸಂಗ್ರಹಣೆ ಹಾಗೂ ಅವುಗಳನ್ನು ಕೊಡುವ ಅಚ್ಚುಕಟ್ಟುತನದಿಂದಾಗಿ ಈ ಗ್ರಂಥ ಆರಂಭಿಕ ಅಭ್ಯಾಸಿಗಳಿಗೆ ಉಪಯುಕ್ತವಾಗಿದೆ.

ಹಿರಿಯಣ್ಣನವರ 'ಜಾನಪದ ಲೋಚನ' ಎಂಬ ಕೃತಿಯಲ್ಲಿಯೂ ಬೇರೆ ಬೇರೆ ವಿಚಾರ ಸಂಕಿರಣ ಹಾಗೂ ಸ್ಮರಣ ಗ್ರಂಥಗಳಿಗೆಂದು ಬರೆದ ಆರು ಲೇಖನಗಳಿವೆ. ಇಲ್ಲಿಯ ಮೊದಲ ಲೇಖನ ಸ್ವಾತಂತ್ರ್ಯಪೂರ್ವ ಜಾನಪದ ಅಧ್ಯಯನದ ದೃಷ್ಟಿಧೋರಣೆಗಳು. ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ವಿದೇಶೀ ಹಾಗೂ ದೇಶೀಯ ವಿದ್ವಾಂಸರು ಕನ್ನಡ ಜಾನಪದ ಅಧ್ಯಯನವನ್ನು ರೂಪಿಸಿದ ರೀತಿ ಹಾಗೂ ಅವರ ಸಾಧನೆಗಳ ವಿಸ್ತೃತ ಸಮೀಕ್ಷೆ ಇದೆ. ಲೇಖನದ ಉತ್ತರಾರ್ಧದಲ್ಲಿ, ಈ ಅವಧಿಯ ಅಧ್ಯಯನ ಹಾಗೂ ಸಂಗ್ರಹಗಳ ಇತಿಮಿತಿಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. 'ದಕ್ಷಿಣ ಕರ್ನಾಟಕದ ಗ್ರಾಮ ದೇವತೆಗಳು' ಎಂಬ ಲೇಖನದಲ್ಲಿ ಗ್ರಾಮದೇವತೆಗಳ ಹುಟ್ಟು, ಸ್ವರೂಪ, ವೈವಿಧ್ಯಗಳ ಪರಿಚಯವಿದೆ. ಕೆಲವು ಸಂಗತಿಗಳನ್ನು ಸಾರ್ವತ್ರಿಕವಾಗಿ ಅನ್ವಯಿಸುವಂತೆ ಹೇಳುವ ರೀತಿ ಸರಿಯಲ್ಲ. ಉದಾಹರಣೆಗೆ 'ದೇವರ ಗುಡ್ಡ' ರ ಬಗ್ಗೆ ಹೇಳುತ್ತಾ - ಗ್ರಾಮದೇವತೆಗೂ ಗ್ರಾಮಸ್ಥರಿಗೂ ನಡುವೆ ಇರುವ ವ್ಯಕ್ತಿಗೆ ಗುಡ್ಡ ಎನ್ನುತ್ತಾರೆ. ಆದರೆ ಒಂದು ನಿರ್ದಿಷ್ಟ ದೇವತೆಯ ದೀಕ್ಷಾ ಬದ್ಧ ಭಕ್ತನಿಗೆ ಮಾತ್ರ ಈ ಪದ ಅನ್ವಯಿಸುತ್ತದೆ. ಮಲೆಯ ಮಾದೇಶ್ವರನ ದೀಕ್ಷಾ ಬದ್ಧ ಭಕ್ತರನ್ನು ಮಾತ್ರ

ದೇವರ ಗುಡ್ಡ ಎಂದು ಕರೆಯುತ್ತಾರೆ. ಮೈಲಾರಲಿಂಗನ ಭಕ್ತರನ್ನು ಗೊರವರು ಎನ್ನುತ್ತಾರೆ. ಎಲ್ಲಮ್ಮನ ಭಕ್ತೆಯರು ಜೋಗತಿಯರು ........... ಹೀಗೆ. ಮಾಟಮಂತ್ರ ಮೋಡಿ ಎಂಬ ಲೇಖನದಲ್ಲಿ ಈ ಪರಿಕಲ್ಪನೆಗಳ ಸೈದ್ಧಾಂತಿಕ ವಿವರಣೆ ಹೆಚ್ಚಾಗಿದೆ. ಜನಪದರು ಸ್ವತಃ ಈ ಪರಿಕಲ್ಪನೆಗಳನ್ನು ಸೂಚಿಸಲು ಬಳಸುವ ಬೇರೆ ಬೇರೆ ಪದಗಳು ಹಾಗೂ ಪ್ರಕ್ರಿಯೆಗಳ ಬಗ್ಗೆ ಅವರ ದೃಷ್ಟಿ ಮುಂತಾದ ವಿವರಗಳು ಇಲ್ಲದಿರುವುದು ಈ ಲೇಖನದ ಕೊರತೆ.

ಪರಂಪರೆಯಿಂದ ಬಂದ ಒಂದು ಗುಂಪಿನ ರೂಢಿ, ಪದ್ಧತಿ, ಆಚರಣೆಗಳ ಒಟ್ಟು ಮೊತ್ತವೇ ಸಂಪ್ರದಾಯ, ಸಂಪ್ರದಾಯವು ಒಬ್ಬ ವ್ಯಕ್ತಿ ಆಚರಿಸುವ ವ್ಯಕ್ತಿಗತ ನಡವಳಿಕೆಯಾಗಿರದೆ ಒಂದು ಗುಂಪು ಒಪ್ಪಿಕೊಂಡು ರೂಢಿಸಿಕೊಂಡು ಬಂದುದಾಗಿದೆ. ಮಾನವ ಜೀವನದ ಸರ್ವ ಕ್ಷೇತ್ರಗಳಲ್ಲಿಯೂ ಸಂಪ್ರದಾಯ ವ್ಯಾಪಿಸಿದೆ. ಮಾನವನ ಸಾಂಸ್ಕೃತಿಕ ವಿಕಾಸದ ಹೆಜ್ಜೆ ಗುರುತುಗಳನ್ನು ತಿಳಿಯಲು ಅಗತ್ಯವಾದ ಮಾಹಿತಿ ಸಂಪ್ರದಾಯಗಳಲ್ಲಿ ಹುದುಗಿದೆ. ಸಂಪ್ರದಾಯಗಳ ಸ್ವರೂಪ, ವರ್ಗೀಕರಣ, ಮಲೆನಾಡ ವೈಷ್ಣವ ಒಕ್ಕಲಿಗರನ್ನ ನಿರ್ದಿಷ್ಟವಾಗಿ ಗಮನದಲ್ಲಿಟ್ಟುಕೊಂಡು ಅವರಲ್ಲಿ ರೂಢಿಯಲ್ಲಿರುವ ಜನನ, ಪ್ರೌಢ, ಮದುವೆ ಹಾಗೂ ಸಾವಿನ ಸಂಸ್ಕಾರಗಳು, ಕೃಷಿಗೆ ಸಂಬಂಧಿಸಿದ ಸಂಪ್ರದಾಯ ಆಚರಣೆಗಳು, ಧಾರ್ಮಿಕ ಸಂಪ್ರದಾಯಗಳು ಇದೇ ಮೊದಲಾದವುಗಳ ವಿವೇಚನೆ ಜನಪದ ಸಂಪ್ರದಾಯಗಳು ಎಂಬ ಲೇಖನದಲ್ಲಿದೆ.

೧೯೦೧-೯೨ರವರೆಗಿನ ಕರ್ನಾಟಕ ಜಾನಪದ ಎಂಬ ಲೇಖನದಲ್ಲಿ ಈ ಅವಧಿಯಲ್ಲಿ ಪ್ರಕಟವಾದ ಮುಖ್ಯ ಗ್ರಂಥಗಳ ಸಮೀಕ್ಷೆ ಮಾಡುತ್ತ, ಈಗಲೂ ಮೌಖಿಕ ಜಾನಪದ ಅಧ್ಯಯನವೇ ಹೆಚ್ಚಾಗಿ ನಡೆಯುತ್ತಿದೆ ಎಂದು ಅಭಿಪ್ರಾಯಪಡುತ್ತಾರೆ. ಕರ್ನಾಟಕ ಜಾನಪದ ಸಂಶೋಧನೆ ಮುಂದೇನು ಎಂಬ ಲೇಖನದಲ್ಲಿ, ಅಳಿದು ಹೋಗುತ್ತಿರುವ ಪ್ರಕಾರಗಳನ್ನು ಆದಷ್ಟು ಬೇಗ ಸಂಗ್ರಹಿಸಬೇಕಾದ ಅವಶ್ಯಕತೆಯನ್ನು ಸ್ಪಷ್ಟಪಡಿಸುತ್ತಾರೆ. ಅಂತರ್ ಶಿಸ್ತೀಯ ಅಧ್ಯಯನ ನಡೆಯಬೇಕಾದ ಅಗತ್ಯವನ್ನೂ ಸ್ಪಷ್ಟಪಡಿಸುತ್ತಾರೆ. ತೌಲನಿಕ ಅಧ್ಯಯನಕ್ಕಾಗಿ ಭಾಷಾಂತರಗಳ ಅಗತ್ಯ ಈಗ ತುರ್ತಾಗಿದೆ ಎಂಬುದನ್ನೂ ಮನವರಿಕೆ ಮಾಡಿಕೊಡುತ್ತಾರೆ. ಬಹುತೇಕ ಸೈದ್ಧಾಂತಿಕ ರೂಪದ ಈ ಲೇಖನಗಳೆಲ್ಲವೂ ಜಾನಪದದ ಆರಂಭಿಕ ಅಭ್ಯಾಸಿಗಳಿಗೆ ಉಪಯುಕ್ತವಾಗುವ ರೀತಿಯಲ್ಲಿವೆ.

ಪ್ರಸ್ತುತ ಸಮೀಕ್ಷೆಗೆ ಲಭ್ಯವಾಗದ ಕೆಳಕಂಡ ಪುಸ್ತಕಗಳ ಬಗ್ಗೆ ಕೃಷ್ಣಮೂರ್ತಿ ಹನೂರು ಅವರು ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ಬರೆದ ವಿಮರ್ಶೆಗಳ ಸಾರಾಂಶ ರೂಪವನ್ನು ಈ ಕೆಳಗೆ ಕೊಡಲಾಗಿದೆ.

ಜಾನಪದ ಸೌರಭ - ಡಾ. ಬಸವರಾಜ ಪೋಲೀಸ್ ಪಾಟೀಲ, ರಾಜ್ಯವನುಳಿಸೀತು ರಾಗಿಯ ಕಲ್ಲು - ಒಳ್ಳೇಕೆರೆ ಹನುಮಂತಪ್ಪ, ಜಾನಪದ ಜೇವಾಳ - ನಗುವನಹಳ್ಳಿ ಪಿ. ರತ್ನ.

'ಜಾನಪದ ಸೌರಭ' ಕೃತಿಯಲ್ಲಿ ಪೋಲೀಸ್ ಪಾಟೀಲರು ಜಾನಪದವನ್ನು ಕುರಿತು ಐದು ಲೇಖನಗಳನ್ನು ಬರೆದಿದ್ದಾರೆ. ಜನಪದ ಜೀವನ ವಿಧಾನ, ಹೈದ್ರಾಬಾದ್ ಕರ್ನಾಟಕದ ಜನಪದ ಸಾಹಿತ್ಯ ಒಂದು ಸಮೀಕ್ಷೆ, ಜಾನಪದ ನಾಲ್ಕು ಚಿಂತನೆಗಳು ಇತ್ಯಾದಿಯಾದ ಐದು ಲೇಖನಗಳು ಜಾನಪದವನ್ನು ಕುರಿತಂತೆ ಗಂಭೀರ ಹೊಳಹುಗಳನ್ನು, ಹೊಸ ನೋಟಗಳನ್ನು ನೀಡುವುದಿಲ್ಲ. ಎರಡನೆಯ ಲೇಖನ, ಹೈದ್ರಾಬಾದ್ ಕರ್ನಾಟಕದ ಕೆಲವು ಜಾನಪದ ಹಾಡುಗಾರರ ಹಾಡುಗಾರ್ತಿಯರ ಪಟ್ಟಿ, ಪರಿಚಯ ಬಿಟ್ಟರೆ ಉಳಿದ ಲೇಖನಗಳ ಬರವಣಿಗೆ ಹೇಳಿಕೆಗಳ ಮಟ್ಟದಲ್ಲಿ ಮೇಲು ಪದರದಲ್ಲಿಯೇ ಸಾಗುತ್ತದೆ. ಇದಕ್ಕೆ 'ಜಾನಪದ ಅಂಶಗಳು' ಎಂಬ ಕೊನೆಯ ಲೇಖನದಿಂದ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ಲೇಖಕರ ಚಿಂತನಾ ಕ್ರಮವನ್ನು ಅರಿಯಬಹುದು. ಪಂಪ, ರನ್ನ, ನೇಮಿಚಂದ್ರ, ವಚನಕಾರರ ಮೇಲೆ ಜಾನಪದ ಪ್ರಭಾವ ಹೇಗಾಗಿದೆಯೆಂಬುದನ್ನು ವಿವರಿಸುತ್ತ ರನ್ನ ಕವಿ ತಾನೇ ಹೇಳುವಂತೆ ಅಂದಿನ ಮುದವೊಳಲು ಇಂದಿನ ಮುಧೋಳ್ ಗ್ರಾಮ ತನ್ನ ಜನ್ಮಸ್ಥಳ ಎನ್ನುತ್ತಾನೆ. ಅಂದರೆ ಒಂದು ಚಿಕ್ಕ ಹಳ್ಳಿಯಲ್ಲಿ ಆತ ಹುಟ್ಟಿ ಬೆಳೆದ ಎಂದು ಅರ್ಥ. ಮುಂದೆ ಶಿಷ್ಟ ಕವಿಯಾಗಿ ಉನ್ನತಕ್ಕೇರಿದರೂ ಬೆಳೆದು ಬಂದುದು ಮಣ್ಣಿನ ಮಗನಾಗಿ. ಹೀಗಾಗಿ ಆತ ಬದುಕಿದ ಅಂದಿನ ಗ್ರಾಮೀಣ ಸಮಾಜದ ಅರಿವು ಆಚಾರಗಳೆಲ್ಲ ಕವಿಯ ಕಾವ್ಯದಲ್ಲಿ ರೂಢವಾಗಿವೆ. (ಪುಟ ೯೫)......... ಜಕ್ಕಿ ಮತ್ತು ಶಾಂತಿ ಎಂಬಿಬ್ಬರು ರನ್ನನ ಮಡದಿಯರು ಇಲ್ಲಿನ ಮಡದಿಯರ ಗುಣವರ್ಣನೆ ಸತಿಗೆ ಗುಣವೇ ಭೂಷಣ ಎನ್ನುವ ಜನಪದ ಅನುಭವ ಮಾತುಗಳನ್ನು ಹೆಚ್ಚು ಹೋಲುತ್ತದೆ. ಕವಿ ತನ್ನ ಇಬ್ಬರು ಪತ್ನಿಯರಲ್ಲಿ ಹೆಚ್ಚಿನ ಸುಖ ಅನುಭವಿಸಿದಂತಿದೆ. ಅಂತೆಯೇ ಅವರನ್ನು ಅತಿ ಪ್ರೀತಿಯಿಂದ ಜಕ್ಕಿಶಾಂತಿಯೆಂದು ಹೃದಯ ತುಂಬಿ ಕರೆದಿದ್ದಾನೆ. ಹೆಂಡತಿಯ ಹೆಸರನ್ನು ಮೊಟಕುಮಾಡಿ ಕರೆಯುವ ಜನಪದರ ರಸಿಕ ಮನೋಭಾವ ರನ್ನ ಕವಿಯ ಮೇಲೆ ನಿಚ್ಚಳವಾಗಿ ಬಿದ್ದಂತೆ ತೋರುತ್ತದೆ........... (ಪುಟ - ೯೭) ಈ ಬಗೆಯ ಸಂಶೋಧನಾ ವಿವರಗಳು ಕೃತಿಯ ಲೇಖನಗಳಲ್ಲಿವೆ.

'ರಾಜ್ಯವನುಳಿಸೀತು ರಾಗೀಯ ಕಲ್ಲು' ಈ ಪುಸ್ತಕದಲ್ಲಿ ಹನುಮಂತಪ್ಪನವರು ಕಳೆದ ೧೫ ವರ್ಷಗಳಿಂದ ಬರೆದ ಸುಮಾರು ಇಪ್ಪತ್ತು ಲೇಖನಗಳನ್ನು ಪ್ರಕಟಿಸಿದ್ದಾರೆ. ಕೆಲವು ಶೀರ್ಷಿಕೆಗಳನ್ನು ಪ್ರಸ್ತಾವಿಸುವುದಾದರೆ ಚಂದ್ರಗುತ್ತಿ ಎಲ್ಲಮ್ಮನ ಜಾತ್ರೆ, ಜಾನಪದದಲ್ಲಿ ಅಣ್ಣಾ ತಂಗಿಯರು, ಜಾನಪದದಲ್ಲಿ ಮಳೆರಾಯ, ಜಾನಪದದಲ್ಲಿ

ದೀಪಾವಳಿ........ ಈ ಲೇಖನಗಳು ವಿಚಾರಸಂಕಿರಣಗಳಿಗಾಗಿಯೂ, ಪತ್ರಿಕೆಗಳಿಗಾಗಿಯೂ ಬರೆದವು ಎಂದು ಲೇಖಕರು ಹೇಳಿಕೊಂಡಿದ್ದಾರೆ. ಪ್ರತಿಯೊಂದು ಶೀರ್ಷಿಕೆಗೆ ಸಂಬಂಧಪಟ್ಟಂತೆ ಜಾನಪದ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು, ಅದಕ್ಕೆ ತುಂಬು ಹೃದಯದ ಮೆಚ್ಚುಗೆಯ ವ್ಯಾಖ್ಯಾನ ನೀಡುತ್ತಾ ಹೋಗುವುದು ಈ ಕ್ರಮದಲ್ಲಿವೆ ಪುಸ್ತಕದ ಲೇಖನಗಳು. ಹೀಗಾಗಿ ಎಲ್ಲ ಲೇಖನಗಳೂ ವ್ಯಾಖ್ಯಾನದ ಹಂತದಲ್ಲೇ ನಿಂತುಬಿಡುತ್ತವೆ. ಉದಾಹರಣೆಗೆ 'ರಾಜ್ಯವನುಳಿಸೀತು ರಾಗೀಯಕಲ್ಲು' ಲೇಖನವನ್ನೇ ತೆಗೆದುಕೊಂಡರೆ ಜಾನಪದ ಎಂದೊಡನೆಯೇ ಬಹುತೇಕ ವಿದ್ವಾಂಸರು ತಪ್ಪದೇ ಹೇಳುವ ಕುರಿತೋದದೆಯುಂ ಕಾವ್ಯ ಪರಿಣತಮತಿಗಳು........... ಎಂಬ ವಾಕ್ಯವನ್ನು ಉದ್ಧರಿಸಿ, ಗ್ರಾಮೀಣ ಜನರ ಕಾವ್ಯಕುಂಚದಲ್ಲಿ ಅಳವಡಿಸಿಕೊಳ್ಳದ ವಸ್ತುಗಳೇ ಇಲ್ಲ. ಪಶು, ಪಕ್ಷಿ ಗಿಡ, ಮರ, ಬಳ್ಳಿ, ಎಲೆ, ಹೂವು, ಕಾಯಿ, ದವಸ, ಧಾನ್ಯ ಎಲ್ಲವೂ ಅವರ ಸಾಹಿತ್ಯ ಸುಧೆಯ ಭಂಡಾರವಾಗಿದ್ದವು ಎಂದು ವೀಳ್ಯದೆಲೆ, ಅಡಿಕೆ, ಸುಣ್ಣ ಮಾವು, ಬಾಳೆ, ಸೋರೆಕಾಯಿಯ ಮೇಲೆ ಇರುವ ಜಾನಪದ ಪದ್ಯಗಳನ್ನು ಉದ್ಧರಿಸಿ ವ್ಯಾಖ್ಯಾನ ಕೊಡುತ್ತ ಹೋಗುತ್ತಾರೆ. ಈ ಬಗೆಯ ಲೇಖನಗಳೆಲ್ಲವನ್ನೂ ಬೇರೆಲ್ಲಿಯೋ ಓದಿದಂತೆ ಭಾಸವಾಗುತ್ತದೆ. ಜಾನಪದ ಅಧ್ಯಯನದ ಆರಂಭ ಕಾಲದಲ್ಲಿ ಅದರ ಎಲ್ಲ ಮುಖಗಳನ್ನೂ ಹಾಡಿ ಹೊಗಳುವ, ಜನಪ್ರಿಯಗೊಳಿಸುವ ಸಂದರ್ಭದಲ್ಲಿ ಇಂಥ ಲೇಖನಗಳು ಹೆಚ್ಚು ಬಂದವು. ಬಹುಪಾಲು ಜಾನಪದಕ್ಕೆ ಸಂಬಂಧಪಟ್ಟಂತೆ ಈಗಲೂ ಅದೇ ಕ್ರಮ ಮುಂದುವರೆಯುತ್ತಿದೆ ಎನ್ನುವುದಕ್ಕೆ ಹನುಮಂತಪ್ಪನವರ ಲೇಖನಗಳು ಸಾಕ್ಷಿಯಾಗುತ್ತವೆ.

ಜಾನಪದ ಜೀವಾಳ (ನಗುವನಹಳ್ಳಿ ಪಿ. ರತ್ನ) ಕೃತಿಯ ವಸ್ತು ವಿವರ ಕೊಂಚ ಬೇರೆ ಬಗೆಯದಾಗಿದೆ. ಈ ಪುಸ್ತಕದೊಳಗಿನ ಹತ್ತು ಲೇಖನಗಳು ಗ್ರಾಮೀಣ ಬದುಕಿನ ವಿವಿಧ ಮುಖಗಳ ವಿವರ ಸಂಗ್ರಹಗಳಾಗಿವೆ. ದಕ್ಷಿಣ ಕರ್ನಾಟಕದ ತೊಡುಗೆಗಳು, ಶ್ರೀರಂಗ ಪಟ್ಟಣ ತಾಲೂಕಿನ ಗ್ರಾಮದೇವತೆ ಹಬ್ಬಗಳು, ಗ್ರಾಮೀಣ ಆಟಗಳು, ಮಂಡ್ಯಜಿಲ್ಲೆಯ ಒಕ್ಕಲಿಗರ ಮದುವೆ ಸಂಪ್ರದಾಯ ಈ ಮುಂತಾದ ವಿಷಯಕ್ಕೆ ಸಂಬಂಧಿಸಿದಂತೆ ವ್ಯಾಪಕವಾದ ವಿಷಯ ಸಂಗ್ರಹವಿದೆ. ಪಿ. ರತ್ನ ಅವರು ಹೀಗೆ ವ್ಯಾಪಕ ಕ್ಷೇತ್ರಕಾರ್ಯ ಮಾಡಿರುವುದು ಸ್ತುತ್ಯಾರ್ಹ. ಆದರೆ ಸಂಗ್ರಹಿತ ವಿವರಗಳನ್ನು ಕುರಿತು ಎಲ್ಲಿಯೂ ಅದರ ಆಳಕ್ಕಿಳಿದು ವಿಶ್ಲೇಷಿಸಿದಂತೆ ಕಾಣುವುದಿಲ್ಲ. ಇದೀಗ ಜಾನಪದ ಸಂಗ್ರಹದ ಜೊತಗೇ ಅದರ ಸಾಮಾಜಿಕ ಹಿನ್ನೆಲೆಯನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಬೇಕಾದ ಅಗತ್ಯ ಬಹಳವಿದೆ. ಆಗಲೇ ಜಾನಪದದ ಅಧ್ಯಯನ ತಕ್ಕಮಟ್ಟಿಗಾದರೂ ಪೂರ್ಣವಾದಂತಾಗುತ್ತದೆ. ರತ್ನ ಅವರು ಸಂಗ್ರಹಿಸಿರುವ ಗ್ರಾಮೀಣ ಆಟಗಳು

ಲೇಖನ ತೆಗೆದುಕೊಳ್ಳುವುದಾದರೆ ಅಲ್ಲಿ ಗ್ರಾಮೀಣ ಹೆಣ್ಣುಮಕ್ಕಳು, ಗಂಡುಮಕ್ಕಳು ಆಡುವ ಎಲ್ಲ ಆಟಗಳನ್ನೂ ಒಂದೂ ಬಿಡದಂತೆ ಸಂಗ್ರಹಿಸಿಕೊಡುತ್ತಾರೆ. ಆದರೆ ಕುಂಟೋಬಿಲ್ಲೆ ಆಟದ ವೇಳೆಯಲ್ಲಿ ಹೆಂಚಿನ ಬಿಲ್ಲೆಯನ್ನು ಮನೆಮನೆಗೆ ಎಸೆದು ಒಂಟಿಕಾಲಿನಲ್ಲಿ ಕುಂಟುತ್ತಾ ಆಡುವಾಗ ಕೆಲವು ಮನೆಗಳಲ್ಲಿ ಎರಡು ಕಾಲನ್ನೂ ಊರಿ, ವಿಶ್ರಾಂತಿ ತೆಗೆದುಕೊಳ್ಳುವ ಮನೆಯನ್ನು ಹೆಣ್ಣುಮಕ್ಕಳು 'ತಾಯಿಮನೆ' ಎಂದು ಕರೆಯುವುದಿದೆ. ಕಂಟುತ್ತ ದಾಟುವ ಮನೆಯ್ನು 'ಮಾವನಮನೆ' ಎಂದು ಕರೆಯುವ ಸೂಚನೆ ಇದೆ. ಕೇವಲ ಹೆಣ್ಣು ಮಕ್ಕಳಿಗೇ ಮೀಸಲಾಗಿರುವ ಈ ಆಟದ ವ್ಯಾಯಾಮ ಮತ್ತು ಅಲ್ಲಿ ಬರುವ ಹೆಸರುಗಳು ಹೆಣ್ಣುಮಕ್ಕಳ ಮುಂದಿನ ಬದುಕಿನ ಅರ್ಥಪೂರ್ಣ ಪ್ರಯೋಗದಂತೆ ತೋರುತ್ತದೆ. ರತ್ನ ಅವರು ಕೇವಲ ಕುಂಟೋಬಿಲ್ಲೆ ಆಟದ ಕ್ರಮ ಹೇಳುತ್ತಾ ಹೋಗುತ್ತಾರೆಯೇ ಹೊರತು ಮೇಲಿನಂತೆ ಅದರ ಅರ್ಥವಂತಿಕೆಯನ್ನು ಹುಡುಕುವ ಪ್ರಯತ್ನಮಾಡುವುದಿಲ್ಲ. ಮುಂದಿನ ಕೃತಿಗಳಲ್ಲಿಯಾದರೂ ಸಂಗ್ರಹಕರು 'ಜನಾಂಗದ ಜೇವಾಳ'ದ ಆಳವೇನು, ಅರ್ಥವೇನು ಎಂಬುದನ್ನು ಹುಡುಕುವ ಪ್ರಯತ್ನ ಮಾಡಬೇಕು.

'ಜನಪದ ಸಂಸ್ಕೃತಿ' ಎಂಬ ಶೀರ್ಷಿಕೆಯ ಪುಸ್ತಕವನ್ನು ಮಂಜುನಾಥ ಬೇವಿನಕಟ್ಟಿ ಅವರು ಪ್ರಕಟಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪುಸ್ತಕ ಮಾಹಿತಿ ಜೂನ್, ೧೯೯೪ರ ಸಂಚಿಕೆಯಲ್ಲಿ ಈ ಗ್ರಂಥದ ಬಗ್ಗೆ ಮಾಧವ ಪೆರಾಜೆಯವರು ಬರೆದಿರುವ ವಿಮರ್ಶೆ ಹೀಗಿದೆ: ಪ್ರಸ್ತುತ ಕೃತಿಯಲ್ಲಿ ಗ್ರಾಮದೇವತೆಯ ಹಿನ್ನೆಲೆ, ಸ್ವರೂಪ ಮತ್ತು ಜಾತ್ರೆ, 'ಜನಪದ ನಂಬಿಕೆಗಳು', ಒಗಟು ಮತ್ತು ಪ್ರಕೃತಿ, ಬುಡಕಟ್ಟು ಸಂಸ್ಕೃತಿ ಮತ್ತು ಬದಲಾವಣೆ, ಬುಡಬುಡಿಕೆಯವರು, ಹೆಣ್ಣುಗಳ ನಾಡಿನಲ್ಲಿ, ಮೌಲ್ಯ ಮತ್ತು ಶೋಷಣೆ, ಮನಶಾಸ್ತ್ರಜ್ಞರು ಮತ್ತು ಜಾನಪದ ಹೀಗೆ ಏಳು ಲೇಖನಗಳಿವೆ.

ಜಾನಪದದ ಬಗ್ಗೆ ತೀವ್ರ ಕಾಳಜಿಯಿಂದ ಬರೆಯಲಾದ ಲೇಖನಗಳಿವು. ಹಾಗಾದುದರಿಂದ ಪ್ರತಿಯೊಂದು ಲೇಖನದಲ್ಲಿಯೂ ಜಾನಪದೀಯ ವಿಶಿಷ್ಟತೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಗ್ರಾಮದೇವತೆ, ನಂಬಿಕೆ, ಒಗಟು, ಸಂಸ್ಕೃತಿ, ಬುಡಬುಡಿಕೆಯವರು, ಹೆಣ್ಣು, ಮೌಲ್ಯ ಇತ್ಯಾದಿಗಳ ಚರ್ಚೆಯನ್ನು ಈ ಹಿನ್ನೆಲೆಯಲ್ಲಿಯೇ ಮಾಡಲಾಗಿದೆ. ಅಂದರೆ ಈ ಲೇಖನಗಳ ಹಿನ್ನೆಲೆಯಲ್ಲಿ ಜಾನಪದದ ಬಗ್ಗೆ ಮುಗ್ಧ ಬೆರಗೊಂದು ಕಾಣಿಸಿಕೊಂಡಿದೆ ಎಂದರ್ಥ. ಕೃತಿಯಲ್ಲಿ ಕಾಣಿಸಿಕೊಂಡ ಈ ಮುಗ್ಧ ಬೆರಗು ಅದರ ಸಫಲತೆಯನ್ನು ಏಕಕಾಲದಲ್ಲಿ ಹೇಳಬಲ್ಲುದು ಎಂದೆನಿಸುತ್ತದೆ. ಇದನ್ನು ಮುಗ್ಧ ಬೆರಗು ಎಂದು ಹೇಳಲಾದ ಕಾರಣವಿದು. ಇಲ್ಲಿಯ ಯಾವ ಲೇಖನಗಳಿಗೂ ಸ್ಪಷ್ಟವಾದ ಗುರಿ ಮತ್ತು ಉದ್ದೇಶಗಳಿಲ್ಲ. ಪ್ರಚಲಿತ ಸಿದ್ಧಾಂತವೊಂದರ ಹಿನ್ನೆಲೆಯಾಗಲೀ, ಅಂದರೆ

ಸಿದ್ಧಾಂತಗಳನ್ನು ಅನುಭವದ ಹಿನ್ನೆಲೆಯಲ್ಲಿ ಪ್ರಶ್ನಿಸುವುದಾಗಲೀ ಈ ಕೃತಿಗೆ ದೂರ. ಹಾಗಾದುದರಿಂದ ಗುರಿ ಮತ್ತು ಉದ್ದೇಶಗಳಿಂದ ವಿವಂಚಿತವಾದ ಈ ಬರವಣಿಗೆಗಳಿಗೆ ಆ ಮೂಲಕ ದಕ್ಕಬಹುದಾದ ಔಚಿತ್ಯ, ದಿಟ್ಟತನಗಳಲ್ಲಿ ಅದರ ಫಲವಾಗಿ ಎಲ್ಲ ಲೇಖನಗಳೂ ವಿವರಣಾತ್ಮಕವಾಗಿವೆ. ಇಂತಹ ಲೇಖನಗಳ ಗುಣವೆಂದು ನಾವು ಗುರುತಿಸಬಹುದಾದರೆ ಅಲ್ಲಿಯ ವಿವರವಾದ ನಿರೂಪಣೆಗಳು ಮಾತ್ರ. ಸಿದ್ಧಾಂತಗಳ ಅನ್ವಯದಲ್ಲಿ ತೋರಿ ಬರುವ ಬೌದ್ಧಿಕವಿಲಾಸ, ವ್ಯಾಖ್ಯಾನಗಳು ಇಲ್ಲಿಲ್ಲ.

## ಜಾನಪದ ಕ್ಷೇತ್ರದ ಮಹನೀಯರು

ಜಾನಪದ ಕ್ಷೇತ್ರದಲ್ಲಿ ಅನೇಕ ಮಹನೀಯರು ದುಡಿದಿದ್ದಾರೆ. ಜಾನಪದ ಅಧ್ಯಯನಕ್ಕೆ ಅವರು ರೂಪಿಸಿಕೊಂಡ ವಿಧಾನಗಳು, ಅನುಸರಿಸಿದ ಮಾರ್ಗಗಳು ಹಾಗೂ ಅವರ ಸಾಧನೆಗಳು ಕಿರಿಯರಿಗೆ ಮಾರ್ಗದರ್ಶಕ ಹಾಗೂ ಸ್ಫೂರ್ತಿದಾಯಕ. ಇಂತಹವರಲ್ಲಿ ಪಾಶ್ಚಾತ್ಯ ವಿದ್ವಾಂಸರೂ ಇದ್ದಾರೆ. ಭಾರತೀಯ ವಿದ್ವಾಂಸರೂ ಇದ್ದಾರೆ. ಜಾನಪದ ಕಲಾವಿದರ ಬದುಕು ಮತ್ತು ಸಾಧನೆಗಳೂ ಸಹ ಶಿಷ್ಟ ಕಲಾವಿದರ ಬದುಕು, ಸಾಧನೆಗಳಂತೆ ತಿಳಿದುಕೊಳ್ಳಬೇಕಾದ ವಿಷಯವಾಗಿದ್ದರೂ ಈ ನಿಟ್ಟಿನಲ್ಲಿ ಇದುವರೆಗೆ ಹೆಚ್ಚಿನ ಪ್ರಯತ್ನಗಳೇನೂ ನಡೆದಿಲ್ಲ. ಜಾನಪದ ಅಧ್ಯಯನದ ದೃಷ್ಟಿಯಿಂದ ಇಂತಹ ವ್ಯಕ್ತಿಚಿತ್ರಗಳನ್ನು ಕೊಡುವ ನಾಲ್ಕು ಪುಸ್ತಕಗಳು ಈ ವರ್ಷ ಬೆಳಕು ಕಂಡಿವೆ.

ಅಮೆರಿಕೆಯ ಜಾನಪದ ವಿದ್ವಾಂಸರ ಪರಂಪರೆಯಲ್ಲಿ ಬಹುಮುಖ್ಯ ಸ್ಥಾನ ಗಳಿಸಿದ ರಿಚರ್ಡ್ ಎಂ ಡಾರ್ಸನ್ ಅವರ ಕುರಿತು ಸಂಧ್ಯಾರೆಡ್ಡಿಯವರು ಜಾನಪದ ಮತ್ತು ಯಕ್ಷಗಾನ ಅಕಾಡಮಿಗಾಗಿ ಒಂದು ಪುಸ್ತಕ ಬರೆದಿದ್ದಾರೆ. ಜಾನಪದ ಅಧ್ಯಯನಕ್ಕೆ ಡಾರ್ಸನ್ ನೀಡಿದ ಕೊಡುಗೆ ಎಷ್ಟು ಮಹತ್ವದ್ದೆಂದರೆ, ಮ್ಯಾಕ್ ಎಡ್ವರ್ಡ್ ಲೀಚ್ ಎಂಬ ಮತ್ತೊಬ್ಬ ಜಾನಪದ ವಿದ್ವಾಂಸ ಇವರನ್ನು ೨೦ನೇ ಶತಮಾನದ ವಿಲಿಯಂ ಥಾಂಸ್ ಎಂದು ಕರೆದರು. ಜಾನಪದದ ಬಗ್ಗೆ ವಿಶ್ವವಿದ್ಯಾಲಯ ಹಾಗೂ ವಿದ್ವಾಂಸರ ವಲಯದಲ್ಲಿ ತಾತ್ಸಾರ ಮನೋಭಾವ ಇದ್ದಂಥ ಕಾಲದಲ್ಲಿ, ಜಾನಪದವು ಇತರ ಅಧ್ಯಯನ ಕ್ಷೇತ್ರಗಳಿಗೆ ಸರಿಮಿಗಿಲಾದ ಕ್ಷೇತ್ರ ಎಂಬುದನ್ನು ಮನವರಿಕೆ ಮಾಡಿಕೊಡುವುದಕ್ಕಾಗಿ ತಮ್ಮ ಅಧ್ಯಯನ ಹಾಗೂ ಬರಹಗಳನ್ನು ಮೀಸಲಿಟ್ಟ ವ್ಯಕ್ತಿ ಡಾರ್ಸನ್. ಸುಮಾರು ೨೩ಕ್ಕೂ ಹೆಚ್ಚು ಜಾನಪದ ಗ್ರಂಥಗಳ ಸಂಪಾದನೆ, ವಿವಿಧ ದೇಶಗಳ ಜನಪದ ಕಥಾಸಂಕಲನಗಳ ಸಂಪಾದನೆ, ೨೫೦ಕ್ಕೂ ಅಧಿಕ ಜಾನಪದೀಯ ಲೇಖನ ಪ್ರಬಂಧ.......... ಇವು ಅವರು ಜಾನಪದ ಕ್ಷೇತ್ರದಲ್ಲಿ ಮಾಡಿರುವ ದೈತ್ಯಗಾತ್ರದ ಕೆಲಸಕ್ಕೆ ರುಜುವಾತು. ಫೇಕ್‌ಲೋರ್ (ನಕಲಿ ಜಾನಪದ) ಎನ್ನುವಂಥ ಹೊಸ ಪರಿಕಲ್ಪನೆಯನ್ನು ಅವರು

ಹುಟ್ಟುಹಾಕಿದರು. ಜಾನಪದದ ಬಗ್ಗೆ ಸ್ಪಷ್ಟ ಪರಿಕಲ್ಪನೆ ಹೊಂದಿದ್ದ ಒಬ್ಬ ಅಪೂರ್ವ ವಿದ್ವಾಂಸರಾಗಿದ್ದ ಡಾರ್ಸನ್, ಜಾನಪದ ಅಭ್ಯಾಸಿಗಳಿಗೆ, ಸಂಶೋಧಕರಿಗೆ ಮಾರ್ಗದರ್ಶನ ನೀಡುವಂತಹ ಅನೇಕ ಲೇಖನಗಳನ್ನು ಬರೆದರು. ಅಮೆರಿಕೆಯಂಥ ಆಧುನಿಕ ದೇಶದ ಜಾನಪದದ ಸ್ವರೂಪ ಹಾಗೂ ಬುಡಕಟ್ಟು ಮತ್ತು ಆದಿವಾಸಿ ಜನಾಂಗಗಳು ಹೆಚ್ಚಾಗಿರುವ ಆಫ್ರಿಕಾದಂಥ ದೇಶದ ಜಾನಪದ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಂಡು ವಿಶ್ಲೇಷಿಸಿದ ಮೊದಲ ವಿದ್ವಾಂಸ ಅವರು. ವಿಶ್ವ ಜನಪದ ಕಥಾ ಸರಣಿ ಎಂಬ ಯೋಜನೆ ಹಾಕಿಕೊಂಡು ಒಂದೊಂದಾಗಿ ೧೨ ಜನಪದ ಕಥಾಸಂಕಲನಗಳನ್ನು ಪ್ರಕಟಿಸಿದರು. ಅತ್ಯಂತ ಶಾಸ್ತ್ರೀಯವಾಗಿ ಮತ್ತು ಆಕರ್ಷಕವಾಗಿ ಪ್ರಕಟವಾಗಿರುವ ಈ ಸಂಕಲನಗಳು ಜನಪದ ಕಥೆಗಳ ಅಭ್ಯಾಸಿಗಳಿಗೆ ಅಮೂಲ್ಯವಾಗಿವೆ. ನಗರ ಜಾನಪದ, ಆಧುನಿಕ ಜಾನಪದ ಇವು ಅವರಿಗೆ ಪ್ರಿಯವಾದ ವಿಷಯಗಳಾಗಿದ್ದವು. ನಗರಗಳಲ್ಲಿ ಜಾನಪದವಿದೆಯೆ? ಇದ್ದರೆ, ಅದರ ಸ್ವರೂಪವೇನು? ಅದನ್ನು ಹೇಗೆ ಸಂಗ್ರಹಿಸಬೇಕು? ಮೊದಲಾದ ವಿಚಾರಗಳನ್ನು ತಮ್ಮ ಲೇಖನ ಹಾಗೂ ಸಂಪಾದಿತ ಕೃತಿಗಳಲ್ಲಿ ಪ್ರಕಟಿಸಿದ್ದಾರೆ. ಜಾನಪದದ ಕೆಲಸವನ್ನು ಮಾಡಲೇಬೇಕಾದ ಕೆಲಸ ಎಂಬ ಶ್ರದ್ಧೆಯಿಂದ ಮಾಡಿದ ಡಾರ್ಸನ್, ಸಾಂಪ್ರದಾಯಿಕ ಪರಿಕಲ್ಪನೆಯ ಜಾನಪದ ಹಾಗೂ ಹೊಸಹಾದಿ ಹಿಡಿದಿರುವ ಜಾನಪದ ಮಾರ್ಗಗಳ ನಡುವಿನ ಕೊಂಡಿಯಾಗಿ ನಿಲ್ಲುತ್ತಾರೆ. ಡಾರ್ಸನ್ನರನ್ನು ಕುರಿತ ಪ್ರಸ್ತುತ ಕೃತಿಯಲ್ಲಿ ಜಾನಪದದ ಬಗ್ಗೆ ಡಾರ್ಸನ್ ಅವರ ದೃಷ್ಟಿ, ನಿಲುವು, ಅವರು ಹುಟ್ಟು ಹಾಕಿದ ಫೇಕ್‌ಲೋರ್ - ಫೋಕ್‌ಲೈಫ್‌ನಂತಹ ಹೊಸ ಪರಿಕಲ್ಪನೆಗಳು ಮತ್ತು ಡಾರ್ಸನ್ ಅವರ ಕೆಲವು ಮುಖ್ಯ ಕೃತಿಗಳ ಬಗ್ಗೆ ಸಮರ್ಥವಾದ ಪರಿಚಯವಿದೆ. ಜಾನಪದ ವಿದ್ಯಾರ್ಥಿಗಳು, ಡಾರ್ಸನ್ನರಂತಹ ಒಬ್ಬ ವಿದೇಶೀ ವಿದ್ವಾಂಸರ ಸಾಧನೆ ಹಾಗೂ ಕಾರ್ಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದಕ್ಕೆ ಈ ಕೃತಿ ನೆರವಾಗುವುದರಲ್ಲಿ ಸಂದೇಹವಿಲ್ಲ.

ಕನ್ನಡ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದ ಹಿರಿಯರಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಮುಖ್ಯರಾದವರು. ಮೂವತ್ತರ ದಶಕದಿಂದಲೂ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ಕೃತಿಗಳನ್ನು ಹೊರತಂದ ಅಗ್ರಗಣ್ಯರು. ಗೊರೂರರಿಗೆ ಸಾಹಿತ್ಯ ಕ್ಷೇತ್ರದಲ್ಲಿದ್ದಷ್ಟೇ ಆಸಕ್ತಿ ಜಾನಪದದ ಬಗೆಗೂ ಇತ್ತು. ಅವರ ಜಾನಪದ ಪ್ರಜ್ಞೆ ಜಾನಪದ ಕೃತಿಗಳಲ್ಲಿ ನೇರವಾಗಿ ಪ್ರತಿಬಿಂಬಿಸಿರುವಂತೆ ಕಂಡರೂ ಅವರ ಸಾಹಿತ್ಯ ಕೃತಿಗಳಲ್ಲೂ ಅದು ದಟ್ಟವಾಗಿ ಪ್ರತಿಬಿಂಬಿಸಿದೆ ಎಂಬುದನ್ನು ಮರೆಯಬಾರದು. ಅವರ ಎಲ್ಲ ಕೃತಿಗಳೂ ಗೊರೂರು ಪರಿಸರದ ಸಾಂಸ್ಕೃತಿಕ ಬದುಕಿಗೆ ಹಿಡಿದ ಕನ್ನಡಿ. ಪ್ರಾದೇಶಿಕ ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ದಟ್ಟವಾಗಿ ಪ್ರತಿಬಿಂಬಿಸಿದ ಕುವೆಂಪು, ಶಿವರಾಮ ಕಾರಂತ, ಎಚ್.ಎಲ್. ನಾಗೇಗೌಡ ಮತ್ತು ರಾವ್ ಬಹದ್ದೂರ್ ಅವರ ಸಾಲಿಗೇ

ಗೊರೂರರೂ ಸೇರುತ್ತಾರೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅವರು ಮೂರು ಕೃತಿಗಳನ್ನು ಪ್ರಕಟಿಸಿದ್ದಾರೆ. ಹಳ್ಳಿಯ ಹಾಡುಗಳು, ಹಳ್ಳಿಯ ಬಾಳು, ಜನಪದ ಜೀವನ ಮತ್ತು ದರ್ಶನ.

ಜಾನಪದ ಸಂಗ್ರಹಣೆಯಲ್ಲಿ ಸಂಗ್ರಾಹಕ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಗೊರೂರರಿಗೆ ಸಹಜವಾದ ಅರಿವಿತ್ತು ಎಂಬ ಸಂಗತಿ ಈ ಕೃತಿಗಳಲ್ಲಿ ಕಾಣುತ್ತದೆ. ಜನಪದ ಸಾಹಿತ್ಯವಷ್ಟೇ ಜಾನಪದವಲ್ಲ, ಅದರಾಚೆಗಿನ ಜನಜೀವನದ ರೀತಿ ನೀತಿಗೂ ಸಹ ಈ ಪರಿಕಲ್ಪನೆ ಅನ್ವಯಿಸುತ್ತದೆ ಎಂಬ ಅರಿವು ಅವರಿಗಿತ್ತು. ಈ ದೃಷ್ಟಿಯಿಂದ ಅವರು ಹಳ್ಳಿಯ ಬಾಳು, ಜನಪದ ಜೀವನ ಮತ್ತು ದರ್ಶನದಲ್ಲಿ ಹಬ್ಬಹರಿದಿನ, ಉತ್ಸವ, ಗ್ರಾಮೀಣ ಸಂಪ್ರದಾಯ - ಆಚರಣೆ, ನಂಬಿಕೆ ಇತ್ಯಾದಿಗಳ ಬಗ್ಗೆ ನೀಡಿರುವ ವಿವರಗಳು ಬಹು ಅಪೂರ್ವವಾದ ಜಾನಪದೀಯ ದಾಖಲೆಗಳಾಗಿವೆ. ಬಿಂದಿಗಮ್ಮನ ಜಾತ್ರೆಯ ಬಗ್ಗೆ ಹೇಳುವಾಗ 'ಹೆದ್ನ ಹಾಕುವುದು' ಎಂಬುದನ್ನು ಯೋಗನರಸಿಂಹ ಸ್ವಾಮಿ ರಥೋತ್ಸವ ಸಂದರ್ಭದಲ್ಲಿ 'ಗೊದಮು ಹಾಕುವುದು' ಎಂಬುದನ್ನು ಅವರು ವಿವರಿಸುವ ರೀತಿಯನ್ನು ಗಮನಿಸಬಹುದು. ಗೊರೂರರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿವರಣೆಗಳನ್ನು ನೀಡುತ್ತಾರೆ. ಅವರ ಬಹುತೇಕ ಕೃತಿಗಳಲ್ಲಿ ಅಪ್ರಜ್ಞಾಪೂರ್ವಕವಾಗಿಯೇ ಜಾನಪದ ವಿವರಗಳು ಬಂದಿವೆ. ಹಾಸನ ಮತ್ತು ಮೈಸೂರು ಪರಿಸರದಲ್ಲಿ ಸಂಗ್ರಹಿಸಿದ ಸುಮಾರು ೭೫೦ ತ್ರಿಪದಿಗಳನ್ನೊಳಗೊಂಡ ಹಳ್ಳಿಯ ಹಾಡುಗಳು ಒಂದು ಉತ್ತಮ ಸಂಕಲನ. ಜನಪದಗೀತೆಗಳಲ್ಲಿರುವ ಭಾವಗೀತಾತ್ಮಕ ಸೊಗಸನ್ನು ಸೂಸಿ ಹರಿಯುವ ಅನೇಕ ಅಪೂರ್ವ ಗೀತೆಗಳು ಈ ಸಂಕಲನದಲ್ಲಿವೆ. ಗೊರೂರರ ಒಟ್ಟು ಸಾಹಿತ್ಯಿಕ ಹಾಗೂ ಜಾನಪದೀಯ ಸಾಧನೆಗಳು, ಅವರ ವ್ಯಕ್ತಿತ್ವ, ಧೋರಣೆಗಳನ್ನು ಪರಿಚಯಿಸುವ ಹಾಗೂ ವಿಶ್ಲೇಷಿಸುವ ಕೆಲಸವನ್ನು ಡಾ.ಸಿ.ಜಿ. ವೆಂಕಟಯ್ಯನವರು ಡಾ. ಗೊರೂರು ಜೀವನ ಸಾಧನೆ ಎಂಬ ಕೃತಿಯಲ್ಲಿ ಮಾಡಿದ್ದಾರೆ. ಗೊರೂರರು ಸ್ವತಃ ಗೊರೂರಿನ ಸಂಸ್ಕೃತಿಯ ಪ್ರಾತಿನಿಧಿಕ ವ್ಯಕ್ತಿಯಾಗಿದ್ದರು ಎಂಬುದಕ್ಕೆ ಇಲ್ಲಿ ವಿಶೇಷ ಒತ್ತು ನೀಡಲಾಗಿದೆ.

ಕನ್ನಡದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆಗಾಗಿ ದುಡಿದ ಆರಂಭಕಾಲದ ಮಹನೀಯರುಗಳ ಸಾಲಿಗೆ ಸೇರಿದವರು ಡಾ. ಸಿಂಪಿ ಲಿಂಗಣ್ಣ. ಮುಖ್ಯವಾಗಿ ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಸ್ಕೃತಿಗಳ ಸಮರ್ಥ ಪರಿಚಯವಾಗುವುದು ಸಿಂಪಿಲಿಂಗಣ್ಣನವರ ಕೃತಿಗಳಿಂದ. ಸಿಂಪಿಯವರು ಜನಪದ ಸಾಹಿತ್ಯ ಸಂಗ್ರಹಕ್ಕಷ್ಟೆ ತಮ್ಮ ಆಸಕ್ತಿಯನ್ನು ಸೀಮಿತಗೊಳಿಸಲಿಲ್ಲ, ಆ ಕಾಲದಲ್ಲೇ ಜಾನಪದದ ಹೊಸ ಹೊಸ ಪ್ರಕಾರಗಳ ಸಂಗ್ರಹಣೆಯತ್ತ ಅವರು ಗಮನ ಹರಿಸಿದ್ದರು. ಹಲಸಂಗಿ ಗೆಳೆಯರಿಂದು ಪ್ರಸಿದ್ಧರಾದ ತ್ರಯರಲ್ಲಿ ಸಿಂಪಿಲಿಂಗಣ್ಣನವರೂ ಒಬ್ಬರು. ಮಧುರಚೆನ್ನ, ಸಿಂಪಿಲಿಂಗಣ್ಣ , ಕಾಪಸೆ ರೇವಪ್ಪ ಈ ಮೂವರು ಸೇರಿ ಸಂಪಾದಿಸಿದ ಗರತಿಯ

ಹಾಡು (೧೯೩೧) ಸಂಕಲನ ಇಂದಿಗೂ ಸಹ ಒಂದು ಆದರ್ಶ ಮಾದರಿಯಾಗಿ ಉಳಿದಿದೆ. ಸಿಂಪಿಯವರು ಪಿ. ಧೂಲಾ ಅವರೊಡನೆ ಸೇರಿ ಪ್ರಕಟಿಸಿದ 'ಜೀವನ ಸಂಗೀತ' ಎಂಬ ಕೃತಿಯೂ ಸಹ ಸಾಕಷ್ಟು ಪ್ರಸಿದ್ಧವಾದದ್ದು. ಇದರಲ್ಲಿ ೧೨ ಶೃಂಗಾರ ಲಾವಣಿಗಳಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಸಿಂಪಿ ಲಿಂಗಣ್ಣನವರು ಸಂಗ್ರಹಿಸಿಕೊಟ್ಟ "ಉತ್ತರ ಕರ್ನಾಟಕ ಜನಪದ ಕಥೆಗಳು" ಉತ್ತರ ಕರ್ನಾಟಕದ ಆಡುಭಾಷೆಯಲ್ಲಿರುವ ೭೮ ಕಥೆಗಳನ್ನೂ, ಕಥೆಗಳ ಬಗ್ಗೆ ೧೨ ಪುಟಗಳಷ್ಟು ದೀರ್ಘವಾದ ಪರಿಚಯವನ್ನು ಒಳಗೊಂಡಂಥ ಉತ್ತಮ ಸಂಕಲನ. ಈ ಸಂಕಲನ, ಉತ್ತರ ಕರ್ನಾಟಕದ ಜನಪ್ರಿಯ ಕಥಾವರ್ಗಗಳನ್ನಷ್ಟೂ ಪರಿಚಯಿಸುತ್ತದೆ. ಪಾಠಾಂತರ ಮತ್ತು ಪ್ರಾದೇಶಿಕ ವೈಶಿಷ್ಟ್ಯಗಳ ಅಧ್ಯಯನಕ್ಕೆ ನೆರವಾಗುತ್ತದೆ. 'ಜನಾಂಗದ ಜೀವಾಳ' ಎನ್ನುವ ಕೃತಿಯಲ್ಲಿ ಜಾನಪದದ ವಿವಿಧ ಪ್ರಕಾರಗಳನ್ನು ಕುರಿತು ಸಿಂಪಿಯವರು ಬರೆದ ೧೪ ಜಾನಪದ ಲೇಖನಗಳಿವೆ. ಸಿಂಪಿ ಲಿಂಗಣ್ಣನವರು ತಮ್ಮ ಕೃತಿಗಳಿಗೆ ಬರೆಯುವ ಮುನ್ನುಡಿ ಪ್ರಸ್ತಾವನೆಗಳಾಗಲೀ ಅಥವಾ ನೇರ ಲೇಖನಗಳಾಗಲೀ ಆಡುಭಾಷೆಯ ನುಡಿಗಟ್ಟುಗಳು, ಒಗಟು - ಗಾದೆಮಾತುಗಳ ಉಲ್ಲೇಖದಿಂದ ಸ್ವಾರಸ್ಯಕರವಾಗಿರುತ್ತವೆ. ಹದಿನೇಳು ಬಿಡಿ ಲೇಖನಗಳನ್ನೊಳಗೊಂಡ 'ಹೆಡಿಗೆ ಜಾತ್ರೆ'ಯೂ ಸಹ ಸಾಕಷ್ಟು ಪ್ರಸಿದ್ಧವಾದ ಕೃತಿ. ಜನಪದ ಜೀವನ ಹಾಗೂ ಸಾಹಿತ್ಯದ ಅನೇಕ ಮುಖಗಳನ್ನು ಚಿತ್ರಿಸುವ ಈ ಕೃತಿ ಮೌಲಿಕವಾದದ್ದು. ಹೀಗೆ ಸಿಂಪಿ ಲಿಂಗಣ್ಣನವರು ಜಾನಪದ ಸಂಬಂಧವಾಗಿಯೇ ಸುಮಾರು ಒಂಭತ್ತು ಉತ್ತಮ ಕೃತಿಗಳನ್ನು ರಚಿಸಿಕೊಟ್ಟಿದ್ದು ಅವು ಕನ್ನಡ ಜಾನಪದ ಅಧ್ಯಯನಕ್ಕೆ ಅವರ ಅಪೂರ್ವ ಕಾಣಿಕೆಗಳಾಗಿವೆ. ಡಾ. ಸಿಂಪಿ ಲಿಂಗಣ್ಣ ಅವರನ್ನು ಕುರಿತು ಡಾ.ಎಂ.ಎಸ್. ವಾಲಿಯವರು ರಚಿಸಿರುವ ಡಾ.ಸಿಂಪಿಲಿಂಗಣ್ಣ ಜೀವನ, ಸಾಧನೆ ಕೃತಿಯಲ್ಲಿ ಸಿಂಪಿಯವರ ಬದುಕು ಹಾಗೂ ಸಾಹಿತ್ಯಿಕ ಮತ್ತು ಸಾಮಾಜಿಕ ಸಾಧನೆಗಳ ಒಂದು ಸ್ಥೂಲ ಪರಿಚಯವಿದೆ. ಅವರ ಎಲ್ಲ ಕೃತಿಗಳನ್ನೂ ಇಲ್ಲಿ ಪಟ್ಟಿ ಮಾಡಿಕೊಟ್ಟು ಪ್ರತಿಯೊಂದನ್ನೂ ಪರಿಚಯಿಸುವ ಕೆಲಸ ಮಾಡಿದ್ದಾರೆ. ಸಿಂಪಿಯವರು ಒಟ್ಟಾರೆಯಾಗಿ ಜಾನಪದ ಕ್ಷೇತ್ರದಲ್ಲಿ ಮಾಡಿರುವ ಕೆಲಸದ ಸ್ವರೂಪ ಹಾಗೂ ವ್ಯಾಪ್ತಿಯ ಒಂದು ಸ್ಪಷ್ಟ ಪರಿಚಯಕ್ಕೆ ಈ ಕೃತಿ ನೆರವಾಗುತ್ತದೆ.

ಕರಾವಳಿ ಯಕ್ಷಗಾನಕ್ಕೆ ಗೌರವ, ಪ್ರತಿಷ್ಠೆಯನ್ನು ತಂದುಕೊಟ್ಟ ಮಹಾನ್ ಕಲಾವಿದರ ಪೈಕಿ ಉತ್ತರ ಕನ್ನಡದ ಹೆಸರಾಂತ ಯಕ್ಷಗಾನ ಕಲಾವಿದ ಕೆರೆಮನೆ ಹೆಗಡೆಯವರೂ ಒಬ್ಬರು. ಸುಮಾರು ೧೮೦ಕ್ಕೂ ಹೆಚ್ಚಿನ ವೈವಿಧ್ಯಮಯ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅಪೂರ್ವ ಪ್ರತಿಭೆ ಅವರದಾಗಿತ್ತು. ಹಲವಾರು ಪಾತ್ರಗಳಿಗೆ ವ್ಯಕ್ತಿ ವಿಶಿಷ್ಟ ಮುದ್ರೆ ಒತ್ತಿ ಸಹೃದಯರ ನೆನಪಿನಲ್ಲಿ ಚಿರವಾಗಿ ಉಳಿದವರು ಅವರು. ಮುಂದಿನ ಕಲಾವಿದರ ಪ್ರತಿಭೆಯನ್ನು ಅಳೆಯುವುದಕ್ಕೆ ಇವರ ನಿರ್ವಹಣೆಯೇ ಅಳತೆಗೋಲಾಗಿತ್ತು. ಈ ಕಲಾಸಾಧಕರ ಬದುಕು,

ಕಲಾಸಾಧನೆಯಲ್ಲಿ ಎದುರಾದ ಎಡರುತೊಡರುಗಳು, ಒದಗಿದ ಪ್ರೇರಣೆಗಳು, ಕಲಾವೈಶಿಷ್ಟ್ಯ, ಕಲೆಯನ್ನು ಕುರಿತು ಅವರ ಮನೋಭಾವ ಇವೇ ಮೊದಲಾದವುಗಳನ್ನು ತುಂಬಾ ಪರಿಣಾಮಕಾರಿಯಾಗಿ ಪರಿಚಯಿಸುವ ಕೆಲಸವನ್ನು ಕೆರೆಮನೆ ಶಿವರಾಮ ಹೆಗಡೆ ಎಂಬ ಕೃತಿಯಲ್ಲಿ ಡಾ.ಜಿ.ಎಸ್. ಭಟ್ ಮಾಡಿದ್ದಾರೆ. ಜಿ.ಎಸ್. ಭಟ್ ಹೇಳುವಂತೆ 'ತಾನು ಅಭಿವ್ಯಕ್ತಿಗಾಗಿ ಆಯ್ಕೆ ಮಾಡಿಕೊಂಡ ಕಲಾಮಾಧ್ಯಮದಲ್ಲಿ ಸಿದ್ಧಿಯ ಪರಾಕಷ್ಠತೆಯನ್ನು ಮುಟ್ಟಿದ ಬೆರಳೆಣಿಕೆಯ ಕಲಾವಿದರಲ್ಲಿ ಹೆಗಡೆಯವರೂ ಒಬ್ಬರು. ಈ ಗ್ರಂಥದಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಅವರ ಖಾಸಗಿ ಬದುಕಿನ ವಿವರಗಳಿದ್ದರೆ, ಎರಡನೆಯ ಭಾಗದಲ್ಲಿ ಹೆಗಡೆಯವರು ಒಬ್ಬ ಸಮರ್ಥ ವೇಷಧಾರಿಯಾಗಿ ಬೆಳೆದು ನಿಂತ ಬಗೆಯನ್ನು ಅವಲೋಕಿಸಲಾಗಿದೆ. ಸಾಮಾನ್ಯವಾಗಿ, ಪ್ರಸಿದ್ಧರಾದವರ ಜೀವನ ಚಿತ್ರಣ ನೀಡುವಾಗ ಕಂಡುಬರುವಂತಹ ಉತ್ಪ್ರೇಕ್ಷಿತ ಹೇಳಿಕೆಗಳು ಈ ಬರಹದಲ್ಲಿಲ್ಲ. ಅದಕ್ಕೆ ಬದಲು, ವಾಸ್ತವ ವಿವರಗಳ ಮೂಲಕವೇ ಹೆಗಡೆಯವರ ಕಲಾಪ್ರೌಢಿಮೆ ಹಾಗೂ ವೈಶಿಷ್ಟ್ಯಗಳು ಓದುಗರಿಗೆ ಮನವರಿಕೆಯಾಗುವಂತೆ ಮಾಡುವಲ್ಲಿ ಭಟ್ ಯಶಸ್ವಿಯಾಗಿದ್ದಾರೆ. ಭಟ್ ಅವರು ಒಬ್ಬ ಕಲಾವಿದನಿಗೆ ತನ್ನ ಕಲೆಯ ಬಗ್ಗೆ ಇರುವ ತುಡಿತ, ಕಲಾಸಾಧನೆಯಲ್ಲಿ ಎದುರಾಗುವಂತಹ ವಿಶಿಷ್ಟ ತೊಡಕುಗಳು, ವಿಶೇಷ ಅನುಭವಗಳ ನೈಜ ಚಿತ್ರಣ ನೀಡುತ್ತಾ ಈ ಕೃತಿ ಆಪ್ತವಾಗುವಂತೆ ಮಾಡುತ್ತಾರೆ. ಇದಲ್ಲದೆ ಈ ನಿರೂಪಣೆಯಲ್ಲಿನ ವಿವರಗಳು ಯಕ್ಷಗಾನ ಕಲೆಯ ಹಲವಾರು ಸೂಕ್ಷ್ಮಗಳನ್ನು ಓದುಗರ ಗಮನಕ್ಕೆ ತೆರೆದಿಡುತ್ತವೆ. ಒಬ್ಬ ಒಳ್ಳೆಯ ಕಲಾವಿದ ತನ್ನ ಕಲೆಯ ಉತ್ತಮಿಕೆಗೆ ಅನುಸರಿಸುವ ಮಾರ್ಗ ಯಾವುದು? ಏತರಿಂದ ಅವನ ಕಲೆ ಉತ್ತಮಗೊಳ್ಳುತ್ತದೆ ಇವೇ ಮೊದಲಾದ ವಿವರಗಳನ್ನೂ ಸಹ ಅವರು ಅದ್ಭುತವಾಗಿ ಗ್ರಹಿಸಿದ್ದಾರೆ.

ವೃತ್ತಿಪರ ಶಿಷ್ಟ ಕಲಾವಿದರ ಬದುಕಿನಲ್ಲಿ ಕಂಡುಬರುವ ಏಳು ಬೀಳುಗಳು, ಕಲಾ ಸಾಧನೆಯ ಮಜಲುಗಳು ಜನಪದ ಕಲಾವಿದರಲ್ಲಿಯೂ ಕಂಡುಬರುತ್ತವೆ. ಆದರೂ ಶಿಷ್ಟ ಕಲಾವಿದರ ಜೀವನ ಚರಿತ್ರೆಗಳನ್ನು ಸಂಗ್ರಹಿಸುವ ಉತ್ಸುಕತೆಗೆ ಹೋಲಿಸಿದರೆ ಜನಪದ ಕಲಾವಿದರ ಬಗ್ಗೆ ಗಮನ ಹರಿದೇ ಇಲ್ಲವೆಂದು ಹೇಳಬಹುದು. ಇದಕ್ಕೆ ಈ ಕಲಾವಿದರ ಬದುಕು ಹಾಗೂ ಸಾಧನೆಯ ಮಜಲುಗಳು ದಾಖಲೆಗೆ ಸಿಗುವುದು ಕಷ್ಟ ಎಂಬುದೂ ಒಂದು ಮುಖ್ಯ ಕಾರಣ. ಕೆರೆಮನೆ ಶಿವರಾಮ ಹೆಗಡೆಯವರನ್ನು ಕುರಿತ ಪ್ರಸ್ತುತ ಗ್ರಂಥ, ಈ ನಿಟ್ಟಿನಲ್ಲಿ ಮುಂದೆ ಬರಬಹುದಾದ ಕೃತಿಗಳಿಗೆ ಮಾದರಿಯಾಗಿದೆ ಎಂದು ಹೇಳಬಹುದು.

**ಪ್ರಾದೇಶಿಕ ಜಾನಪದ**

ಭಾಷೆ ಮತ್ತು ಸಾಂಸ್ಕೃತಿಕ ವೈವಿಧ್ಯಗಳೇ ಭಾರತದ ವೈಶಿಷ್ಟ್ಯ. ಇಲ್ಲಿನ ಪ್ರತಿಯೊಂದು ರಾಜ್ಯವೂ ಸಹ ವಿಶಿಷ್ಟ ಸಂಸ್ಕೃತಿಯಿಂದ ವಿಭಿನ್ನವಾಗಿ ಕಾಣುತ್ತದೆ.

ಇವುಗಳನ್ನ ಅರ್ಥಮಾಡಿಕೊಳ್ಳಲು ಮುಖ್ಯವಾದ ತೊಡಕು ಎಂದರೆ ಭಾಷೆ. ಜಾನಪದದಂತಹ ಜಾಗತಿಕ ಸಾಮ್ಯತೆಯುಳ್ಳ ವಿಷಯದ ಅಭ್ಯಾಸಕ್ಕೆ ಪ್ರತಿಯೊಂದು ಸಂಸ್ಕೃತಿಯ ಜಾನಪದದ ಸ್ಪಷ್ಟ ಅರಿವು ಬಹಳ ಅಗತ್ಯ. ಭಾಷೆಯ ತೊಡಕಿನಿಂದಾಗಿ ಅನುವಾದಗಳ ಮೊರೆ ಹೋಗುವುದು ಅನಿವಾರ್ಯ. ಈ ದಿಸೆಯಲ್ಲಿ ಡಾ. ಸಿಪಿಕೆಯವರು ಅನುವಾದದ ಮೂಲಕ ಹೊರತಂದಿರುವ 'ರಾಜಾಸ್ಥಾನದ ಜಾನಪದ' ಎಂಬ ಗ್ರಂಥ ತುಂಬ ಸ್ವಾಗತಾರ್ಹ.

ಒಂದು ಪ್ರದೇಶದ ಜಾನಪದ ರೂಪುಗೊಳ್ಳುವಲ್ಲಿ ಅಲ್ಲಿನ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಪರಂಪರೆಗಳು ಅದರ ಮೇಲೆ ಬೀರುವ ಪ್ರಭಾವ ಅಪಾರ. ರಾಜಸ್ಥಾನದ ಸಂಸ್ಕೃತಿಯಲ್ಲಿ ಹಿಂದೂ ಧರ್ಮದ ಪರಂಪರೆಯಷ್ಟೇ ಸಮೃದ್ಧವಾಗಿ ಮುಸ್ಲಿಂ ಹಾಗೂ ಜೈನ ಧರ್ಮದ ಪರಂಪರೆಗಳೂ ಬೆಳೆದಿವೆ. ರಾಜಾಸ್ಥಾನ ಮೂಲತಃ ಶೌರ್ಯತ್ಯಾಗಗಳಿಗೆ ಹೆಸರಾದ ವೀರ ರಜಪೂತರ ನಾಡು. ಭೌಗೋಳಿಕ ದೃಷ್ಟಿಯಿಂದ ಅದರ ಸ್ವಲ್ಪ ಭಾಗ ಬರಡು ಮರುಭೂಮಿ. ಇನ್ನುಳಿದ ಭಾಗ ಮನೋಹರವಾದ ಪ್ರಾಕೃತಿಕ ಸಂಪತ್ತು, ಇತಿಹಾಸ, ಸಾಂಸ್ಕೃತಿಕ ಪರಂಪರೆಗಳಿಂದ ಶ್ರೀಮಂತವಾಗಿ ಬೆಳೆದಿರುವ ಸಮೃದ್ಧಭೂಮಿ. ಇಲ್ಲಿನ ಜಾನಪದ ವೈವಿಧ್ಯಮಯ. ಕಲೆ, ಇಲ್ಲಿ ಬಹುತೇಕ ಮಂದಿಗೆ ಕೇವಲ ಮನರಂಜನೆಯಲ್ಲ ಜೀವನೋಪಾಯದ ಸಾಧನ. ಹೀಗಾಗಿ ಇಂದಿಗೂ ಕೂಡ ಈ ಕಲಾ ಪರಂಪರೆಗಳು ಜೀವಂತವಾಗಿ ಉಳಿದಿವೆ. ಬಹಳಷ್ಟು ಮಂದಿ ಅದರಲ್ಲಿ ತೊಡಗಿಕೊಂಡಿದ್ದಾರೆ.

ಪತ್ರಕರ್ತರಾಗಿ ಹಾಗೂ ಲೇಖಕರಾಗಿ ಸಾಕಷ್ಟು ಪ್ರಸಿದ್ಧರಾಗಿರುವ ಡಿ.ಆರ್. ಅಹುಜ ಅವರು ಇಂಗ್ಲಿಷಿನಲ್ಲಿ ಈ ಪುಸ್ತಕವನ್ನು ರಚಿಸಿದ್ದಾರೆ. ಈ ಪುಸ್ತಕವನ್ನು ಓದಿದಾಗ, ಅವರು ಸ್ವತಃ ರಾಜಸ್ಥಾನದಾದ್ಯಂತ ಸಂಚರಿಸಿ ಜಾನಪದ ಅಧ್ಯಯನ ನಡೆಸಿರುವುದಕ್ಕಿಂತ ಹೆಚ್ಚಾಗಿ ಪಾಶ್ಚಾತ್ಯ ವಿದ್ವಾಂಸರು ನಡೆಸಿದ ಅಧ್ಯಯನ ಮತ್ತು ಸಂಗ್ರಹಗಳನ್ನು ಹೆಚ್ಚು ಆಧರಿಸಿರುವಂತೆ ತೋರುತ್ತದೆ. ಈ ಕೃತಿಯಲ್ಲಿ ರಾಜಾಸ್ಥಾನದ ಭೌಗೋಳಿಕ ಮತ್ತು ಜನಾಂಗಿಕ ಹಿನ್ನೆಲೆ, ಅಲ್ಲಿ ಪ್ರಚಲಿತವಿರುವ ಪುರಾಣ ಕಥೆಗಳು, ರೂಢಿಗಳು, ಸಂಪ್ರದಾಯಗಳು, ಜಾತ್ರೆ - ಹಬ್ಬಗಳು ರಾಜಸ್ಥಾನೀ ಭಾಷಾ ಪ್ರಭೇದಗಳು, ಸಾಹಿತ್ಯ - ಸಂಗೀತ - ನೃತ್ಯ - ವಾದ್ಯ ಮೊದಲಾದವುಗಳ ಒಂದು ಸ್ಥೂಲ ಪರಿಚಯವಿದೆ. ಸಂದರ್ಭಾನುಸಾರವಾಗಿ ಅಲ್ಲಿನ ಹಾಡು, ಕಥೆ, ಗಾದೆ ಮುಂತಾದವುಗಳನ್ನು ಉಲ್ಲೇಖಿಸುತ್ತಾ ಕೊನೆಯಲ್ಲಿ ಜಾನಪದದ ಒಂದೆರಡು ಕಥೆ, ಹಾಡು, ಗಾದೆ, ಒಗಟು ಹಾಗೂ ನಾಟಕ ಭಾಗವೊಂದರ ಉಲ್ಲೇಖ ನೀಡಿದ್ದಾರೆ. ಜನಪದ ಸಾಹಿತ್ಯದ ಉಲ್ಲೇಖಗಳು ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಇಲ್ಲಿ ರಾಜಸ್ಥಾನೀ ಜಾನಪದವನ್ನಷ್ಟೆ ಪರಿಚಯಿಸುವುದು ಉದ್ದೇಶವಲ್ಲ. ಹೀಗಾಗಿ ಅಲ್ಲಿನ ಜನ ಜೀವನ, ಭಾಷೆ ಹಾಗೂ ಜಾನಪದದ ಬಗ್ಗೆ ಒಂದು ಪರಿಚಯ ಸಿಗುತ್ತದೆ.

ಛಾಯಾಚಿತ್ರಗಳು ಪುಸ್ತಕದ ಅಂದ ಹಾಗೂ ಉಪಯುಕ್ತತೆಯನ್ನು ಹೆಚ್ಚಿಸಿವೆ. ಸಿಪಿಕೆಯವರ ಅನುವಾದದಿಂದ ನಮಗೆ ರಾಜಸ್ತಾನೀ ಜಾನಪದದ ಇಣುಕುನೋಟವಷ್ಟೇ ಲಭ್ಯ.

ಸಮಾರೋಪ:

ಮೇಲ್ಕಂಡ ಸಮೀಕ್ಷೆಯ ನಂತರ ಒಟ್ಟಾರೆ ಅನ್ನಿಸುವುದಿಷ್ಟು - ಕನ್ನಡದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಜಾನಪದ ಅಧ್ಯಯನ ನೆಲೆಗೊಂಡು, ನೂರಾರು ಆಸಕ್ತರು ಈ ಕೆಲಸದಲ್ಲಿ ತೊಡಗಿಕೊಂಡಿದ್ದರೂ ಸಹ, ವಿಷಯವನ್ನು ಅರ್ಥಮಾಡಿಕೊಂಡು ಮೌಲಿಕವಾದ ಬರಹಗಳನ್ನು ನೀಡುತ್ತಿರುವವರ ಸಂಖ್ಯೆ ಬೆರಳೆಣಿಕೆಯಷ್ಟೂ ಇಲ್ಲವೆನ್ನಬಹುದು. ಜಾನಪದದ ಬಗ್ಗೆ ಖಚಿತ ಪರಿಕಲ್ಪನೆ ಮೂಡಿಸುವ ದಿಸೆಯಲ್ಲಿ ಹೆಚ್ಚಿನ ಯಶಸ್ಸು ಸಿಕ್ಕಿಲ್ಲ. ಜಾನಪದದಲ್ಲಿ ಅಣ್ಣ ತಂಗಿ, ಜಾನಪದದಲ್ಲಿ ಅತ್ತೆ - ಸೊಸೆ, ಜಾನಪದದಲ್ಲಿ ಮಳೆರಾಯ..... ಇಂತಹ ಶೀರ್ಷಿಕೆಗಳ ಬರಹಗಳೇ ಇನ್ನೂ ಬರುತ್ತಿವೆ. ದೊಡ್ಡ ದೊಡ್ಡ ಶೀರ್ಷಿಕೆಗಳ ಈ ಲೇಖನಗಳ ವ್ಯಾಪ್ತಿ ಒಂದೆರಡು ಗೀತ ಸಂಕಲನಗಳ ಪರಿಧಿಯಿಂದಾಚೆಗೆ ಹೋಗಿರುವುದಿಲ್ಲ. ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆಯುವವರು, ತಾವು ಆಯ್ದುಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ಆ ಮೊದಲು ಬಂದಿರುವ ಎಲ್ಲ ಪುಸ್ತಕ, ಲೇಖನ, ಅಧ್ಯಯನಗಳನ್ನೂ ಪರಿಶೀಲನೆ ಮಾಡಿ ಅನಂತರ ತಮ್ಮ ಅಧ್ಯಯನದ ವ್ಯಾಪ್ತಿಯನ್ನು ಗೊತ್ತು ಮಾಡಿಕೊಳ್ಳುವುದು ಅಗತ್ಯ. ಹೇಳಿದ್ದನ್ನೇ ಹೇಳುವ ಪ್ರವೃತ್ತಿಯನ್ನು ಕೊಡವಿಕೊಂಡು ಹೊಸದನ್ನು ಅನ್ವೇಷಿಸುವ, ಗುರುತಿಸುವ ಪ್ರವೃತ್ತಿ ಬೆಳಸಿಕೊಳ್ಳಬೇಕು. ವಿಚಾರ ಸಂಕಿರಣಗಳನ್ನು ವ್ಯವಸ್ಥೆ ಮಾಡುವವರೂ ಸಹ ತಾವು ಪ್ರಬಂಧ ರಚನೆಗಾಗಿ ಕೊಡಲಿರುವ ವಿಷಯದ ವ್ಯಾಪ್ತಿ, ಅದಕ್ಕೆ ಅಗತ್ಯವಾಗುವ ಪೂರ್ವಾಧ್ಯಯನ, ಕ್ಷೇತ್ರಕಾರ್ಯ ಹಾಗೂ ಸಮಯಗಳ ಬಗ್ಗೆ ಖಚಿತವಾದ ತಿಳುವಳಿಕೆ ಹೊಂದಿರುವುದು ಅತ್ಯವಶ್ಯ. ವ್ಯಾಪಕವಾದ ವಿಷಯವನ್ನು ಕೊಟ್ಟು ಬರೆಯುವುದಕ್ಕೆ ೧೫ ದಿನಗಳಷ್ಟು ಕಾಲಾವಕಾಶವನ್ನೂ ಕೊಡದೆ, ಅರೆಬರೆ ರೂಪದಲ್ಲಿರುವ ಪ್ರಬಂಧಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದರೆ, ಅದರಿಂದ ಹಣ ಮತ್ತು ಶ್ರಮದ ನಷ್ಟ ಅಷ್ಟೇ ಅಲ್ಲದೆ ಹೀಗೆ ದಾಖಲಾದ ವಿಷಯಗಳು ಅಭ್ಯಾಸಿಗಳಲ್ಲಿ ತಪ್ಪು ಕಲ್ಪನೆ ಮೂಡಿಸುತ್ತವೆ. ಸಂಗ್ರಹಕಾರರಾಗಲೀ, ವಿಶ್ಲೇಷಣಾತ್ಮಕ ಅಧ್ಯಯನ ಮಾಡುವವರಾಗಲಿ, ಇಲ್ಲವೆ ವಿಚಾರಸಂಕಿರಣಗಳ ಸಂಘಟಕರೇ ಆಗಿರಲಿ, ಜಾನಪದದ ಕೆಲಸವನ್ನು ಜವಾಬ್ದಾರಿಯಿಂದ ಮಾಡುವ ಪರಿಪಾಠವನ್ನು ಇನ್ನಾದರೂ ರೂಢಿಸಿಕೊಳ್ಳುವುದು ಅಗತ್ಯ.

# ಜಾನಪದ ಪ್ರಕಟಣೆಗಳು - ೧೯೯೪

೧. ಏಳೂರು ದೇವರ ಕಾಳಗ (ಜನಪದ ಕಾವ್ಯ), ಪುಟಗಳು ೭೨, ಬೆಲೆ-೧೫ರೂ,
ಸಂ. ರಾಜಪ್ಪ ದಳವಾಯಿ

೨. ಜನಪದ ಮಂಗಳ ಗೀತೆಗಳು - ಪುಟಗಳು ೬೪, ಬೆಲೆ-೧೫ರೂ,
ಸಂ. ಜಯಶ್ರೀ ಗುತ್ತಲ

೩. ನಮ್ಮ ಸುತ್ತಿನ ಜನಪದ ಕಥನ ಗೀತೆಗಳು, ಪುಟ - ೧೬೦, ಬೆಲೆ-೩೦ರೂ,
ಸಂ. ಜಯಲಕ್ಷ್ಮಿ ಸೀತಾಪುರ

೪. ಲಂಬಾಣಿ ಜನಪದ ಕಥೆಗಳು, ಪುಟ-೧೪೪, ಬೆಲೆ-೨೫ ರೂ.
ಸಂ. ಸೋಮಣ್ಣ ಹೊಂಗಳ್ಳಿ

೫. ಗಾದೆಯ ಕಥೆಗಳು, ಪುಟ- ೯೨, ಬೆಲೆ - ೩೦ ರೂ.
ಸಂ.ಕೃಷ್ಣಪ್ಪ ರೆಡ್ಡಿ

೬. ವಜ್ರ ಚೂಡಾಮಣಿ,ಪುಟ - ೫೬, ಬೆಲೆ - ೧೦ ರೂ.
ಸಂ. ಸಿದ್ದಪ್ಪ ಜಕಬಾಳ

೭. ರಿಚರ್ಡ್ ಎಂ. ಡಾರ್ಸನ್, ಪುಟ - ೫೬, ಬೆಲೆ - ೧೦ರೂ.
ಲೇ. ಡಾ.ಕೆ.ಆರ್. ಸಂಧ್ಯಾರೆಡ್ಡಿ

೮. ಡಾ. ಗೊರೂರು ಜೀವನ - ಸಾಧನೆ, ಪುಟ-೧೪೮, ಬೆಲೆ - ೨೫ರೂ.
ಲೇ. ಡಾ.ಸಿ.ಪಿ. ವೆಂಕಟಯ್ಯ

೯. ಡಾ.ಸಿಂಪಿ ಲಿಂಗಣ್ಣ ಜೀವನ - ಸಾಧನೆ, ಪುಟ- ೭೪, ಬೆಲೆ-೧೦ರೂ.
ಲೇ. ಡಾ.ಎಂ.ಎಸ್. ವಾಲಿ

೧೦. ಕೆರೆಮನೆ ಶಿವರಾಮ ಹೆಗಡೆ, ಪುಟ- ೫೬, ಬೆಲೆ - ೧೨ರೂ.
ಲೇ. ಡಾ. ಜಿ.ಎಸ್. ಭಟ್ಟ

೧೧. ಜಾನಪದ ಗಂಗೋತ್ರಿ - ಮಾರ್ಚ್, ೧೯೯೪

೧೨. ಜಾನಪದ ಗಂಗೋತ್ರಿ - ಜೂನ್, ೧೯೯೪

ಮೇಲಿನ ಎಲ್ಲ ಪುಸ್ತಕಗಳ ಪ್ರಕಾಶಕರು - ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು - ೨

೧೩. ಜಾನಪದ ಸಾಹಿತ್ಯ ದರ್ಶನ (ಜಾನಪದ ಸಮ್ಮೇಳನ ಸ್ಮರಣೆ :೧೨) ಆಕಾಶ ಜಾನಪದ

ಪ್ರಧಾನ ಸಂಪಾದಕರು - ಎಂ.ಎಂ. ಕಲಬುರ್ಗಿ

೧೪. ಜಾನಪದ ಸಾಹಿತ್ಯ ದರ್ಶನ (ಜಾನಪದ ಸಮ್ಮೇಲನ ಸ್ಮರಣೆ :೧೩) ಮೈಲಾರಲಿಂಗ,

ಪ್ರಧಾನ ಸಂಪಾದಕರು - ಡಾ.ಎಂ.ಬಿ. ಕೊಟ್ರಶೆಟ್ಟಿ

ಸಂಪಾದಕರು - ಡಾ. ಸೋಮಶೇಖರ ಇಮ್ರಾಪುರ

೧೫. ಜಾನಪದ ಸಾಹಿತ್ಯ ದರ್ಶನ (ಜಾನಪದ ಸಮ್ಮೇಲನ ಸ್ಮರಣೆ: ೧೫) ಪುರಾಣ-ಐತಿಹ್ಯ - ಪವಾಡ- ದಂತಕಥೆ

ಪ್ರಧಾನ ಸಂಪಾದಕರು - ಡಾ.ಎಸ್.ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು - ಡಾ. ಸೋಮಶೇಖರ ಇಮ್ರಾಪುರ.

೧೬. ಜಾನಪದ ಸಾಹಿತ್ಯ ದರ್ಶನ (ಜಾನಪದ ಸಮ್ಮೇಲನ ಸ್ಮರಣೆ: ೧೬) ತೊಗಲು ಗೊಂಬೆಯಾಟ

ಪ್ರಧಾನ ಸಂಪಾದಕರು - ಡಾ. ವಿಲ್ಯಂ ಮ್ಯಾಡ್ತ

ಸಂಪಾದಕರು - ಡಾ. ಎಸ್.ಜಿ. ಇಮ್ರಾಪುರ

ಮೇಲ್ಕಂಡ ಪುಸ್ತಕಗಳ ಪ್ರಕಾಶಕರು : ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೭. ಮಳೆ - ಒಂದು ಜಾನಪದೀಯ ಅಧ್ಯಯನ. ಪುಟ - ೧೬೪ +೮ ಬೆಲೆ - ೪೫ ರೂ.

ಲೇ.ಡಾ.ಎಸ್.ಪಿ. ಪದ್ಮಪ್ರಸಾದ್

ಪ್ರಕಾಶಕರು : ಸುಂದರ ಪುಸ್ತಕ ಪ್ರಕಾಶನ, ಧಾರವಾಡ

೧೮. ಲಿಂಗ ಮತ್ತು ಕಂತೆ, ಪುಟ ೧೩೨+೧೨, ಬೆಲೆ - ೪೦ರೂ.

ಡಾ. ಸತ್ಯನಾರಾಯಣ ಭಟ್.ಪಿ

ಪ್ರಕಾಶಕರು - ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ -೨ -

೧೯. ಮಲೆನಾಡು ಶೈವ ಒಕ್ಕಲಿಗರು - ಜಾನಪದೀಯ ಅಧ್ಯಯನ, ಪುಟ-೨೨೦, ಬೆಲೆ - ೫೦ರೂ.
ಲೇ. ವೈ.ಸಿ. ಭಾನುಮತಿ
ಕೇಶವ ಪ್ರಕಾಶನ, ಮೈಸೂರು.

೨೦. ಫಣಿಯವರವರ ಸಮಾಜ ಮತ್ತು ಜಾನಪದ ಇತಿಹಾಸ ಪುಟ - ೮೦, ಬೆಲೆ - ೩೨ರೂ.
ಲೇ: ಎನ್.ಪಿ. ಶಂಕರನಾರಾಯಣರಾವ್
ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

೨೧. ಜಾನಪದ ಕೆಲವು ಅಧ್ಯಯನಗಳು - ಪುಟ - ೧೪೮, ಬೆಲೆ - ೩೦ರೂ.
ಲೇ. ಡಾ. ಅಂಬಳಿಕೆ ಹಿರಿಯಣ್ಣ
ಪ್ರಕಾಶಕರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೨. ಜಾನಪದ ಲೋಚನ- ಪುಟ- ೬೧ +೫, ಬೆಲೆ - ೨೫ ರೂ.
ಡಾ. ಅಂಬಳಿಕೆ ಹಿರಿಯಣ್ಣ
ಪ್ರಜ್ವಲ ಪ್ರಕಾಶನ, ಕುವೆಂಪುನಗರ, ಮೈಸೂರು.

೨೩. ಜಾನಪದ ಸೌರಭ - ಪುಟ ೧೦೩ +೫ ಬೆಲೆ - ೩೦ ರೂ.
ಡಾ. ಬಸವರಾಜ ಪೋಲೀಸ್ ಪಾಟೀಲ, ಪುಟ - ೧೦
ಅಮರ ಪ್ರಕಾಶನ, ಗುಲಬರ್ಗಾ

೨೪. ರಾಜ್ಯವನುಳಿಸೀತು ರಾಗೀಯಕಲ್ಲು - ಪುಟ - ೧೪೭, ಬೆಲೆ - ೩೦ರೂ.
ಲೇ. ಬಳ್ಳೇಕೆರೆ ಹನುಮಂತಪ್ಪ
ಕಮಲ ಪ್ರಕಾಶನ, ಶಿವಮೊಗ್ಗ

೨೫. ಜಾನಪದ ಜೀವಾಳ - ಪುಟ ೧೦೧ +೯, ಬೆಲೆ - ೨೫ ರೂ.
ಲೇ. ನಗುವನಹಳ್ಳಿ ಪಿ. ರತ್ನ
ಪ್ರಶಾಂತಿ ಪ್ರಕಾಶನ, ಯಾದವಗಿರಿ, ಮೈಸೂರು.

೨೬. ಜನಪದ ಸಂಸ್ಕೃತಿ; ಬೆಲೆ - ೩೦ ರೂ.
ಮಂಜುನಾಥ ಬೇವಿನಕಟ್ಟಿ
ತೇಜಸ್ವಿ ಪ್ರಕಾಶನ, ಹ್ಯಾರಡ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ

೨೭. ರಾಜಸ್ಥಾನದ ಜಾನಪದ, ಪುಟ - ೧೭೫, ಬೆಲೆ -೩೬ ರೂ.
ಲೇ. ಡಿ.ಆರ್. ಅಹುಜ

ಅನುವಾದಕರು ಡಾ.ಸಿಪಿಕೆ

ನ್ಯಾಶನಲ್ ಬುಕ್‌ಟ್ರಸ್ಟ್ , ನವದೆಹಲಿ

೨೮. ನಮ್ಮ ಜಾನಪದ ಕಥೆಗಳು

ಸಂ : ಡಾ. ಹಿ.ಶಿ. ರಾಮಚಂದ್ರಗೌಡ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೯. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು - ಬೆಲೆ- ೬೦ ರೂ.

ಡಾ.ಎ. ಸುಬ್ಬಣ್ಣ ರೈ

ಪ್ರಕಾಶಕರು - ಮಾಣಿ ಜೂನಿಯರ್ ಚೇಂಬರ್ಸ್, ಮಾಣಿ

೩೦. ಶೀಗಿ ಹಾಡುಗಳು

ಸಂ. ರಾಜೇಂದ್ರ ಯಳನಾಳೆ

ಪ್ರಕಾಶಕರು - ಪೂಜ್ಯ ಶ್ರೀ ಮ.ನಿ.ಪ್ರ. ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀ ಸಿದ್ಧಲಿಂಗೇಶ್ವರ ಸಾಹಿತ್ಯ ಭಂಡಾರ,ವಿರಕ್ತಮಠ, ಕುಶನೂರು,

ಬೀದರ್ ಜಿಲ್ಲೆ

೩೧. ದೇವರಿಗೇ ಶರಣೆನ್ನುವೆನೇ ಪುಟ ೧೯ +೯೪, ಬೆಲೆ - ೩೫ ರೂ.

ಸಂ. ಕಮಲ ಹೆಮ್ಮಿಗೆ

ಪ್ರಭಾ ಪಬ್ಲಿಷರ್ಸ್, ಧಾರವಾಡ

೩೨. ಐದು (ಯಕ್ಷಗಾನ) ಏಕಾಂಕ ಪ್ರಸಂಗಗಳು

ಬಂಡಾರಿ ಆರ್.ವಿ

ಬಂಡಾಯ ಪ್ರಕಾಶನ, ಹೊನ್ನಾವರ

ಪುಟ-೧೯, ಬೆಲೆ-೫ ರೂ.

೩೩. ಯಾರು ಈ ದೊಡ್ಡ ಹನಿಯಪ್ಪ (ಜಾನಪದ ಕಥೆಗಳು)

-ಪಲಕಳ ಸೀತಾರಾಮ ಭಟ್ಟ

ಯುಗ ಪುರುಷ ಪ್ರಕಟಣಾಲಯ, ಕಿನ್ನಗೋಳಿ, ದಕ್ಷಿಣ ಕನ್ನಡ

ಪುಟ-೪೦ +VI , ಬೆಲೆ-೫ ರೂ.

೩೪. ಯಕ್ಷಗಾನ ಘೋರ ಮಾರಕ

ಅಮೃತ ಸೋಮೇಶ್ವರ

ಪ್ರಕೃತಿ ಪ್ರಕಾಶನ, ಕೋಟೆಕಾರು, ದಕ್ಷಿಣ ಕನ್ನಡ

ಪುಟ-೨೪, ಬೆಲೆ-೮ ರೂ.

೩೫. ಲಂಬಾಣಿ ಸಂಸ್ಕೃತಿ

ಡಿ.ಬಿ. ನಾಯಕ

ಕ.ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪುಟ-೪೮ +೧೬೮, ಬೆಲೆ-೧೮

೩೬. ಹುಲ್ಲೆ ಹಾಡು

ಕಲರವ

ಅಂತರಂಗ ಪ್ರಕಾಶನ, ಗೋವಿನ ಕೋಟೆ ಅಂಚೆ, ಹೊನ್ನಾಳಿ

ಪುಟ-೩೨, ಬೆಲೆ-೮ ರೂ.

೩೭. ಜಾನಪದ ಕಲೆ - ಬದುಕು

ಕೆ.ಎಸ್. ಉಪಾಧ್ಯಾಯ

ಕರ್ನಾಟಕ ಸಂಘ, ಪುತ್ತೂರು

ಡೆಮ್ಮಿ ೧/೮, ಪುಟ-೧೩೨, ಬೆಲೆ-೪೫ ರೂ.

"ಜಾನಪದ ವರ್ಷ ೧೯೯೪ ಈ ಕೃತಿಯನ್ನು ನಮ್ಮ ಮಹಿಳಾ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಡಾ|| ಕೆ.ಆರ್. ಸಂಧ್ಯಾ ರೆಡ್ಡಿ ಇವರು ಸಿದ್ಧಪಡಿಸಿದ್ದಾರೆ. ಆಯಾ ವರ್ಷದಲ್ಲಿ ಪ್ರಕಟವಾಗುವ ಪುಸ್ತಕಗಳ ಎಲ್ಲ ಮಾಹಿತಿಯ ಕೊರತೆ ಇರುವ ಸಂದರ್ಭದಲ್ಲೂ ೯೪ರಲ್ಲಿ ಪ್ರಕಟವಾಗಿರುವ ಜಾನಪದ ಕೃತಿಗಳ ಒಟ್ಟಾರೆ ಸಮೀಕ್ಷೆಯನ್ನು ಈ ಮೂಲಕ ಅವರು ಪ್ರಸ್ತುತಪಡಿಸಿದ್ದಾರೆ. ೯೪ರಲ್ಲಿ ಪ್ರಕಟವಾಗಿರುವ ಎಲ್ಲ ಕೃತಿಗಳ ಮಾಹಿತಿ ಇಲ್ಲಿ ಲಭ್ಯವಾಗಿದೆ ಎಂದು ಹೇಳಲಾಗದಿದ್ದರೂ ಮುಖ್ಯ ಕೃತಿಗಳನ್ನಾದರೂ ಪರಿಚಯಿಸುವ, ವಿಮರ್ಶಿಸುವ, ಪ್ರಾಮಾಣಿಕ ಪ್ರಯತ್ನವನ್ನು ಡಾ|| ಸಂಧ್ಯಾ ರೆಡ್ಡಿ ಈ ಮೂಲಕ ಮಾಡಿದ್ದಾರೆ. ಅವರ ಈ ಪ್ರಥಮ ಪ್ರಯತ್ನದಲ್ಲಿ ಅವರ ಪ್ರಾಮಾಣಿಕ ಆಸಕ್ತಿ, ವಿಸ್ತಾರವಾದ ಓದು, ನಿಷ್ಪಕ್ಷಪಾತವಾದ ಸಮೀಕ್ಷಾಕೌಶಲ್ಯ ಮತ್ತು ಜಾನಪದದ ಬಗೆಗಿನ ಆಳವಾದ ಅರಿವು ಎದ್ದು ಕಾಣುತ್ತದೆ...."

ಡಾ|| ಎಚ್. ಜೆ. ಲಕ್ಕಪ್ಪಗೌಡ